ಶ್ರೀ ರಾಘವೇಂದ್ರತೀರ್ಥ ವಿರಚಿತ

ತತ್ವಸಂಖ್ಯಾನ



Rarest Archiver

ಶ್ರೀಸುಯಮೀರಾಘವೇಂದ್ರ
ಪ್ರಕಾಶನ ಸಂಖ್ಯೆ - 32

ಶ್ರೀಸುಶೀಲೇಂದ್ರವಿಜಯಮಾಲಾ
ಸಂಖ್ಯೆ - 22

ಕಮಲೇಶ ಕುಸುಮ - 12

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ತತ್ತ್ವಸಂಖ್ಯಾನಮ್

ಶ್ರೀಮಜ್ಜಯತೀರ್ಥವಿರಚಿತ'ವಿವರಣ'ಟೀಕಯಾ ತಥಾ
ಶ್ರೀಮದ್ರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತ
'ಭಾವದೀಪ'ಟಿಪ್ಪಣ್ಯಾ ಸಮಲಂಕೃತಮ್

ಅನುವಾದಕರು :
ಸಾರಸ್ವತಕುಲಾವತಂಸ
ವಿದ್ವಾನ್ ರಿತ್ತಿ ವೇಂಕಣ್ಣಾಚಾರ್ಯ

ಪ್ರಕಾಶಕರು :
ಶ್ರೀಸುಯಮೀರಾಘವೇಂದ್ರ ಸಂಶೋಧನ ಕೇಂದ್ರ
ನಂಜನಗೂಡು - ಬೆಂಗಳೂರು

2010

Rarest Archiver

Rarest Archive

॥ ಶ್ರೀಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಹಂಸನಾಮಕ ಪರಮಾತ್ಮಪ್ರವರ್ತಿತ ಜ್ಞಾನಪೀಠಾಧ್ಯಕ್ಷರಾದ
ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನಾಧೀಶ್ವರರಾದ
ಶ್ರೀರಾಘವೇಂದ್ರಸ್ವಾಮಿಗಳವರ ಮಠದ ದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ 108 ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರ
ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ 108 ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ
ವರಕುಮಾರಕರಾದ

ಪರಮಪೂಜ್ಯ ಶ್ರೀ 108 ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರ

75 ನೇ ವರ್ಷದ ವರ್ಧಂತ್ಯುತ್ಸವದ ಸವಿನೆನಪಿಗಾಗಿ ಪ್ರಕಾಶಿಸಲ್ಪಟ್ಟ

ಶ್ರೀಗುರುರಾಜರ ಗ್ರಂಥರತ್ನ

॥ ಜೀಯಾತ್ ಶ್ರೀಸುಯತೀಂದ್ರತೀರ್ಥಸಂಯಮಿಮಣೇ ವೇದಾಂತರಾಜ್ಯೇ ಚಿರಮ್ ॥

Rarest Archiver

Rarest Archiver

॥ ಶ್ರೀಃ ॥

॥ ಶ್ರೀ ಮೂಲರಾಮೋ ವಿಜಯತೇ ॥

॥ ಶ್ರೀ ಗುರುರಾಜೋ ವಿಜಯತೇ ॥

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ತತ್ತ್ವಸಂಖ್ಯಾನಮ್

ಶ್ರೀಮಜ್ಜಯತೀರ್ಥವಿರಚಿತ'ವಿವರಣ'ಟೀಕಯಾ ತಥಾ
ಶ್ರೀಮದ್ರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತ
'ಭಾವದೀಪ'ಟಿಪ್ಪಣ್ಯಾ ಸಮಲಂಕೃತಮ್

ಕನ್ನಡಭಾಷಾನುವಾದಸಹಿತಮ್

ಮೂಲಮ್—

ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ತ್ವಮಿಷ್ಯತೇ ।
ಸ್ವತಂತ್ರೋ ಭಗವಾನ್ ವಿಷ್ಣುಃ ಭಾವಾಭಾವೌ ದ್ವಿಧೇತರತ್ ॥ 1 ॥

ಟೀಕಾ—

॥ ಹರಿಃ ಓಂ ॥

ಲಕ್ಷ್ಮೀಪತೇಃ ಪದಾಂಭೋಜಯುಗಂ ನತ್ವಾ ಗುರೋರಪಿ ।
ಕರಿಷ್ಯೇ ತತ್ತ್ವಸಂಖ್ಯಾನವ್ಯಾಖ್ಯಾನಂ ನಾತಿವಿಸ್ತರಮ್ ॥ 1 ॥

ಲಕ್ಷ್ಮೀದೇವಿಗೊಡೆಯನಾದ ಶ್ರೀನಾರಾಯಣನ ಪಾದಕಮಲಗಳನ್ನೂ, ಗುರುಗಳಾದ ಶ್ರೀಮದಾಚಾರ್ಯರ ಪಾದಕಮಲಗಳನ್ನೂ, ವಂದಿಸಿ ತತ್ತ್ವಸಂಖ್ಯಾನ ಪ್ರಕರಣಗ್ರಂಥಕ್ಕೆ ಅತಿವಿಸ್ತಾರವಲ್ಲದ ವ್ಯಾಖ್ಯಾನವನ್ನು ರಚಿಸುವೆನು.

ಭಾವದೀಪ—

॥ ಹರಿಃ ಓಂ ॥

ಪ್ರಣಮ್ಯಾಗಣ್ಯಕಲ್ಯಾಣಗುಣಂ ಶ್ರೀಪ್ರಾಣನಾಯಕಮ್ ।
ವಿವೃಣೋಮಿ ಯಥಾಬೋಧಂ ತತ್ತ್ವಸಂಖ್ಯಾನಪಂಚಿಕಾಮ್ ॥ 1 ॥

Rarest Archiver

''ಅಪರಿಮಿತವೂ ಮಂಗಳಕರವೂ ಆದ ಗುಣಗಳಿಂದ ಪರಿಪೂರ್ಣನೂ ಶ್ರೀರಮಾದೇವಿ, ವಾಯುದೇವರಿಗೆ ಪ್ರಭುವೂ ಆದ ಶ್ರೀಮನ್ನಾರಾಯಣದೇವರಿಗೆ ನಮಸ್ಕರಿಸುವೆನು ಮತ್ತು ಶಿಷ್ಯರ ತಿಳುವಳಿಕೆಗೆ ಯೋಗ್ಯವಾಗುವಂತೆ ತತ್ತ್ವಸಂಖ್ಯಾನಟೀಕೆಗೆ ಟಿಪ್ಪಣಿಯನ್ನು ವಿವರಿಸುವೆನು''.

ಗ್ರಂಥಾದೌ ದೇವತಾಗುರುನತಿರೂಪಮಂಗಲಮಾಚರನ್ ಚಿಕೀರ್ಷಿತಂ ಪ್ರತಿಜಾನೀತೇ ಲಕ್ಷ್ಮೀಪತೇರಿತಿ ॥

ಶ್ರೀಮಟ್ಟೀಕಾರಾಯರು ಗ್ರಂಥಾದಿಯಲ್ಲಿ ದೇವತಾ-ಗುರು-ನಮಸ್ಕಾರ ರೂಪದ ಮಂಗಳವನ್ನು ಮಾಡಿ ತಮ್ಮ ಕರ್ತವ್ಯದ ಇಚ್ಛೆಯನ್ನೂ ಪ್ರತಿಜ್ಞೆಯನ್ನೂ ವ್ಯಕ್ತಗೊಳಿಸಿದ್ದಾರೆ.

ಲಕ್ಷ್ಮೀಪತೇರಿತಿ— ಲಕ್ಷ್ಮೀದೇವಿಗೊಡೆಯನಾದ ನಾರಾಯಣನ ಪಾದಕಮಲಗಳನ್ನೂ ಗುರು ಶ್ರೀಮಧ್ವರ ಪಾದಕಮಲಗಳನ್ನೂ ವಂದಿಸಿ ತತ್ತ್ವಸಂಖ್ಯಾನ ಪ್ರಕರಣಕ್ಕೆ ಅತಿವಿಸ್ತಾರವಲ್ಲದ ವ್ಯಾಖ್ಯಾನವನ್ನು ರಚಿಸುವೆನು.

ಏತೇನ ಸಕಲವಾಙ್ಮನಸದೇವತಾಯಾ ದೇವ್ಯಾ ಅಪಿ ಭಗವದುಪಸರ್ಜನತಯಾ ನತಿರುಕ್ತಾ ಭವತಿ । ವಿಶಿಷ್ಟವಿಷಯಕ್ರಿಯಾಯಾಃ ವಿಶೇಷಣೇಽಪಿ ದಂಡಿನಮಾನಯೇತ್ಯಾದಾವನ್ವಯದರ್ಶನಾತ್ । (ವಿದ್ಯಾರಂಭಸಮಯೇ ದೇವತಾವಂದನವತ್ ಗುರುವಂದನಸ್ಯಾಪಿ ಕರ್ತವ್ಯತ್ವಾದಾಹ ಗುರೋರಪೀತಿ ॥) ಗುರೋರಪಿ ಪದಾಂಭೋಜಯುಗಂ ನತ್ವೇತ್ಯನ್ವಯಃ । ಶಿಷ್ಯಮನಃಸಮಾಧಾನಾಯಾಹ ನಾತಿವಿಸ್ತರಮಿತಿ ॥ ನ ವಿದ್ಯತೇಽತಿವಿಸ್ತರೋ ಯಸ್ಮಿನ ತದ್ವ್ಯಾಖ್ಯಾನಂ ಕರಿಷ್ಯ ಇತ್ಯನ್ವಯಃ । ಪ್ರಥನೇ ವಾವಶಬ್ದ ಇತಿ ಸೂತ್ರೇ ಶಬ್ದವಿಷಯವಿಸ್ತೃತಿವಿವಕ್ಷಾಯಾಂ ಸ್ತೃಧಾತೋಃ ಘಞ್ ನ ಭವತಿ । ಋದೋರಬಿತ್ಯಪ್ರತ್ಯಯ ಏವ ಭವತೀತ್ಯುಕ್ತ್ಯಾ ಶಬ್ದಬಾಹುಲ್ಯಹೀನಮರ್ಥಬಾಹುಲ್ಯೋಪೇತಮಿತಿ ಭಾವಃ ।

ಇದರಿಂದ ಸಕಲ ವಾಕ್ಕು - ಮನಸ್ಸು ಇವುಗಳಿಗೆ ಅಧಿದೇವತೆಯಾದ ರಮಾದೇವಿಗೂ ಸಹ ನಮಸ್ಕಾರ ಮಾಡಿದಂತಾಯಿತು. ಶ್ರೀರಮಾದೇವಿಯು ನಾರಾಯಣನಿಗೆ ಸದಾ ಅಧೀನಳು. ನಿತ್ಯಾವಿಯೋಗಿನಿಯು. ಆದುದರಿಂದ ನಾರಾಯಣನಿಗೆ ಮಾಡಿದ ವಂದನೆಯು ಅವಳಿಗೂ ಸಲ್ಲುತ್ತದೆ. ಹೇಗೆಂದರೆ, ''ವಿಶಿಷ್ಟ ವಿಷಯದ ಕ್ರಿಯೆಯು ವಿಶೇಷಣಕ್ಕೂ ಅನ್ವಯಿಸುವುದು'' ಎಂಬ ನಿಯಮವಿದೆ. ಉದಾಹರಣೆ— ದಂಡಿಯನ್ನು ಕರೆದುಕೊಂಡು ಬಾ ಎಂಬಲ್ಲಿ ದಂಡವಿಶಿಷ್ಟ ಪುರುಷನನ್ನು ಕರೆತರುವಾಗ ವಿಶೇಷಣವಾದ ದಂಡವೂ ಅವನೊಡನೆ ಬರುತ್ತದೆ. ಆನಯನರೂಪ ಕ್ರಿಯೆಯಲ್ಲಿ ದಂಡಿಯೊಡನೆ ದಂಡವೂ ಸಹ ಅನ್ವಯಿಸುವಂತೆ ಇಲ್ಲಿ ಶ್ರೀನಾರಾಯಣನ ನಮನ ಕ್ರಿಯೆಯು ಅವನಿಗೆ ವಿಶೇಷಣಳಾದ ರಮಾದೇವಿಗೂ ಸಹ ಅನ್ವಯಿಸುವುದರಿಂದ ಆ ವಂದನೆಯು ಅವಳಿಗೂ ಸಲ್ಲುವುದು.

ಶ್ರೀರಮಾದೇವಿಗೆ ಪ್ರತ್ಯೇಕ ವಂದನೆ ಯುಕ್ತವಲ್ಲ

ಶ್ರೀಮದಾಚಾರ್ಯರು ಈ ಪ್ರಮೇಯವನ್ನು ಭಗವದ್ಗೀತಾಭಾಷ್ಯದ ಹನ್ನೆರಡನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ''ಕ್ಲೇಶೋಧಿಕತರಸ್ತೇಷಾಂ ಅವ್ಯಕ್ತಾಸಕ್ತಚೇತಸಾಂ'' ಎಂಬುದು ಇದಕ್ಕೆ ಪ್ರಮಾಣ. ರಮಾದೇವಿಯನ್ನು ಪ್ರತ್ಯೇಕವಾಗಿ ಧ್ಯಾನಿಸುವ ಉಪಾಸಕರಿಗೆ ಅತ್ಯಂತ ಕ್ಲೇಶವಾಗುವುದು. ಹಾಗಾದರೆ ಹೇಗೆ ಉಪಾಸಿಸಬೇಕು ? ''ಪರಿವಾರತಯಾ ಗ್ರಾಹ್ಯಾ ಅಪಿ ಹೇಯಾ ಪ್ರಧಾನತಃ'' ಎಂಬ ಪ್ರಮಾಣಾನುಸಾರ ರಮಾದೇವಿಯು ನಾರಾಯಣನ ಪತ್ನಿಯೆಂದು ತಿಳಿದು ಉಪಾಸಿಸಬೇಕೇ ಹೊರತು ಮುಖ್ಯಳು ಎಂದಲ್ಲ ಎಂದು ಹೇಳಿದ್ದಾರೆ. ಆದುದರಿಂದ ಸ್ವತಂತ್ರವಾಗಿಯೂ ಪ್ರತ್ಯೇಕವಾಗಿಯೂ ಶ್ರೀರಮಾದೇವಿಗೆ ವಂದನೆ ಮಾಡುವುದಲ್ಲವೆಂದು ತಿಳಿಸಿ ಪರಮಾತ್ಮನಿಗೆ ಅಧೀನಳೆಂದು ತಿಳಿದು ವಂದನೆ ಮಾಡಬೇಕೆಂಬುದನ್ನು ವಿಧಾನ ಮಾಡಿದ್ದಾರೆ.

Rarest Archive

ಗುರೋರಪೀತಿ— ವಿದ್ಯಾರಂಭ ಸಮಯದಲ್ಲಿ ದೇವರಿಗೆ ವಂದಿಸುವಂತೆ ಗುರುಗಳಿಗೆ ವಂದಿಸುವುದೂ ಅವಶ್ಯ ಕರ್ತವ್ಯ, ಗುರುಗಳ ಪಾದಕಮಲಗಳನ್ನೂ ಸಹ ವಂದಿಸಿ ಎಂದು ಅನ್ವಯಿಸಿಕೊಳ್ಳಬೇಕು.

ನಾತಿವಿಸ್ತರಮಿತಿ— ಶಿಷ್ಯರ ಮನಸ್ಸಿನ ಸಮಾಧಾನಕ್ಕಾಗಿ ಇದನ್ನು ಹೇಳಲಾಗಿದೆ. ಯಾವ ವ್ಯಾಖ್ಯಾನದಲ್ಲಿ ಅತಿವಿಸ್ತಾರವಿಲ್ಲವೋ ಅದಕ್ಕೆ ಅನತಿವಿಸ್ತರ ವ್ಯಾಖ್ಯಾನವೆಂದು ಹೆಸರು. ಅಂತಹ ವ್ಯಾಖ್ಯಾನವನ್ನು ರಚಿಸುವೆನು ಎಂದು ಅನ್ವಯಿಸಿಕೊಳ್ಳಬೇಕು.

ಈ ವ್ಯಾಖ್ಯಾನದಲ್ಲಿ ಶಬ್ದಗಳ ವಿಸ್ತಾರವಿಲ್ಲದಿದ್ದರೂ ಅರ್ಥಗಳ ವಿಸ್ತಾರವಿದ್ದೇ ಇದೆ ಎಂಬುದನ್ನು ಶಾಬ್ದಿಕರ ವಿವರಣೆಯ ಪ್ರಕಾರ ತಿಳಿಸುತ್ತಾರೆ.

''ಪ್ರಥನೇವಾವ ಶಬ್ದೇ'' ಎಂಬುದು ಪಾಣಿನೀಯಸೂತ್ರ. ಅದಕ್ಕೆ ಶಬ್ದವನ್ನು ವಿಸ್ತಾರಗೊಳಿಸುವುದು ಎಂಬ ಅರ್ಥವನ್ನು ಇಟ್ಟುಕೊಂಡರೆ ''ಸ್ತೃ'' ಧಾತುವಿಗೆ ''ಘಞ್'' ಪ್ರತ್ಯಯವು ಹತ್ತುವುದಿಲ್ಲ. ಇದನ್ನೇ ''ಋದೋರಬಿ-ತ್ಯಪ್ರತ್ಯಯ ಏವ ಭವತಿ'' ಎಂಬುದರಿಂದ ಸ್ಪಷ್ಟಗೊಳಿಸಿದ್ದಾರೆ. ಋದಂತ ಧಾತುವಿಗೆ ಶಬ್ದವಿಸ್ತಾರ ಎಂಬ ಅರ್ಥ ಇಟ್ಟುಕೊಂಡರೆ ''ಘಞ್'' ಪ್ರತ್ಯಯವು ಹತ್ತುವುದಿಲ್ಲ, ಆದುದರಿಂದ ಅರ್ಥವಿಸ್ತಾರ ಎಂಬ ಅರ್ಥವನ್ನು ಇಟ್ಟು-ಕೊಳ್ಳಬೇಕು ಎಂಬುದು ಈ ಮೇಲಿನ ಸೂತ್ರದ ಅರ್ಥ. ತಾತ್ಪರ್ಯದಲ್ಲಿ ಈ ವ್ಯಾಖ್ಯಾನದಲ್ಲಿ ಹೆಚ್ಚು ಶಬ್ದಗಳ ವಿಸ್ತಾರವಿಲ್ಲದೆ ಗಂಭೀರಾರ್ಥಗಳ ವಿಸ್ತಾರವು ನೆಲೆಗೊಂಡಿದೆ ಎಂದು ಫಲಿತವಾಯಿತು.

ಟೀಕಾ—

''ಮುಮುಕ್ಷುಣಾ ಖಲು ಪರಮಾತ್ಮಾ ಜಗದುದಯಾದಿನಿಮಿತ್ತತ್ವೇನ ಅವಶ್ಯಮವಗಂತವ್ಯಃ'' ಇತಿ ಸಕಲ-ಸಚ್ಛಾಸ್ತ್ರಾಣಾಮವಿಪ್ರತಿಪನ್ನೋಽರ್ಥಃ । ಇದಂ ಚ ಅವಾಂತರಭೇದಭಿನ್ನಸ್ಯ ಜಗತೋ ವಿಜ್ಞಾನಮಪೇಕ್ಷತ ಇತಿ ಜಗದಪಿ ತಥಾಽವಗಂತವ್ಯಮ್ । ತದಿದಂ ಪ್ರಧಾನಾಂಗಭೂತಂ ತತ್ತ್ವದ್ವಯಂ ಶಾಸ್ತ್ರೇ ವಿಕ್ಷಿಪ್ಯ ಪ್ರತಿಪಾದಿತಂ ಶಿಷ್ಯಹಿತತಯಾ ಸಂಗೃಹ್ಯ ಪ್ರತಿಪಾದಯಿತುಂ ಪ್ರಕರಣಮಿದಮಾರಭತೇ ಭಗವಾನಾಚಾರ್ಯಃ ।

ಅವತರಣಿಕೆ

ಮೋಕ್ಷ ಬಯಸುವ ಸುಜೀವನು ಪರಮಾತ್ಮನನ್ನು ಜಗತ್ಕರ್ತನೆಂತಲೂ, ಜಗದ್ರಕ್ಷಕನೆಂತಲೂ, ತನ್ನಿಯಾಮಕ-ನೆಂತಲೂ, ಲಯಕರ್ತನೆಂತಲೂ, ಜ್ಞಾನ, ಅಜ್ಞಾನದಾತನೆಂತಲೂ, ಮೋಕ್ಷದಾಯಕನೆಂತಲೂ, ಅವಶ್ಯವಾಗಿ ತಿಳಿದು-ಕೊಳ್ಳಬೇಕು. ಇದು ಸಕಲ ಸಚ್ಛಾಸ್ತ್ರಗಳಲ್ಲಿನ ಸಂದೇಹವಿಲ್ಲದ ಅರ್ಥ. ಪರಮಾತ್ಮ ತತ್ತ್ವಜ್ಞಾನದಂತೆಯೇ ಜಗತ್ತಿನ ತತ್ತ್ವಜ್ಞಾನವೂ ಕೂಡ ಮುಕ್ತಿಗೆ ಸಾಧನ. ಜಗತ್ತಿನ ತತ್ತ್ವವು ಅನೇಕ ಮಹಾಪ್ರಭೇದಗಳಿಂದಲೂ ಅನೇಕ ಒಳ-ಪ್ರಭೇದಗಳಿಂದಲೂ ವಿಭಾಗಗೊಂಡಿದೆ. ಇಂತಹ ಜಗತ್ತತ್ತ್ವವು ಪರಮಾತ್ಮತತ್ತ್ವಕ್ಕೆ ಸರ್ವಾತ್ಮನಾ ಅಧೀನವಾದ-ದ್ದೆಂದು ಅರಿತುಕೊಳ್ಳಬೇಕು. ಆದುದರಿಂದ ಪ್ರಧಾನವಾದ ಭಗವತ್ತತ್ತ್ವವನ್ನೂ ಅಂಗವಾದ ಜಗತ್ತತ್ತ್ವವನ್ನೂ ಶಾಸ್ತ್ರದಲ್ಲಿ ಸೇರಿಸಿ ಪ್ರತಿಪಾದಿಸಲಾಗಿದೆ. ಶ್ರೀಮದಾಚಾರ್ಯರು ಆ ಎರಡು ತತ್ತ್ವಗಳನ್ನು ಸಂಗ್ರಹಿಸಿ ಶಿಷ್ಯರ ಶ್ರೇಯಸ್ಸಿಗಾಗಿ ಪ್ರತಿಪಾದಿಸಲು ''ತತ್ತ್ವಸಂಖ್ಯಾನ''ವೆಂಬ ಈ ಪ್ರಕರಣಗ್ರಂಥವನ್ನು ಆರಂಭಿಸುತ್ತಿದ್ದಾರೆ.

ಭಾವದೀಪ—

ನನು ಸ್ವವ್ಯಾಖ್ಯೇಯತತ್ತ್ವಸಂಖ್ಯಾನಸ್ಯ ಫಲಾಭಾವಾತ್ ಪ್ರೇಕ್ಷಾವದನುಪಾದೇಯತ್ವಮಿತಿ ಶಂಕಾವಾರಣಾಯ ಪ್ರಯೋಜನಮಾಹ ಮುಮುಕ್ಷುಣೇತಿ ॥ ಬ್ರಹ್ಮಜ್ಞಾನಾದೇವ ಮುಕ್ತಿಸಿದ್ಧ್ಯಾ ಜಗತ್ತತ್ತ್ವೋಕ್ತಿರ್ವ್ಯರ್ಥಾ । ಶಾಸ್ತ್ರೇ

Rarest Archive

ತತ್ತ್ವಾನಾಮುಕ್ತತ್ವಾಚ್ಚ ಏತದಾರಂಭೋ ವ್ಯರ್ಥ ಇತ್ಯತ ಆಹ ಮುಮುಕ್ಷುಣೇತಿ ॥ ಜಗದುದಯಾದಿನಿಮಿತ್ತತ್ವೇನೇತಿ । ಚೇತನಾಚೇತನಾತ್ಮಕವಿಶ್ವೋತ್ಪತ್ತಿಸ್ಥಿತಿಲಯಾದಿಕರ್ತೃತ್ವೇನೇತ್ಯರ್ಥಃ । ನಾನ್ಯಃ ಪಂಥಾ ಅಯನಾಯ ವಿದ್ಯತ ಇತ್ಯಾದಿನಾ ಮುಕ್ತೇರುಪಾಯಾಂತರಸ್ಯ ನಿಷೇಧಾದವಶ್ಯಮಿತ್ಯುಕ್ತಮ್ । ತಮೇವಂ ವಿದ್ವಾನಮೃತ ಇತ್ಯಾದೌ ಏವಂ ತಸ್ಮಾದ್ವಿರಾಳ-ಜಾಯತೇತ್ಯಾದಿನೋಕ್ತಜಗಜ್ಜನ್ಮಾದಿಕರ್ತೃತ್ವಾದಿಪ್ರಕಾರೇಣ ವಿದ್ವಾನೇವಾಮೃತಃ ।

ಸೃಷ್ಟಿರಕ್ಷಾಹೃತಿಜ್ಞಾನನಿಯತ್ಯಜ್ಞಾನಬಂಧನಾನ್ ।
ಮೋಕ್ಷಂ ಚ ವಿಷ್ಣುತಶ್ಚೈವ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥ —(ತಾ.ನಿ.)

ಇತ್ಯಾದಿ ವಚನಪ್ರಸಿದ್ಧಿದ್ಯೋತನಾಯ ಅವಗಂತವ್ಯಃ ಖಲ್ವಿತ್ಯುಕ್ತಮ್ ॥

ಸಕಲಸಚ್ಛಾಸ್ತ್ರಾಣಾಮಿತಿ ॥

ಋಗ್ಯಜುಸ್ಸಾಮಾಥರ್ವಾಶ್ಚ ಭಾರತಂ ಪಂಚರಾತ್ರಕಮ್ ।
ಮೂಲರಾಮಾಯಣಂ ಚೈವ ಶಾಸ್ತ್ರಮಿತ್ಯಭಿಧೀಯತೇ ॥ —ಸ್ಕಾಂದೇ ॥

ಇತ್ಯುಕ್ತಋಗಾದಿಶಾಸ್ತ್ರಾಣಾಮುಕ್ತರೂಪಪರಮಾತ್ಮಜ್ಞಾನದ್ವಾರಾ ಪ್ರಾಣಿನಾಂ ಮುಖ್ಯಾರ್ಥೇ ಪ್ರವೃತ್ತತ್ವಸ್ಯ "ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತ" ಇತ್ಯಾದೌ ಶ್ರವಣಾತ್ ಅವಿಪ್ರತಿಪನ್ನೋಽರ್ಥ ಇತ್ಯುಕ್ತಮ್ । ಅಸ್ತ್ವೇವಂ ತತಃ ಕಿಮಿತ್ಯತ ಆಹ ಇದಂ ಚೇತಿ ॥ ಉಕ್ತರೂಪೇಣ ಪರಮಾತ್ಮಜ್ಞಾನಂ ಚೇತ್ಯರ್ಥಃ । ಪರಮಾತ್ಮನಾ ಕ್ರಿಯ-ಮಾಣಾ ಜಗತೋ ಜನ್ಮಾದಯೋ ವ್ಯಾಪಾರಾ ಬಹವಃ । ತತ್ರ ಚೇತನೇಷು ಯೋಗ್ಯಾನಾಂ ಜ್ಞಾನಭಕ್ತ್ಯಾದಿದಾನಮ್ । ಜ್ಞಾನಾದಿಮತಾಂ ಮೋಕ್ಷದಾನಮ್ । ಮುಕ್ತಾನಾಂ ಸೌಖ್ಯದಾನಮ್ । ಅಯೋಗ್ಯಾನಾಂ ಮಿಥ್ಯಾಜ್ಞಾನದ್ವೇಷಾದಿ-ದಾನಮ್ । ತದ್ಯೋಗ್ಯಮುಕ್ತಿದಾನಮ್ । ದುಃಖಭಯಾದಿದಾನಮ್ । ಮಿಶ್ರಾಣಾಂ ಸುಖದುಃಖಾದ್ಯುಭಯದಾನಮ್ । ಜಡೇಷು ಭಾವಕಾರ್ಯಪದಾರ್ಥಾನಾಂ ವೃದ್ಧಿಕ್ಷಯಾದಿದಾನಮ್ । ಅಭಾವೇಷು ಪ್ರಾಗಭಾವಸ್ಯ ನಾಶದಾನಮ್ । ಧ್ವಂಸಸ್ಯ ಜನ್ಮದಾನಮ್ । ತ್ರೈಕಾಲಿಕಾಭಾವಸ್ಯ ಶಶ್ವದೇಕಪ್ರಕಾರತಾದಾನಮಿತ್ಯಾದಯಃ । ಚೇತನಾಚೇತನಭಾವಾಭಾವಾ-ದ್ಯವಾಂತರಭೇದೋಪೇತನಾನಾಚೇತನಾದಿಸಮುದಾಯರೂಪಜಗತೋ ಜ್ಞಾನಂ ವಿನಾ ಜಗದುದಯಾದಿಕರ್ತಾ ಹರಿ-ರಿತಿ ಜ್ಞಾನಾಸಂಭವಾತ್ ಅವಾಂತರಾನೇಕೇತ್ಯಾದ್ಯುಕ್ತಮ್ ತಥೇತಿ । ಅವಾಂತರಾನೇಕಭೇದಭಿನ್ನತ್ವೇನೇತ್ಯರ್ಥಃ । ಭಗವ-ದವತಾರಕಪಿಲಾದಿಕೃತಸಾಂಖ್ಯತತ್ತ್ವವಿವೇಕಪಂಚರಾತ್ರಾದಿಶಾಸ್ತ್ರಾದೇವ ಅಸ್ತು ತದ್ ಜ್ಞಾನಮಿತ್ಯತೋ ವಾ ಸ್ವೋತ್ಪ್ರೇಕ್ಷಿತ-ಮಮೂಲಮಿದಂ ತತ್ತ್ವಸಂಖ್ಯಾನಂ ಕಿಮರ್ಥಮುಚ್ಯತ ಇತ್ಯತೋ ವಾ ವಿಷಯಾದಿಮತ್ತ್ವಪ್ರದರ್ಶನಾಯ ವಾಽಽಹ ತದಿದಮಿತಿ । ಪರಮಾತ್ಮಜಗದಾಖ್ಯತತ್ತ್ವದ್ವಯಮಿತ್ಯರ್ಥಃ । ತಥೈವ ವಾಚ್ಯೇ ಪ್ರಧಾನಾಂಗಭೂತೇತ್ಯುಕ್ತಿಃ ದ್ವಯೋಃ ಸಾಮ್ಯವ್ಯುದಾಸಾಯ । ಸಂಗೃಹ್ಯ (ಪ್ರತಿಪಾದ)ವ್ಯತ್ವಾದಯಿತುಮಿತಿ । ಏತೇನಾಸ್ಯ ಶಾಸ್ತ್ರವಿಷಯಾದಿನೈವ ವಿಷಯಾದಿ-ಮತ್ತ್ವಾ ಸಿದ್ಧೇತ್ಯುಕ್ತಂ ಭವತಿ । ಪರಾಪರತತ್ತ್ವೇ ಪ್ರಧಾನಾಂಗಭಾವೇನ ವಿಷಯಃ । ತದ್ ಜ್ಞಾನದ್ವಾರಾ ಮುಕ್ತಿಃ ಫಲಮ್ । ಯಥಾಯೋಗಂ ಸಂಬಂಧ ಇತಿ ॥

ಮುಮುಕ್ಷುಣೇತಿ— ಮೂಲಗ್ರಂಥವಾದ ತತ್ತ್ವಸಂಖ್ಯಾನಕ್ಕೆ ಪ್ರಯೋಜನವಿಲ್ಲ. ಅದನ್ನು ಪ್ರೇಕ್ಷಾವಂತರು ಆದರದಿಂದ ಸ್ವೀಕರಿಸಲಾರರು ಎಂಬ ಶಂಕೆಯನ್ನು ಪರಿಹರಿಸಿ ಅದಕ್ಕೆ ಇಲ್ಲಿ ಪ್ರಯೋಜನವನ್ನು ಹೇಳಿದ್ದಾರೆ. ಅದೆಂದರೆ, ಜಗತ್ತಿನ ತತ್ತ್ವವನ್ನು ಹೇಳುವುದು ವ್ಯರ್ಥ. ಏಕೆಂದರೆ, ಬ್ರಹ್ಮಜ್ಞಾನದಿಂದಲೇ ಮುಕ್ತಿಯು ಲಭಿಸುತ್ತದೆ. ತತ್ತ್ವಗಳನ್ನು ಶಾಸ್ತ್ರದಲ್ಲಿ ಹೇಳಿದ್ದಾಗಿದೆ. ಆದುದರಿಂದ ಈ ಪ್ರಕರಣವನ್ನು ಆರಂಭಿಸುವುದು ವ್ಯರ್ಥ ಎಂಬುದು ಮತ್ತೊಂದು ಆಶಂಕೆ. ಅದನ್ನು 'ಮುಮುಕ್ಷುಣಾ' ಎಂಬುದರಿಂದ ಪರಿಹರಿಸಿದ್ದಾರೆ.

Rarest Archiver

ಜಗದುದಯಾದಿನಿಮಿತ್ತತ್ವೇನೇತಿ— ವಿಶ್ವವು ಚೇತನವೆಂತಲೂ ಅಚೇತನವೆಂತಲೂ ಎರಡು ವಿಧ. ಇಂತಹ ವಿಶ್ವದ ಉತ್ಪತ್ತಿ, ಸ್ಥಿತಿ, ಲಯ ಮುಂತಾದವನ್ನು ಪರಮಾತ್ಮನು ಮಾಡುತ್ತಾನೆ ಇತ್ಯಾದಿಯಾಗಿ ತಿಳಿದುಕೊಳ್ಳಬೇಕು ಎಂದರ್ಥ. ಹೀಗೆ ಪರಮಾತ್ಮನನ್ನು ತಿಳಿದವನಿಗೆ ಮುಕ್ತಿ ದೊರಕುತ್ತದೆ. ಇದನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ. ಹೀಗೆ ಮುಕ್ತಿಗೆ ಉಪಾಯಾಂತರವಿಲ್ಲವೆಂದು ನಿಷೇಧಿಸಿರುವುದರಿಂದ ಟೀಕೆಯಲ್ಲಿ ಅವಶ್ಯಂ ಎಂದು ಹೇಳಿದ್ದಾರೆ. ಮತ್ತು ''ಅವಗಂತವ್ಯಃ, ಖಲು'' ಎಂದು ಹೇಳಿರುವುದು ಏಕೆಂದರೆ, ''ತಮೇವಂ ವಿದ್ವಾನಮೃತಃ, ತಸ್ಮಾದ್ವಿರಾಡಜಾಯತ'' ಮುಂತಾದ ಶ್ರುತಿಗಳಿಗೆ ಪರಮಾತ್ಮನು ಜಗತ್ತಿನ ಉತ್ಪತ್ಯಾದಿಗಳಿಗೆ ಕರ್ತನು ಎಂದು ಹೇಳಲಾಗಿದೆ. ಇದೇ ಪ್ರಕಾರ ಪರಮಾತ್ಮನನ್ನು ತಿಳಿದುಕೊಂಡವನಿಗೆ ಮುಕ್ತಿಯು ಲಭಿಸುತ್ತದೆ. ಮತ್ತು ಜಗತ್ತಿನ ಸೃಷ್ಟಿ, ಪಾಲನ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ ಇವು ವಿಷ್ಣುವಿನಿಂದಲೇ ಆಗುತ್ತವೆ, ಇತರರಿಂದ ಸರ್ವಥಾ ಅಲ್ಲ ಎಂದು ತಿಳಿದವನಿಗೆ ಮುಕ್ತಿಯಾಗುವುದು. ಈ ಮಾತಿನ ಪ್ರಸಿದ್ಧಿಯನ್ನು ತೋರಿಸಲು 'ಅವಗಂತವ್ಯಃ, ಖಲು' ಎಂದಿದ್ದಾರೆ.

ಸಕಲ ಸಚ್ಛಾಸ್ತ್ರಾಣಾಮಿತಿ— ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಭಾರತ, ಪಂಚ ರಾತ್ರ, ಮೂಲರಾಮಾಯಣ ಎಂಬ ಇವಕ್ಕೆ ಶಾಸ್ತ್ರವೆಂದು ಹೆಸರು. ಈ ಋಗಾದಿಶಾಸ್ತ್ರಗಳು ಸಜ್ಜನರಿಗೆ ಪರಮಾತ್ಮ-ಜ್ಞಾನವನ್ನು ಹುಟ್ಟಿಸಿ ಮುಕ್ತಿಗೆ ಸಾಧನವಾಗಿವೆ. ಇವು ಇದಕ್ಕಾಗಿಯೇ ಹೊರಟಿವೆ. ಮತ್ತು ಜೀವರ ದುಃಖವನ್ನು ಪರಿಹರಿಸುವುದಕ್ಕಾಗಿಯೇ ಶ್ರುತಿಯು ಪ್ರವೃತ್ತವಾಗಿದೆ. ಈ ವಾಕ್ಯಗಳು ಶ್ರುತಿ-ಸ್ಮೃತಿಗಳಲ್ಲಿ ಕಂಡುಬಂದಿರುವುದರಿಂದ ಅದನ್ನು ಸೂಚಿಸಲು ಟೀಕೆಯಲ್ಲಿ ಅವಿಪ್ರತಿಪನ್ನಃ ಅರ್ಥಃ ಎಂದಿದ್ದಾರೆ.

ಇದಂ ಚೇತಿ— ಈ ಹಿಂದೆ ಹೇಳಿದುದೆಲ್ಲವೂ ಸರಿ, ಮುಂದೇನು ? ಎಂಬುದಕ್ಕೆ ಉತ್ತರ. ಇದುವರೆಗೂ ಹೇಳಿದ ಪರಮಾತ್ಮಜ್ಞಾನವೂ ಸಹ ಮುಕ್ತಿಗೆ ಸಾಧನ. ಪರಮಾತ್ಮನು ಮಾಡುವ ಜಗತ್ತಿನ ಜನ್ಮಾದಿವ್ಯಾಪಾರಗಳು ಬಹಳ. ಯೋಗ್ಯರಾದ ಚೇತನರಿಗೆ ಜ್ಞಾನ, ಭಕ್ತಿ ಮುಂತಾದವುಗಳನ್ನು ಕೊಡುವುದು ಕೆಲವು ಮುಕ್ತ ಜೀವರಿಗೆ ಆನಂದ-ವೀಯುವುದು, ಅಯೋಗ್ಯ ಜೀವರಿಗೆ ಮಿಥ್ಯಾಜ್ಞಾನ (ಸುಳ್ಳು ತಿಳುವಳಿಕೆ), ದ್ವೇಷ ಮುಂತಾದವನ್ನು ಕೊಡುವುದು, ಅವರಿಗೆ ಯೋಗ್ಯವಾದ ಮುಕ್ತಿ ಎಂದರೆ; ದುಗುಡ, ದುಮ್ಮಾನ, ಅಂಜಿಕೆ ಮುಂತಾದವನ್ನು ಕೊಡುವುದು, ಮಿಶ್ರ ಜೀವರಿಗೆ ಸುಖ-ದುಃಖಗಳ ಬೆರಕೆಯನ್ನು ಕೊಡುವುದು, ಜಡವಸ್ತುಗಳಲ್ಲಿ ಭಾವಕಾರ್ಯ ಪದಾರ್ಥಗಳಿಗೆ ವೃದ್ಧಿ (ಹೆಚ್ಚಳ), ಕ್ಷಯ (ಸವೆತ) ಮೊದಲಾದವುಗಳನ್ನು ಕೊಡುವುದು, ಅಭಾವಗಳಲ್ಲಿ ಒಂದಾದ ಪ್ರಾಗಭಾವಕ್ಕೆ ನಾಶ-ವನ್ನು (ಅಳಿವು) ಕೊಡುವುದು, ಪ್ರಧ್ವಂಸಾಭಾವಕ್ಕೆ ಜನ್ಮವನ್ನು (ಹುಟ್ಟು) ನೀಡುವುದು, ತ್ರೈಕಾಲಿಕಾಭಾವಕ್ಕೆ ಎಂದರೆ ಸದಾಭಾವಕ್ಕೆ ಯಾವ ಬದಲಾವಣೆಯೂ ಆಗದೆ ಸದಾ ಒಂದೇ ರೀತಿಯಾಗಿರುವಿಕೆಯನ್ನು ಕೊಡುವುದು, ಎಂಬ ಈ ಮುಂತಾದ ಹಲವು ವ್ಯಾಪಾರಗಳು ಪರಮಾತ್ಮನಿಗಿರುವುವು.

ಅವಾಂತರಾನೇಕೇತ್ಯಾದ್ಯುಕ್ತಮ್— ಚೇತನ, ಅಚೇತನ, ಭಾವ, ಅಭಾವ, ಎಂಬ ರೀತಿಯಲ್ಲಿ ಜಗತ್ತು ಅನೇಕ ಪ್ರಭೇದ-ಗಳಿಂದ ವಿಭಾಗಗೊಂಡಿದೆ ಮತ್ತು ಅದರಲ್ಲಿ ಬಗೆ-ಬಗೆಯ ಚೇತನಗಳ ಸಮೂಹಗಳಿವೆ. ಇಂತಹ ಜಗತ್ತಿನ ಜ್ಞಾನವಾಗುವುದು ಮುಮುಕ್ಷುವಿಗೆ ಅತ್ಯಗತ್ಯ. ಇಂತಹ ಜ್ಞಾನದಿಂದಲೇ ಪರಮಾತ್ಮನು ಜಗತ್ತಿನ ಉದಯಾದಿಗಳಿಗೆ ಕರ್ತನು ಎಂಬ ಜ್ಞಾನವು ಹುಟ್ಟುತ್ತದೆ. ಅದಿಲ್ಲದೇ ಈ ರೀತಿಯ ಜ್ಞಾನವಾಗುವುದು ಅಸಂಭವ. ಈ ಅರ್ಥವನ್ನು ಸೂಚಿಸಲು ''ಅವಾಂತರಾನೇಕ'' ಇತ್ಯಾದಿಯಾಗಿ ಹೇಳಿದ್ದಾರೆ.

ತಥೇತಿ— ಜಗತ್ತು ಅನೇಕ ಒಳ ಭೇದ-ಪ್ರಭೇದಗಳಿಂದ ಪ್ರವಿಭಕ್ತವಾಗಿದೆ ಎಂಬ ಜ್ಞಾನವೆಂದರ್ಥ.

ತದಿದಮಿತಿ— ಇದಕ್ಕೆ ಮೂರು ವಿಧ ಪ್ರಯೋಜನಗಳನ್ನು ಹೇಳುತ್ತಾರೆ.

Rarest Archiver

1) ಪರಮಾತ್ಮನು ಕಪಿಲಾದಿರೂಪದಿಂದ ಅವತರಿಸಿ ಸಾಂಖ್ಯತತ್ತ್ವವಿವೇಕ, ಪಂಚರಾತ್ರ ಮುಂತಾದ ಗ್ರಂಥಗಳನ್ನು ರಚಿಸಿದನು. ಅವುಗಳಿಂದಲೇ ಜಗತ್ತಿನ ತತ್ತ್ವಜ್ಞಾನವಾಗಲಿ ಎಂಬ ಶಂಕೆಯ ಪರಿಹಾರ.

2) ಶ್ರೀಮದಾಚಾರ್ಯರು ಪ್ರಾಚೀನ ಗ್ರಂಥಗಳ ಆಧಾರವಿಲ್ಲದೆ ಅಮೂಲವಾಗಿ ತಮ್ಮ ಬುದ್ಧಿಗೆ ತೋಚಿದಂತೆ ಈ ತತ್ತ್ವಸಂಖ್ಯಾನವನ್ನು ಏಕೆ ಬರೆದರು ? ಇದು ಸಾಧುವಲ್ಲ ಎಂಬ ಶಂಕೆಯ ಪರಿಹಾರ.

3) ಗ್ರಂಥಾರಂಭಕ್ಕೆ ಉಪಯುಕ್ತವಾದ ವಿಷಯ, ಪ್ರಯೋಜನ, ಅಧಿಕಾರಿ, ಸಂಬಂಧವೆಂಬ ಅನುಬಂಧಚತುಷ್ಟಯವನ್ನು ಹೇಳುವುದು.

ಇವು ಮೂರುವಿಧ ಪ್ರಯೋಜನಗಳು. ತದಿದಂ ಎಂದರೆ ಪರಮಾತ್ಮ, ಜಗತ್ತು ಎಂಬ ಎರಡು ತತ್ತ್ವಗಳು ಎಂದರ್ಥ. ಇದನ್ನು ಹೀಗೆಯೇ ಹೇಳದೆ ಪ್ರಧಾನ ತತ್ತ್ವ, ಅಂಗತತ್ತ್ವಗಳೆಂದು ಏಕೆ ಹೇಳಿದರು ? ಎಂದರೆ ಅವೆರಡಕ್ಕೂ ಸಾಮ್ಯವುಂಟಾಗಬಾರದು ಮತ್ತು ಅದನ್ನು ಸಂಗ್ರಹಿಸಿ ಹೇಳಬೇಕು ಎಂಬ ಅಭಿಪ್ರಾಯದಿಂದ ಹಾಗೆ ಹೇಳಿದರು.

ಹೀಗೆ ಹೇಳಿದ್ದರಿಂದ ಈ ಶಾಸ್ತ್ರಕ್ಕೆ ಉಪಯೋಗವಾಗುವ ವಿಷಯ, ಪ್ರಯೋಜನ, ಸಂಬಂಧ, ಅಧಿಕಾರೀ ಎಂಬ ಅನುಬಂಧಚತುಷ್ಟಯವು ಸಿದ್ಧಿಸಿದಂತಾಯಿತು. ಪರತತ್ತ್ವ ಪ್ರಧಾನ. ಅಪರತತ್ತ್ವ ಅಂಗ. ಇವು ಶಾಸ್ತ್ರಕ್ಕೆ ವಿಷಯ. ಅವುಗಳ ಜ್ಞಾನದ ಮೂಲಕ ದೊರೆಯುವ ಮುಕ್ತಿಯು ಫಲ. ಯಥಾನುಗುಣವಾಗಿ ಸಂಬಂಧವೂ ಅಧಿಕಾರಿಯೂ ಇರುವುದಾಗಿ ತಿಳಿಯಬೇಕು.

ಟೀಕಾ—

ನನು ಪ್ರಕರಣಾದೌ ಕಿಮಪಿ ಮಂಗಲಂ ಕಸ್ಮಾನ್ನಾನುಷ್ಠಿತಮ್ ? ನ ತಾವತ್ ತದಫಲಮೇವ, ಪ್ರೇಕ್ಷಾವದ್ಭಿರನುಷ್ಠಿತತ್ವಾತ್ । ನಾಪಿ ಪರಿಸಮಾಪ್ತ್ಯಾದಿವ್ಯತಿರಿಕ್ತಫಲಮ್ । ನಿಯಮೇನ ಪ್ರಾರಂಭೇ ಅನುಷ್ಠಿತತ್ವಾತ್ ।

ಉಚ್ಯತೇ । ಅನುಷ್ಠಿತಮೇವ ಭಗವತಾ ಮಂಗಲಮ್, ಮಾನಸಿಕಾದೇರಪಿ ತಸ್ಯ ಸಂಭವಾತ್ । ತಚ್ಚ ಪರಮಾಸ್ತಿಕತ್ವಾದನುಮೀಯತೇ ।

ಯಚ್ಚಾಯಂ ಸ್ವಾತಂತ್ರ್ಯಾದಿವಿಶಿಷ್ಟಸ್ಯ ವಿಷ್ಣೋರಾದಿತ ಏವ ಸಂಕೀರ್ತನಂ ಕರೋತಿ ಕಿಂ ತತೋಽನ್ಯನ್ಮಂಗಲಂ ನಾಮ ? ಅನ್ಯಪರಮಪಿ ತದ್ವಕ್ತ್ಯಾಽನುಷ್ಠಿತಂ ಸ್ವಭಾವಾತ್ ಸಂಪಾದಯತ್ಯೇವಾಖಿಲಮಂಗಲಾನೀತಿ ।

ಮಂಗಳವಾದ

ಅದು ಸರಿ, ನಿಮ್ಮ ಆಚಾರ್ಯರು ಪ್ರಕರಣಾದಿಯಲ್ಲಿ ಯಾವ ವಿಧವಾದ ಮಂಗಳವನ್ನೂ ಏಕೆ ಆಚರಿಸಲಿಲ್ಲ ? ಮಂಗಳಕ್ಕೆ ಫಲವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಫಲವಿಲ್ಲದಿದ್ದರೆ ಸಕಲ ಪ್ರೇಕ್ಷಾವಂತರೂ ಆಚರಿಸುತ್ತಿರಲಿಲ್ಲ. ಸಕಲ ಪ್ರೇಕ್ಷಾವಂತರೂ ಆಚರಿಸಿರುವುದು ಸಕಲ ಗ್ರಂಥಗಳಲ್ಲಿಯೂ ಕಂಡುಬಂದಿರುವುದರಿಂದ ಮಂಗಳಕ್ಕೆ ಫಲವಿಲ್ಲವೆಂದು ಒಪ್ಪುವುದಕ್ಕಾಗುವುದಿಲ್ಲ. ಪ್ರಯೋಜನವಿದ್ದೇ ಇದೆ. ಹಾಗಾದರೆ, ಆ ಪ್ರಯೋಜನ ಯಾವುದು ? ಎಂದರೆ ಪ್ರಾರಂಭಿಸಿದ ಗ್ರಂಥವು ಪರಿಸಮಾಪ್ತಿಗೊಳ್ಳುವುದೇ ಫಲ. ಇದಕ್ಕೆ ವ್ಯತಿರಿಕ್ತವಾದ ಫಲ ಯಾವುದೂ ಗೋಚರಿಸಲಾರದು. ಏಕೆಂದರೆ, ಗ್ರಂಥಾರಂಭದಲ್ಲಿ ಸರ್ವಪ್ರೇಕ್ಷಾವಂತರೂ ಕಡ್ಡಾಯವಾಗಿ ತಪ್ಪದೇ ಆಚರಿಸುತ್ತಲೇ ಬಂದಿದ್ದಾರೆ, ಮುಂದೆ ಆಚರಿಸತಕ್ಕವರೂ ಆಗಿದ್ದಾರೆ. ಹೀಗೆ ಮಂಗಳವು ಅವಶ್ಯ ಕರ್ತವ್ಯವೆಂದು ಸಿದ್ಧಿಸಿರುವಾಗ ನಿಮ್ಮ ಆಚಾರ್ಯರು ಏಕೆ ಆಚರಿಸಲಿಲ್ಲ ?

Rarest Archive

ಈ ಪ್ರಶ್ನೆಗೆ ಸಮಾಧಾನ ಹೇಳಲಾಗುತ್ತದೆ. ಷಡ್ಗುಣೈಶ್ವರ್ಯಸಂಪನ್ನರಾದ ಶ್ರೀಮದಾಚಾರ್ಯರು ಮಂಗಳವನ್ನು ಆಚರಿಸಿಯೇ ಇದ್ದಾರೆ. ಕಾಯಿಕ, ವಾಚನಿಕ, ಮಾನಸಿಕಗಳೆಂದು ಮಂಗಳದಲ್ಲಿ ಮೂರು ವಿಧ. ಶರೀರಾವಯವಗಳ ವ್ಯಾಪಾರದಿಂದ ಸಾಷ್ಟಾಂಗ ನಮಸ್ಕಾರ ಮಾಡುವುದು ಕಾಯಿಕ. ಮುಖದಿಂದ ವಾಕ್ಯರೂಪದಲ್ಲಿ ನಮಸ್ಕಾರವೆಂದು ಹೇಳುವುದು ವಾಚನಿಕ, ಮನಸ್ಸನ್ನು ಧ್ಯಾನವ್ಯಾಪಾರದಿಂದ ಶ್ರೀಹರಿಯ ಚರಣನಳಿನಗಳಲ್ಲಿ ನೆಲೆಗೊಳಿಸುವುದು ಮಾನಸಿಕ. ಇಂತು ತ್ರಿವಿಧ ಮಂಗಳಗಳಲ್ಲಿ ಮಾನಸಿಕ ಮಂಗಳವನ್ನು ಆಚರಿಸಿದ್ದಾರೆಂದು ಸಾಧಿಸಬಲ್ಲೆವು.

ಇದನ್ನು ನಿರ್ದೋಷಾನುಮಾನದ ಆಧಾರದಿಂದ ಸಾಧಿಸಲಾಗುವುದು, ಪಕ್ಷ, ಸಾಧ್ಯ, ಹೇತು, ದೃಷ್ಟಾಂತ-ಗಳೆಂಬವು ಅನುಮಿತಿಗೆ ಅವಯವಗಳು. ಶ್ರೀಮದಾಚಾರ್ಯರು, ಎಂಬುದು ಪಕ್ಷ, ಮಾನಸಿಕ ಮಂಗಳಾಚರಿಸಿದವರು ಎಂಬುದು ಸಾಧ್ಯ, ಪರಮಾಸ್ತಿಕರಾದುದರಿಂದ ಎಂಬುದು ಹೇತು. ಯಾರು ಪರಮಾಸ್ತಿಕರೋ ಅವರು ಗ್ರಂಥಾ-ದಿಯಲ್ಲಿ ಮಂಗಳವಾಚರಿಸಿದವರಾಗಿ ಕಂಡುಬಂದಿದ್ದಾರೆ ಎಂಬುದು ವ್ಯಾಪ್ತಿಯ ಸಾಹಚರ್ಯ ನಿಯಮ. ವ್ಯತಿರೇಕ-ದಿಂದ ನಾಸ್ತಿಕರಂತೆ ಎಂಬುದು ದೃಷ್ಟಾಂತ.

ಈ ಮೇಲಿನ ಅನುಮಾನ ಪ್ರಮಾಣದ ಆಧಾರದಿಂದ ಶ್ರೀಮದಾಚಾರ್ಯರು ಮಾನಸಿಕ ಮಂಗಳವಾಚರಿಸಿ-ದವರೆಂಬುದನ್ನು ಸ್ಪಷ್ಟವಾಗಿ ಸಮರ್ಥಿಸಲಾಯಿತು. ಇದು ಇನ್ನೂ ದೃಢಪಡುವುದಕ್ಕಾಗಿ ಮುಂದಿನ ವಾಕ್ಯಗಳನ್ನು ಹೇಳಲಾಗಿದೆ.

ಇಷ್ಟೂ ಅಲ್ಲದೆ, ಶ್ರೀಮದಾಚಾರ್ಯರು ಗ್ರಂಥಾದಿಯಲ್ಲಿ ನಿರತಿಶಯ ಸ್ವಾತಂತ್ರ್ಯ, ಮುಂತಾದ ಅನೇಕ ಮಂಗಳಕರ ಗುಣಪರಿಪೂರ್ಣನಾದ ವಿಷ್ಣುವಿನ ನಾಮಸಂಕೀರ್ತನ ಮಾಡಿದ್ದಾರೆ. ಅದಕ್ಕಿಂತ ಬೇರೆ ಮಂಗಳ-ವೆಂಬುದು ಯಾವುದಿದೆ ? ಮಾನಸಿಕ ಮಂಗಳವನ್ನಲ್ಲದೆ ಕಾಯಿಕ, ವಾಚನಿಕ ಮಂಗಳಗಳನ್ನೂ ಮಾಡಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಶ್ರೀನಾರಾಯಣನ ಬಗ್ಗೆ ಇರುವ ಶ್ರೀಮದಾಚಾರ್ಯರ ಪರಮಭಕ್ತಿಸಂಪನ್ನತೆಯೇ ಇದಕ್ಕೆ ದ್ಯೋತಕವಾಗಿದೆ. ಅವರ ಮತ್ತಿತ್ತರ ಸ್ವಾಭಾವಿಕ ಗುಣಗಳಿಂದಲೇ ಇನ್ನೂ ಸಮಸ್ತ ಮಂಗಳಗಳೂ ಬೆಳೆದು ಬಂದಿವೆ ಎಂಬಂಶವು ಸ್ಪಷ್ಟವಾಗುವುದು.

ಭಾವದೀಪ—

ನೈಷ್ಫಲ್ಯಾದಿನಾಽನನುಷ್ಠಾನಮಿತಿಭ್ರಾಂತಿಂ ಶಂಕಾವ್ಯಾಜೇನ ನಿರಸ್ಯ ನ್ಯೂನತಾದೋಷಂ ಪರಿಹರತಿ ನನ್ವಿತ್ಯಾದಿನಾ । ಪ್ರಕರಣಸ್ಯಾದಾವಿತ್ಯರ್ಥಃ । ಪ್ರೇಕ್ಷಾವದ್ಭಿಃ ವ್ಯಾಸಜೈಮಿನಿಪ್ರಭೃತಿಭಿಃ ಅಥಾತೋ ಬ್ರಹ್ಮಜಿಜ್ಞಾಸೇತ್ಯಾದಾವಿತಿ ಭಾವಃ ॥ ಪರಿಸಮಾಪ್ತ್ಯಾದೀತಿ । ಪ್ರಚಯ ಆದಿಶಬ್ದಾರ್ಥಃ । (ಮಂಗಲಮನುಷ್ಠಿತಮೇವೇತ್ಯೇತದಯುಕ್ತಮ್ । ಪ್ರಕರಣಾದೌ ಮಂಗಲಾನುಷ್ಠಾನಸ್ಯ ಗ್ರಂಥೇ ನಿವೇಶನಾಭಾವಾದಿತ್ಯತ ಆಹ) ಮಾನಸಾದೇರಿತಿ । ಹರಿಸ್ಮೃತಿನಮಉಕ್ತಿದಂಡವ-ತ್ಪ್ರಣಾಮಾದೇರಿತ್ಯರ್ಥಃ । ಪರಬುದ್ಧೇರಪ್ರತ್ಯಕ್ಷತ್ವಾದಾಹ ತಚ್ಚೇತಿ ॥ ಮಾನಸಾದ್ಯನುಷ್ಠಾನಮಿತ್ಯರ್ಥಃ । (ಕಿಂ ಚ ಮಂಗಲಾನುಷ್ಠಾನಸಾಧಕಂ ಗ್ರಂಥೇ ನಿವೇಶನಮಪ್ಯಸ್ತಿತ್ಯಾಹ) ಯಚ್ಚೇತಿ । ಕಿಂ ಚೇತಿ ಚಾರ್ಥಃ । ಯತ್ಕರೋತೀ-ತ್ಯನ್ವಯಃ । ಆದಿಪದೇನ ಭಗವತ್ತ್ವಗ್ರಹಃ । ಏತೇನ ಶಿಷ್ಯಶಿಕ್ಷಾರ್ಥೇ ನಿಬಂಧನಸ್ಯಾಪ್ಯಾವಶ್ಯಕತ್ವಾನ್ನ್ಯೂನತೇತ್ಯಪಾಸ್ತಮ್ । ನನು ವಿಭಾಗೇನೋದ್ದಿಶ್ಯ ವಿಶಿಷ್ಯನಿರ್ದೇಶಪರಮಿದಂ ಕಥಂ ಮಂಗಲಾರ್ಥೇ ಸ್ಯಾದಿತ್ಯತ ಆಹ ಅನ್ಯಪರಮಪೀತಿ ।

ನನ್ವಿತ್ಯಾದಿನಾ— ಮಂಗಳಕ್ಕೆ ಫಲವಿಲ್ಲವಾದುದರಿಂದ ಅನುಷ್ಠಾನ ಮಾಡದಿರಬಹುದು. ಇದೊಂದು ಭ್ರಾಂತಿ ಎಂಬ ಅಶಂಕೆಯು ಹುಟ್ಟುತ್ತದೆ. ಅದನ್ನು ಪರಿಹರಿಸಿ ಮಂಗಳಾಚರಣವಿಲ್ಲವೆಂಬ ನ್ಯೂನತೆಯನ್ನು ಪರಿಹರಿಸಿದ್ದಾರೆ

Rarest Archiver

ಪ್ರಕರಣದ ಆದಿಯಲ್ಲಿ ಎಂದರ್ಥ. ಪ್ರೇಕ್ಷಾವದ್ಭಿಃ = ವ್ಯಾಸರು, ಜೈಮಿನಿ ಮುನಿಗಳು ಮುಂತಾದವರಿಂದ ''ಅಥಾತೋ ಬ್ರಹ್ಮಜಿಜ್ಞಾಸಾ'' ಮುಂತಾದ ಸ್ಥಳಗಳಲ್ಲಿ ಮಂಗಳವನ್ನು ಆಚರಿಸಲಾಗಿದೆ ಎಂದು ಭಾವ.

ಪರಿಸಮಾಪ್ತ್ಯಾದೀತಿ— ಇಲ್ಲಿನ ಆದಿ ಶಬ್ದಕ್ಕೆ ಪ್ರಚಯ ಎಂದರೆ ಅಭಿವೃದ್ಧಿ ಎಂದರ್ಥ.

ಮಾನಸಾದೇರಿತಿ— ಪ್ರಕರಣದ ಆದಿಯಲ್ಲಿ ಮಂಗಳವನ್ನು ಮಾಡಿದ್ದಕ್ಕೆ ಸೂಚನೆಯಾಗಿ ಪದ್ಯವನ್ನು ಬರೆದಿಲ್ಲ. ಆದುದರಿಂದ ಮಂಗಳವನ್ನು ಮಾಡಿದ್ದಾರೆ ಎಂದು ಹೇಳಿದ್ದು ಅಯುಕ್ತ ಎಂಬುದು ಆಕ್ಷೇಪ.

ಸಮಾಧಾನ— ಮಂಗಳಪದ್ಯವನ್ನು ಗ್ರಂಥಾದಿಯಲ್ಲಿ ಬರೆಯದಿದ್ದಾಗ್ಯೂ ಮಾನಸಿಕ, ಹರಿಸ್ಮರಣ, ನಮಸ್ಕಾರೋಕ್ತಿ, ದಂಡವತ್ಪ್ರಣಾಮ ಇತ್ಯಾದಿಗಳನ್ನು ಮಾಡಿದ್ದಾರೆ. ಇವೆಲ್ಲವೂ ಮಂಗಳಗಳೇ ಆಗಿವೆ. ಆದುದರಿಂದ ಮಂಗಳ ಮಾಡಿದ್ದಾರೆಂಬ ಹೇಳಿಕೆಯು ಅಯುಕ್ತವಲ್ಲ.

ತಚ್ಚೇತಿ— ಒಬ್ಬರ ಮನಸ್ಸಿನಲ್ಲಿರುವುದು ಮತ್ತೊಬ್ಬರಿಗೆ ತಿಳಿಯುವುದು ಕಷ್ಟ. ಅದು ಹೇಗೆ ಮಾನಸಿಕ ಮಂಗಳ ಮಾಡಿದ್ದಾರೆಂದು ಹೇಳುತ್ತೀರಿ ? ಎಂದರೆ, ಮಾನಸಿಕ ಮಂಗಳವನ್ನು ಮಾಡಿದ್ದಾರೆಂಬುದನ್ನು ಅನುಮಾನ ಪ್ರಮಾಣದಿಂದ ನಿರ್ಧರಿಸಿ ಹೇಳುತ್ತೇವೆ. ಅಲ್ಲದೆ, ಮಂಗಳಾಚರಣೆಗೆ ಸಾಧಕವಾಗಿ ಗ್ರಂಥಾದಿಯಲ್ಲಿ ಬರೆದೂ ಇದ್ದಾರೆ. ಇದು ಸ್ಪಷ್ಟವಾಗಿದೆ ಎಂದಿದ್ದಾರೆ.

ಯಚ್ಚೇತಿ— ಚಕಾರಕ್ಕೆ ಇದೂ ಅಲ್ಲದೆ ಎಂದರ್ಥ. ಸ್ವತಂತ್ರಂ ಎಂದು ವಿಷ್ಣುವಿನ ಯಾವ ನಾಮಸಂಕೀರ್ತನ ಮಾಡಿದ್ದಾರೆಯೋ ಅದೇ ಮಂಗಳಾಚರಣೆ ಎಂದು ಅನ್ವಯ. ಆದಿಪದದಿಂದ ಷಡ್ಗುಣಸಂಪನ್ನರು ಎಂಬ ಅರ್ಥವನ್ನು ಗ್ರಹಿಸಬೇಕು. ಮಂಗಳಪದ್ಯವನ್ನು ಗ್ರಂಥಾದಿಯಲ್ಲಿ ಶಿಷ್ಯರಿಗೆ ಶಿಕ್ಷಣ ಕೊಡಲು ಬರೆಯಬೇಕು. ಇದು ಅತ್ಯಾವಶ್ಯಕ. ಗ್ರಂಥಾದಿಯಲ್ಲಿ ಬರೆದೇ ಇದ್ದಾರೆ. ಆದುದರಿಂದ ಇಲ್ಲಿ ನ್ಯೂನತೆಯು ಇಲ್ಲ.

ಅನ್ಯಪರಮಪೀತಿ, ತತ್ರೇತಿ— ಸ್ವತಂತ್ರಂ ಅಸ್ವತಂತ್ರಂ ಎಂಬುದನ್ನು ಗ್ರಂಥದಲ್ಲಿ ವಿಭಾಗಮಾಡಿದ್ದಾರೆ. ತತ್ತ್ವಗಳನ್ನು ವಿಶೇಷಾಕಾರವಾಗಿ ನಿರ್ದೇಶಗೊಳಿಸಿದ್ದಾರೆ. ಇದು ಆ ವಾಕ್ಯಕ್ಕೆ ಅರ್ಥ. ಅದಕ್ಕೆ ಮಂಗಳಾಚರಣ ಎಂಬ ಅರ್ಥವು ಹೇಗೆ ಬರುತ್ತದೆ ? ಎಂಬ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಶ್ರೀಮದಾಚಾರ್ಯರು ಭಕ್ತಿಯಿಂದ ಅನುಷ್ಠಾನ ಮಾಡಿದುದೆಲ್ಲವೂ ಅವರ ಸಾಮರ್ಥ್ಯದಿಂದಲೇ ಮಂಗಳರೂಪದಲ್ಲಿ ಪರಿಣಾಮ ಹೊಂದಿವೆ ಎಂದು ಭಾವ.

ಟೀಕಾ—

ತತ್ರ ತಾವತ್ತತ್ತ್ವಂ ಸಾಮಾನ್ಯತೋ ವಿಭಾಗೇನೋದ್ದಿಶತಿ—

''ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ವಮಿಷ್ಯತೇ ।''

ತತ್ತ್ವಮನಾರೋಪಿತಮ್ । ಪ್ರಮಿತಿವಿಷಯ ಇತಿ ಯಾವತ್ । ತೇನ ''ತಸ್ಯ ಭಾವಸ್ತತ್ತ್ವಮ್'' ಇತ್ಯಾದಿಖಂಡನಾನವಕಾಶಃ ।

ತತ್ತ್ವವೆಂದರೇನು ?

ಅದರ ಲಕ್ಷಣ, ಪರಿಷ್ಕಾರ, ಲಕ್ಷಣ, ಶರೀರದೊಳಗಿನ ವಿಶೇಷಣಗಳಿಗೆ ಪ್ರಯೋಜನ ಕಥನ

ಕಪ್ಪೆಚಿಪ್ಪಿನಲ್ಲಿ ಸೂರ್ಯಕಿರಣಗಳು ಸೇರಿದ ಹೊಳಪಿನಿಂದ ''ಬೆಳ್ಳಿ ಇದೆ'' ಎಂಬ ತಪ್ಪು ಕಲ್ಪನೆಯು ಅದನ್ನು ನೋಡಿದವರಿಗೆ ಉಂಟಾಗುವುದು. ಅದನ್ನು ಪಡೆಯಬೇಕೆಂಬ ಬಯಕೆಯಿಂದ ಅದರ ಬಳಿಗೆ ಹೋಗಿ ಅದನ್ನು

Rarest Archiver

ಕೈಯಲ್ಲಿ ಹಿಡಿದುಕೊಳ್ಳುವರು. ಆಗ ಅವರಿಗೆ ಇದು ''ಬೆಳ್ಳಿ'' ಅಲ್ಲ, ''ಕಪ್ಪೆಚಿಪ್ಪು'' ಎಂಬ ಸರಿಯಾದ ತಿಳುವಳಿಕೆ ಉಂಟಾಗುವುದು ಮತ್ತು ''ನಾನು ಇದುವರೆಗೂ ಕಪ್ಪೆಚಿಪ್ಪನ್ನು ಬೆಳ್ಳಿ ಎಂದು ತಿಳಿದಿದ್ದೆನು. ಇದು ಸರಿಯಲ್ಲ'', ಎಂಬ ಬಾಧಜ್ಞಾನದಿಂದ ನಿಶ್ಚಯಜ್ಞಾನ ಹುಟ್ಟುತ್ತದೆ.

ಹೀಗೆ ''ಕಪ್ಪೆಚಿಪ್ಪಿನಲ್ಲಿ ಬೆಳ್ಳಿ'' ಎಂಬ ಜ್ಞಾನಕ್ಕೆ ಆರೋಪಿತಜ್ಞಾನವೆಂದು ಹೆಸರು. ಆರೋಪಿತ ಎಂದರೆ ಸುಳ್ಳು ಎಂದು ತಾತ್ಪರ್ಯ.

ತತ್ತ್ವದ ಲಕ್ಷಣ

ಆರೋಪಿತವಲ್ಲದ್ದು ತತ್ತ್ವ. ಪ್ರಮಿತಿವಿಷಯವೆಂದು ತಾತ್ಪರ್ಯ. ಸರಿಯಾದ ತಿಳುವಳಿಕೆಗೆ ವಿಷಯವಾದದ್ದನ್ನು ಪ್ರಮಿತಿವಿಷಯವೆನ್ನುವರು. ಇದರಿಂದ ''ಅದರಲ್ಲಿರುವ ಅದರತನವೇ ತತ್ತ್ವವೆಂದು ಏಕಾಗಬಾರದು ?'' ಎಂದು ಮುಂತಾದ ಖಂಡನೆಗಳಿಗೆ ಅವಕಾಶವಿಲ್ಲ.

ಭಾವದೀಪ—

ತತ್ರೇತಿ । ಮುಮುಕ್ಷುಣಾ ಅಂಗಾಂಗಿಭಾವೇನ ಜ್ಞಾತವ್ಯತಯಾ ತತ್ತ್ವದ್ವಯೇ ಅವಶ್ಯಂ ವಾಚ್ಯೇ ಸತೀತಿ ವಾ ಶಾಸ್ತ್ರವಿಷಯಾದಿನಾ ವಿಷಯಾದಿಮತ್ವೇ ಸಿದ್ಧೇ ಸತೀತಿ ವಾ ಸಮಂಗಲತ್ವೇನ ಪ್ರಕರಣಸ್ಯಾರಂಭಣೀಯತ್ವೇ ಸಿದ್ಧೇ ಸತೀತಿ ವಾ ಸಾಮಾನ್ಯವಿಶೇಷವಿಭಾಗೋದ್ದೇಶಾದಿಷು ಮಧ್ಯೇ ಇತಿ ವಾರ್ಥಃ । ವಿಶೇಷವಿಭಾಗಾದಿಃ ಪಶ್ಚಾದಿತಿ ತಾವಚ್ಛಬ್ದಃ । ತತ್ತ್ವಂ ದ್ವಿವಿಧಮಿತಿ ಸಾಮಾನ್ಯತೋ ವಿಭಾಗಃ । ಸ್ವತಂತ್ರಮಸ್ವತಂತ್ರಂ ಚೇತಿ ಸಾಮಾನ್ಯತ ಉದ್ದೇಶ ಇತಿ ವಿವೇಕಃ । ವಿಭಾಗೇನೇತಿ ಹೇತೌ ತೃತೀಯಾ ।

ನನು ಕಿಂ ತತ್ತ್ವಪದೇನ ವಿವಕ್ಷಿತಮ್ । ತಸ್ಯ ಭಾವಸ್ತತ್ತ್ವಮಿತಿ ಚೇತ್ ತಚ್ಛಬ್ದಾರ್ಥಾನಿರುಕ್ತಿಃ । ತಚ್ಛಬ್ದಪರಾಮರ್ಶ-ವಿಷಯಸ್ಯ ಪ್ರಕೃತಸ್ಯ ಕಸ್ಯಚಿದಭಾವಾತ್ । ಬಾವಪದೋಕ್ತಧರ್ಮಸ್ಯೈವ ಪ್ರಾಪ್ತ್ಯಾ ಧರ್ಮಿಣೋಽಪ್ರಾಪ್ತಿಶ್ಚೇತ್ಯತ ಆಹ ತತ್ತ್ವಮನಾರೋಪಿತಮಿತಿ ॥ ಏವಂ ತರ್ಹಿ ಕೂರ್ಮರೋಮಾದೇಃ ಪ್ರಧಾನಸ್ಯಾಪ್ರಸಿದ್ಧ್ಯಾ ಕ್ವಾಪ್ಯಾರೋಪಾಭಾವೇನ ತದಪಿ ತತ್ತ್ವಮಿತಿ ಪ್ರಸಜ್ಯೇತ ಇತ್ಯತ ಉಕ್ತಂ ಪ್ರಮಿತಿವಿಷಯ ಇತಿ ಯಾವದಿತಿ ॥ ಸಾಕ್ಷಾತ್ಪ್ರಮಿತಿವಿಷಯ ಇತಿ ವಾ ವಿಧಿಪ್ರಮಿತಿವಿಷಯ ಇತಿ ವಾ ಅಸ್ಯಾರ್ಥೋ ಧ್ಯೇಯಃ । ಕೂರ್ಮರೋಮಾದಿ ನಾಸ್ತೀತಿ ನಿಷೇಧಪ್ರತೀತಿವಿಷಯತ್ವೇಽಪಿ ಕೂರ್ಮರೋಮಾಸ್ತೀತಿ ವಾಕ್ಯಾಭಾಸಜನ್ಯವಿಧಿಪ್ರತ್ಯಯವಿಷಯತ್ವೇಽಪಿ ವಾ ನ ದೋಷೋ ಭವತಿ ॥ ಇತ್ಯಾದೀತಿ । ಇತ್ಯಾದಿವಿಕಲ್ಪಪೂರ್ವಕಖಂಡನಾನವಕಾಶ ಇತ್ಯರ್ಥಃ ।

ಇಲ್ಲಿ ತತ್ರ ಎಂಬುದಕ್ಕೆ ನಾಲ್ಕು ರೀತಿಯ ಅರ್ಥಗಳನ್ನು ಹೇಳಿದ್ದಾರೆ.

1. ಮುಮುಕ್ಷುವು ಪ್ರಧಾನ ತತ್ತ್ವವನ್ನೂ ಅಂಗತತ್ತ್ವವನ್ನೂ ತಿಳಿದುಕೊಳ್ಳಬೇಕು. ಹೀಗೆ ಅವಶ್ಯವಾಗಿ ತಿಳಿಯಬೇಕೆಂದಿರುವ ಆ ಎರಡು ತತ್ತ್ವಗಳನ್ನು ಹೇಳಬೇಕಾಗಿರುವಲ್ಲಿ.
2. ಶಾಸ್ತ್ರಕ್ಕೆ ಉಪಯೋಗ ಬೀಳುವ ವಿಷಯ, ಪ್ರಯೋಜನ, ಸಂಬಂಧ, ಅಧಿಕಾರಿ ಎಂಬ ಅನುಬಂಧ-ಚತುಷ್ಟಯವು ಸಿದ್ಧಿಸಿರಲಾಗಿ.
3. ಮಂಗಳಾಚರಣವನ್ನು ಮಾಡಿರುವುದರಿಂದ ಈ ಪ್ರಕರಣವನ್ನು ಆರಂಭಿಸಬಹುದು ಎಂಬುದು ಸಿದ್ಧಿಸುತ್ತಿರಲಾಗಿ.

Rarest Archiver

4. ಸಾಮಾನ್ಯ ವಿಭಾಗ, ವಿಶೇಷ ವಿಭಾಗ, ಸಾಮಾನ್ಯ ಉದ್ದೇಶ್ಯ, ವಿಶೇಷ ಉದ್ದೇಶ್ಯ ಇವುಗಳ ಮಧ್ಯದಲ್ಲಿ.

ಹೀಗಾಗಿ ನಾಲ್ಕುವಿಧ ಅರ್ಥಗಳನ್ನು ಮಾಡಿದ್ದಾರೆ. ತಾವತ್ ಶಬ್ದಕ್ಕೆ ವಿಶೇಷ ವಿಭಾಗ ಮುಂತಾದವನ್ನು ಅನಂತರ ಮಾಡತಕ್ಕದ್ದು ಎಂದರ್ಥ. ತತ್ತ್ವದಲ್ಲಿ ಎರಡು ವಿಧ ಎಂಬುದು ಸಾಮಾನ್ಯ ವಿಭಾಗ. ಸ್ವತಂತ್ರ, ಅಸ್ವತಂತ್ರ ಎಂಬುದು ಸಾಮಾನ್ಯ ಉದ್ದೇಶ ಎಂದು ತಿಳಿಯಬೇಕು. ಕಾರಣ ಎಂಬ ಅರ್ಥದಲ್ಲಿ ವಿಬಾಗೇನ ಎಂದು ತೃತೀಯಾ ವಿಭಕ್ತಿಯು ಬಂದಿದೆ.

ತತ್ತ್ವಮನಾರೋಪಿತಮಿತಿ— ತತ್ತ್ವ ಎಂದರೇನು? ಆ ಪದಕ್ಕೆ ಯಾವ ಅರ್ಥವನ್ನು ಹೇಳುವಿರಿ ? ತಸ್ಯ ಭಾವಃ (ಅದರ ತನ) ತತ್ತ್ವಂ ಎನ್ನುವಿರಾ ? ತತ್ ಶಬ್ದದ ಅರ್ಥವನ್ನು ವಿವರಿಸಿದಂತಾಗಲಿಲ್ಲ. ಪೂರ್ವದಲ್ಲಿ ಯಾವುದನ್ನಾದರೂ ತಿಳಿಸಿದ್ದರೆ ಅದರ ವಿಷಯದ ಸ್ಮರಣೆಯು ತತ್ ಪದದಿಂದ ಸೂಚಿತವಾಗುತ್ತದೆ. ಪ್ರಕೃತದಲ್ಲಿ ಯಾವ ವಸ್ತುವಿನ ಪರಾಮರ್ಶವೂ ಉಂಟಾಗುವುದಿಲ್ಲ, ತತ್ತ್ವ ಎಂಬಲ್ಲಿ ಬಿಡಿಸಿದರೆ ತತ್ ಎಂಬುದು ಒಂದು ಪದ. ತ್ವ ಎಂಬುದು ಮತ್ತೊಂದು ಪದ. ತತ್ ಎಂದರೆ ಧರ್ಮಿ. ತ್ವ ಎಂದರೆ ಧರ್ಮ. ಈಗ ತ್ವ ಎಂಬುದರಿಂದ ಸೂಚಿತವಾದ ಭಾವಪದದಿಂದ ಧರ್ಮ ಎಂಬ ಅರ್ಥವು ಬರುವುದೇ ಹೊರತು ಧರ್ಮಿ ಎಂಬ ಅರ್ಥವು ಸಿದ್ಧಿಸುವುದಿಲ್ಲ ಎಂಬುದು ಆಕ್ಷೇಪ.

ಅದರ ಪರಿಹಾರಕ್ಕಾಗಿ ''ಅನಾರೋಪಿತತ್ವಂ ತತ್ತ್ವಂ'' (ಆರೋಪಿತವಲ್ಲದ್ದು ತತ್ತ್ವ) ಎಂದಿದ್ದಾರೆ.

ಪ್ರಮಿತಿವಿಷಯಃ ಯಾವದಿತಿ; ಸರಿಯಾದ ತಿಳುವಳಿಕೆಗೆ ವಿಷಯವಾದುದು ಯಾವುದೋ ಅದು ತತ್ತ್ವ. ''ಅನಾರೋಪಿತಂ ತತ್ತ್ವಂ'' ಎಂದಿಷ್ಟೇ ಹೇಳಿದ್ದರೆ ಕೂರ್ಮರೋಮದಲ್ಲಿ ಅತಿವ್ಯಾಪ್ತಿ ಬರುತ್ತಿತ್ತು. ಕೂರ್ಮವನ್ನೂ ರೋಮವನ್ನೂ ಪ್ರತ್ಯೇಕವಾಗಿ ಉಲ್ಲೇಖ ಮಾಡಬಹುದಾಗಿದ್ದರೂ ರೋಮಕ್ಕೆ ಕೂರ್ಮದ ಸಂಬಂಧವನ್ನು ಉಲ್ಲೇಖಿಸಿ ಹೇಳಲು ಸಾಧ್ಯವಿಲ್ಲ. ಪ್ರಧಾನವಾದ ಕೂರ್ಮರೋಮವನ್ನು ಎಲ್ಲಿಯೂ ಆರೋಪಿಸಲು ಸಾಧ್ಯವಿಲ್ಲ. ಯಾರಾದರೂ ಆಮೆಗೆ ಕೂದಲಿದೆ ಎಂದು ಹೇಳಲು ಸಾಧ್ಯವೇ ? ಆದುದರಿಂದ ಅದೂ ಅನಾರೋಪಿತವೆಂದಂತಾಗಿ ಅತಿವ್ಯಾಪ್ತಿಯು ಬಂದಿತು. ಅದರ ಪರಿಹಾರಕ್ಕಾಗಿ ಸರಿಯಾದ ತಿಳುವಳಿಕೆಗೆ ವಿಷಯವಾದುದು ಯಾವುದೋ ಅದು ತತ್ತ್ವ (ಪ್ರಮಿತಿ-ವಿಷಯಃ ಇತಿ ಯಾವತ್) ಎಂದು ಬೇರೆ ರೀತಿಯ ಲಕ್ಷಣವನ್ನು ಹೇಳಿದರು.

ಪ್ರಮಿತಿವಿಷಯಃ ಎಂಬುದನ್ನು ಸಾಕ್ಷಾತ್‌ಪ್ರಮಿತಿವಿಷಯಃ ಎಂದು ಪರಿಷ್ಕರಿಸಬೇಕು. ಇಲ್ಲವಾದರೆ ನಿಷೇಧ-ವಾಕ್ಯದಲ್ಲಿಯೂ, ವಿಧಿವಾಕ್ಯದಲ್ಲಿಯೂ ಅತಿವ್ಯಾಪ್ತಿಯು ಬರುತ್ತದೆ. ಹೇಗೆಂದರೆ, ''ಕೂರ್ಮರೋಮಾದಿಗಳು ಇಲ್ಲ''. ಇದು ನಿಷೇಧವಾಕ್ಯ. 'ಪ್ರಮಿತಿಗೆ ವಿಷಯವೂ ಆಗಿದೆ' ಮತ್ತು 'ಕೂರ್ಮಕ್ಕೆ ಕೂದಲಿದೆ' ಇದು ವಿಧಿವಾಕ್ಯ, ಅಭಾಸವಾಗಿದೆ. ಇದರಿಂದ ಅರ್ಥವು ಆಭಾಸವಾಗಿ ತಿಳಿದು ಇದೂ ಸಹ ಪ್ರಮಿತಿಗೆ ವಿಷಯವಾಗುತ್ತದೆ. ಆದುದ-ರಿಂದ ಈ ಎರಡು ವಾಕ್ಯಗಳಲ್ಲಿಯೂ ಅತಿವ್ಯಾಪ್ತಿ ಬರುತ್ತದೆ. ಅದರ ಪರಿಹಾರಕ್ಕಾಗಿ ಸಾಕ್ಷಾತ್ ಎಂಬ ವಿಶೇಷಣವನ್ನು ಲಕ್ಷಣದಲ್ಲಿ ಸೇರಿಸಬೇಕು. ಪೂರ್ವೋಕ್ತ ಎರಡು ವಾಕ್ಯಗಳಲ್ಲಿ ಪ್ರಮಿತಿವಿಷಯತ್ವ ಎಂಬುದು ಇದ್ದರೂ ಸಾಕ್ಷಾತ್-ಪ್ರಮಿತಿವಿಷಯತ್ವವು ಇಲ್ಲದುದರಿಂದ ಅತಿವ್ಯಾಪ್ತಿ ಇಲ್ಲ– ಎಂದು ಭಾವ.

ಇತ್ಯಾದೀತಿ— ಇತ್ಯಾದಿಯಾಗಿ ವಿಕಲ್ಪಮಾಡಿಕೊಂಡು ಖಂಡನಮಾಡಲು ಅವಕಾಶವಿಲ್ಲವೆಂದರ್ಥ.

ಟೀಕಾ—

ನನು ಶುಕ್ತಿರಜತಾದಿಕಂ ಕಥಂ ನ ತತ್ತ್ವಮ್ ? ನ ಹಿ ಧರ್ಮೀ ವಾ ರಜತತ್ತ್ವಂ ವಾ ನ ಪ್ರಯೋಜನಮ್ । ನಾಪಿ ತಯೋಃ ಸಂಬಂಧಃ । ಶುಕ್ತಿವ್ಯಕ್ತೌ ರಜತತ್ತ್ವಸ್ಯ ಸ ನಾಸ್ತೀತಿ ಚೇತ್ ಮಾ ಭೂತ್ । ನ ಹಿ ಗೃಹೇ

Rarest Archiver

ದೇವದತ್ತೋ ನಾಸ್ತೀತ್ಯೇತಾವತಾ ನ ಪ್ರಮೇಯ ಇತಿ । ಸ್ಯಾದಿದಮಾರೋಪಿತಸ್ಯಾನ್ಯತ್ರ ಸತ್ತಾಮಭ್ಯುಪಗಚ್ಛತಾಂ ದೂಷಣಮ್ । ಅತ್ಯಂತಾಸದೇವ ರಜತಂ ದೋಷವಶಾಚ್ಛುಕ್ತಿಕಾಯಾಮಾರೋಪ್ಯತ ಇತಿ ವಾದೇ ತು ನಾಯಂ ದೋಷಃ ।

ಏತೇನ ಭಾವಿಪಾಕರಾಗಃ ಕುಂಭಃ ಶ್ಯಾಮತಾದಶಾಯಾಂ ರಕ್ತಪಿತ್ತಿನಾ ರಕ್ತತಯೋಪಲಭ್ಯಮಾನಸ್ತತ್ತ್ವಂ ಸ್ಯಾದಿತ್ಯಪಿ ಪರಾಸ್ತಮ್ । ಭಾವಿನಃ ಪ್ರಮೇಯತ್ವೇಽಪಿ ಪೂರ್ವಸ್ಯಾತಥಾತ್ವಾತ್ ।

ಅದು ಸರಿ, ಕಪ್ಪೆ ಚಿಪ್ಪಿನಲ್ಲಿ ಆರೋಪಿಸಲಾಗುತ್ತಿರುವ ಬೆಳ್ಳಿ ಮೊದಲಾದವು ಏಕೆ ತತ್ತ್ವಗಳೆನಿಸುವುದಿಲ್ಲ ? ಬೆಳ್ಳಿಯಾಗಲಿ ಬೆಳ್ಳಿತನವಾಗಲಿ ಪ್ರಮೇಯವಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಯಾವುದು ತಿಳಿಯಲು ಯೋಗ್ಯವೋ ಅದು ಪ್ರಮೇಯವೆನಿಸುವುದಿಲ್ಲವೆ ! ಬೆಳ್ಳಿಯೂ ಬೆಳ್ಳಿತನವೂ ತಿಳಿಯಲು ಯೋಗ್ಯವೇ ಆಗಿದೆ. ಇವು ತಿಳಿಯಲು ಯೋಗ್ಯವಲ್ಲವೆಂದು ಹೇಗೆ ಹೇಳುವುದಕ್ಕಾದೀತು ? ಅಲ್ಲದೆ ಬೆಳ್ಳಿಗೂ ಬೆಳ್ಳಿತನಕ್ಕೂ ಯಾವ ಸಂಬಂಧವೂ ಹೊಂದಿಕೆಯಾಗಲಾರದೆಂಬ ಹೇಳಿಕೆಯೂ ಸರಿಯಲ್ಲ. ಮತ್ತು ಕಪ್ಪೆ ಚಿಪ್ಪು ತೋರಬೇಕಾದರೆ ಅದರಲ್ಲಿ ಭಾಸವಾಗುವ ಬೆಳ್ಳಿತನಕ್ಕೆ ಆ ಸಂಬಂಧವು ಹತ್ತುವುದಿಲ್ಲವೆಂಬ ವಾದವೂ ಸರಿಯಲ್ಲ. ಏಕೆಂದರೆ ''ದೇವದತ್ತನು ಮನೆಯಲ್ಲಿ'' ಇಲ್ಲ ಎಂದರೆ ಅವನು ಎಲ್ಲಿಯೋ ಹೊರಗೆ ಹೋಗಿದ್ದಾನೆ ಎಂಬ ಪ್ರಮೇಯವು ಸಿದ್ಧಿಸುವುದೇ ಹೊರತು ದೇವದತ್ತನೇ ಇಲ್ಲ ಎಂದು ಹೇಳಲಾದೀತೆ ? ಆದುದರಿಂದ ಶುಕ್ತಿರಜತಸ್ಥಳದಲ್ಲಿ ಶುಕ್ತಿಗೂ ರಜತತ್ವಕ್ಕೂ ಸಂಬಂಧವೇರ್ಪಟ್ಟಿಲ್ಲ-ವೆಂದಾಗ್ಯೂ, ಶುಕ್ತಿಯಾಗಲಿ, ರಜತವಾಗಲಿ, ಪ್ರಮೇಯವಲ್ಲವೆಂದು ಹೇಳಲಾಗುವುದಿಲ್ಲ.

ಸರಿ ಈ ಮೇಲೆ ಹೇರಿದ ದೋಷಾರೋಪಣೆಯು ಸಿದ್ಧಾಂತಿಗಳಾದ ನಮಗೆ ಸಲ್ಲುವುದಿಲ್ಲ. ಶುಕ್ತಿಯಲ್ಲಿ ಭಾಸವಾಗುವ ರಜತತ್ತ್ವವು ಸ್ಥಳಾಂತರದಲ್ಲಿ ಇರುವುದೆಂದು ಒಪ್ಪುವವರಿಗೆ ಆ ದೋಷವು ಸಲ್ಲುತ್ತದೆ. ಹಿಂದೆ ಇರಲಿಲ್ಲ, ಈಗ ಇಲ್ಲ, ಮುಂದೆ ಇರುವುದಿಲ್ಲ, ಎಂಬ ತ್ರಿಕಾಲಗಳಲ್ಲಿ ನಿಷೇಧಿಸಲ್ಪಡುವ ರಜತವು ದೋಷವಶದಿಂದಲೂ, ಹೊಳಪಿನ ಹೋಲಿಕೆಯಿಂದಲೂ ಈ ಶುಕ್ತಿಯಲ್ಲಿ ಆರೋಪಿಸಲಾಗುತ್ತಿದೆ ಎಂಬ ವಾದ ಹುಟ್ಟಿದಾಗ ಆ ದೂಷಣೆಗೆ ಆಸ್ಪದವೇ ಇಲ್ಲ.

ಹೀಗೆ ಹೇಳಿದ್ದರಿಂದ ಮುಂದೆ ಕೆಂಡದಲ್ಲಿ ಕಾಯಿಸಿ ಪಾಕ ಮಾಡಿದ ಮೇಲೆ ಕೆಂಪು ಬಣ್ಣಕ್ಕೆ ಬರಲಿರುವ ಗಡಿಗೆಯು ಹಸಿ ಇದ್ದುದರಿಂದ ಶ್ಯಾಮ ಬಣ್ಣವಾಗಿ ಕಾಣುವ ವೇಳೆಯಲ್ಲಿ ರಕ್ತಪಿತ್ತ ರೋಗಿಯ ಕಣ್ಣಿಗೆ ಕೆಂಪು ಬಣ್ಣವಾಗಿ ತೋರುತ್ತಿದ್ದರೆ ಅದನ್ನೂ ತತ್ತ್ವವೆಂದು ಕರೆಯಬಹುದು ಎಂಬ ಬರಡು ವಾದವನ್ನೂ ನಿರಾಕರಿಸಿದಂತಾಯಿತು.

ಏಕೆಂದರೆ ಆ ಹಸಿ ಗಡಿಗೆಯು ಮುಂದೆ ಸರಿಯಾದ ಗಡಿಗೆಯೆನಿಸಿದಾಗ ಅದಕ್ಕೆ ಪ್ರಮೇಯತ್ವವುಂಟಾದರೂ, ಅದಕ್ಕಿಂತ ಮೊದಲಿನ ಗಡಿಗೆಗೆ ಪ್ರಮೇಯತ್ವವಿರುವುದಿಲ್ಲ. ಯಾವುದು ಧರ್ಮಿಯೋ ಅದನ್ನೇ ತತ್ತ್ವವೆಂದು ಅಂಗೀಕರಿಸಿರುವರು. ಆರೋಪಿತವಾದದ್ದನ್ನು ಅಲ್ಲ.

ಭಾವದೀಪ—

ನ್ಯಾಯಮತಾವಷ್ಟಂಭೇನ ಖಂಡನಕೃದುಕ್ತಖಂಡನಂ ಶಂಕಿತ್ವಾ ಸಿದ್ಧಾಂತದಿಶೋತ್ತರಮಾಹ ನನ್ವಿತ್ಯಾದಿನಾ ನಾಯಂ ದೋಷ ಇತ್ಯಂತೇನ ॥ ಧರ್ಮೀ ವೇತಿ । ರಜತಂ ವೇತ್ಯರ್ಥಃ । ಪಟ್ಟಣಾದೌ ರಜತಸ್ಯ ತತ್ರ ರಜತತ್ವಸ್ಯ ಚಾನುಭವಾತ್ ತಸ್ಯೈವ ಸತ್ಯರಜತಸ್ಯಾನ್ಯತ್ರಾರೋಪಾದಿತಿ ಭಾವಃ । ಪ್ರಮೇಯಂ ಪ್ರಮಾವಿಷಯ ಇತ್ಯರ್ಥಃ । ತಾದಾತ್ಮ್ಯಾರೋಪಾ-

Rarest Archive

ಭಿಪ್ರಾಯೇಣ ಧರ್ಮಿ ವೇತಿ । ಸಂಸರ್ಗಾರೋಪಾಭಿಪ್ರಾಯೇಣ ರಜತತ್ವಂ ವೇತ್ಯುಕ್ತಮ್ ॥ ತಯೋರಿತಿ । ರಜತರಜತತ್ವಯೋಃ ಸಂಬಂಧಃ ತಾದಾತ್ಮ್ಯರೂಪಃ ಸಂಸರ್ಗರೂಪೋ ವಾ ಪ್ರಮೇಯ ಇತ್ಯನುಷಂಗಃ । ಸತ್ಯರಜತೇ ತಸ್ಯ ಪ್ರಮೀಯಮಾಣತ್ವಾತ್ ತಸ್ಯೈವ ಚ ಶುಕ್ತೌ ಪ್ರತೀತ್ಯಭ್ಯುಪಗಮಾದಿತಿ ಬಾವಃ ॥ ಶಂಕತೇ ಶುಕ್ತೀತಿ ॥ ಸ ಇತಿ । ಸಂಬಂಧ ಇತ್ಯರ್ಥಃ ।

ನಾಯಂ ದೋಷ ಇತಿ । ಆರೋಪಿತಸ್ಯ ಪ್ರಮೇಯತ್ವಪ್ರಸಂಗದೋಷೋ ನೇತ್ಯರ್ಥಃ । ಅನ್ಯದಪಿ ಖಂಡನೋಕ್ತಂ ನಿರಾಹ ಏತೇನೇತಿ । ಅತ್ಯಂತಾಸತ ಏವ ಭ್ರಾಂತೌ ಭಾನಾಭ್ಯುಪಗಮೇನೇತ್ಯರ್ಥಃ ॥ ತತ್ತ್ವಂ ಸ್ಯಾದಿತಿ । ತತ್ರ ರಾಗಸಂಬಂಧಸ್ಯ ಸತ್ತ್ವಾದಿತಿ ಭಾವಃ ॥ ಅತಥಾತ್ವಾದಿತಿ । ಅತ್ಯಂತಾಸತ್ತ್ವೇನ ತಸ್ಯ ಪ್ರಮಾವಿಷಯತ್ವಾದಿತಿ ಭಾವಃ । ಧರ್ಮಿ ಘಟೋಽಪ್ಯಪ್ರಮೇಯಃ ಕಿಮಿತ್ಯತ ಆಹ ಧರ್ಮಿಣ ಇತಿ ।

ನನ್ವಿತ್ಯಾದಿನಾ— ನ್ಯಾಯಮತವನ್ನು ಅವಲಂಬಿಸಿ ಖಂಡನಗ್ರಂಥಕಾರರು ಈ ಗ್ರಂಥದ ಮೇಲೆ ಖಂಡನ ಮಾಡಿದ್ದಾರೆ. ಅದನ್ನು ಇಲ್ಲಿ ಆಶಂಕಿಸಿ ಸಿದ್ಧಾಂತರೀತಿಯಿಂದ ಉತ್ತರವನ್ನು ಹೇಳಿದ್ದಾರೆ. ನನು ಎಂಬಲ್ಲಿ ಆಶಂಕೆಯು ತೋರುತ್ತದೆ. ನಾಯಂ ದೋಷಃ (ಇದು ದೋಷವಲ್ಲ) ಎಂಬಲ್ಲಿ ಉತ್ತರವು ಕಂಡಿದೆ.

ಧರ್ಮಿ ವೇತಿ— ರಜತಂ ವಾ (ರಜತವೇ ಆಗಲಿ) ಎಂದರ್ಥ. ಪಟ್ಟಣ ಮುಂತಾದವುಗಳಲ್ಲಿ ರಜತವು ಇರುತ್ತದೆ. ಅದರಲ್ಲಿ ರಜತತ್ವವುಂಟು. ಇದು ಅನುಭವಸಿದ್ಧವಾಗಿದೆ. ಅಂತಹ ಸತ್ಯವಾದ ರಜತವನ್ನೇ ಶುಕ್ತಿ ಮುಂತಾ-ದವುಗಳಲ್ಲಿ ಆರೋಪಿಸುವುದಕ್ಕೆ ಬರುತ್ತದೆ ಎಂದು ಬಾವ. ಪ್ರಮೇಯಂ ಎಂದರೆ ಸರಿಯಾದ ತಿಳಿವಳಿಕೆಗೆ ವಿಷಯವಾದುದು ಎಂದರ್ಥ. ಶುಕ್ತಿಯಲ್ಲಿ ರಜತವನ್ನು ಆರೋಪ ಮಾಡುವಾಗ ತಾದಾತ್ಮ್ಯವೆಂಬ ಸಂಬಂಧದಿಂದ ಆರೋಪ ಮಾಡಲಾಗುವುದು ಎಂಬ ಅಭಿಪ್ರಾಯದಿಂದ ಧರ್ಮಿ ವಾ ಎಂದಿದ್ದಾರೆ. ಮತ್ತು ಸಂಸರ್ಗವೆಂಬ ಸಂಬಂಧವನ್ನು ಆರೋಪ ಮಾಡಲಾಗುತ್ತದೆ ಎಂಬ ಅಭಿಪ್ರಾಯದಿಂದ ರಜತತ್ತ್ವಂ ವಾ ಎಂದಿದ್ದಾರೆ.

ತಯೋರಿತಿ— ರಜತದ ಮತ್ತು ರಜತತ್ವದ ಸಂಬಂಧವು ತಾದಾತ್ಮ್ಯದ ರೂಪದ್ದಾದರೂ ಆಗಿರಬಹುದು, ಸಂಸರ್ಗರೂಪದ್ದಾದರೂ ಆಗಿರಬಹುದು, ಆದರೂ ಆ ಸಂಬಂಧವು ಪ್ರಮೇಯವೇ ಆಗಿದೆ. ಪ್ರಮೇಯವೆಂಬ ಪದವನ್ನು ಅನುಷಂಗಮಾಡಿಕೊಳ್ಳಬೇಕು. ಅದೆಂದರೆ, ಪೂರ್ವವಾಕ್ಯದಲ್ಲಿರುವ ಪದವನ್ನು ಪ್ರಕೃತವಾಕ್ಯಕ್ಕೆ ಅರ್ಥ ಘಟನೆಯಾಗುವಂತೆ ಅನ್ವಯಿಸುವುದು ಎಂದರ್ಥ. ಅದು ಹೇಗೆ ಪ್ರಮೇಯವಾಗುತ್ತದೆ ? ಎಂದರೆ, ಸತ್ಯವಾದ ರಜತದಲ್ಲಿ ರಜತತ್ತ್ವವು ಪ್ರಾಮಾಣಿಕವಾಗಿ ತೋರುತ್ತದೆ. ಅದೇ ರಜತತ್ತ್ವವು ಶುಕ್ತಿಯಲ್ಲಿಯೂ ತೋರುತ್ತದೆ ಎಂದು ಒಪ್ಪಿರುವುದರಿಂದ ಅದು ಪ್ರಮೇಯವಾಗಬಹುದು ಎಂದು ಬಾವ.

ಶುಕ್ತೀತಿ, ಸ ಇತಿ— ಶುಕ್ತಿಯಲ್ಲಿ ರಜತತ್ತ್ವವು ತೋರುವಾಗ ರಜತ-ರಜತತ್ತ್ವಗಳ ಸಂಬಂಧವನ್ನು ಪ್ರಮೇಯ-ವಲ್ಲವೆಂದು ಹೇಳುವುದಕ್ಕಾದೀತೆ ? ಎಂದು ಆಶಂಕಿಸಿದ್ದಾರೆ. ಸಃ ಎಂದರೆ ಆ ಸಂಬಂಧವೆಂದರ್ಥ.

ನಾಯಂ ದೋಷ ಇತಿ— "ಆರೋಪಿತವಾದ್ದೂ ಸಹ ಪ್ರಮೇಯವಾಗಲಿ" ಎನ್ನುವ ಪ್ರಸಂಗದೋಷವು ಹತ್ತುವುದಿಲ್ಲ ಎಂದರ್ಥ.

ಏತೇನೇತಿ— ಖಂಡನಕಾರರು ಹೇಳಿದ ಇನ್ನೊಂದು ವಿಷಯವನ್ನೂ ನಿರಾಕರಿಸುತ್ತಾರೆ. ಅತ್ಯಂತ ಅಸತ್ತು ಎಂದರೆ ಎಂದಿಗೂ ಇಲ್ಲದ್ದು, ಅದೇ ಭ್ರಾಂತಿಯಲ್ಲಿ ತೋರುವುದು ಎಂದು ಒಪ್ಪಿರುವುದರಿಂದ ಅರೆಬೆಂದ ಮಡಕೆ-

Rarest Archiver

ಯಲ್ಲಿ ಕಾಣುವ ಕೆಂಪು ಬಣ್ಣವು ಪ್ರಮೇಯವಾಗಲಾರದು, ಅದು ಭ್ರಾಂತಿ ಎಂದರ್ಥ.

ತತ್ತ್ವಂ ಸ್ಯಾದಿತಿ— ಅರೆಬೆಂದ ಮಡಕೆಯಲ್ಲಿ ಕೆಂಪು ಬಣ್ಣದ ಸಂಬಂಧವಿರುವುದರಿಂದ ಅದೂ ಪ್ರಮೇಯ-ವೆಂದಾದೀತು ಎಂದು ಭಾವ.

ಅತಥಾತ್ವಾದಿತಿ— ಅರೆಬೆಂದ ಮಡಕೆಯಲ್ಲಿ ತೋರುವ ಕೆಂಪು ಬಣ್ಣವು ಅತ್ಯಂತ ಅಸತ್ತು, ಆದುದರಿಂದ ಪ್ರಮೆಗೆ ವಿಷಯವಾಗಲಾರದು ಎಂದು ಭಾವ.

ಧರ್ಮಿಣಃ ಇತಿ— ಧರ್ಮಿಯಾದ ಮಡಕೆಯೂ ಸಹ ಪ್ರಮೇಯವಲ್ಲವೇನು ? ಎಂದರೆ, ಅದನ್ನು ಪ್ರಮೇಯವೆಂದು ಒಪ್ಪಲಾಗಿದೆ ಎಂದಿದ್ದಾರೆ.

ಸ್ವರೂಪೇತ್ಯಾದಿ— ಕೆಲವರು ಸ್ವರೂಪವನ್ನೇ ಧರ್ಮಿಯ (ವಸ್ತುವಿನ) ಸತ್ತಾ (ಇರುವಿಕೆ) ಎಂದು ಹೇಳುವರು. ಮತ್ತೆ ಕೆಲವರು ಪ್ರಮಿತಿಯನ್ನು ಸತ್ತಾ ಎನ್ನುವರು. ಇನ್ನು ಕೆಲವರು ಪ್ರವೃತ್ತಿಗೆ ಸತ್ತಾ ಎನ್ನುವರು. ಈ ಮೂರು ಮತಗಳ ಅನುಸಾರವಾಗಿ ಸ್ವತಂತ್ರ ತತ್ತ್ವದ ಲಕ್ಷಣವನ್ನು ಹೇಳಿದ್ದಾರೆ.

ಟೀಕಾ—

ತತ್ತ್ವಂ ದ್ವಿವಿಧಮ್ । ಸ್ವತಂತ್ರಮಸ್ವತಂತ್ರಂ ಚೇತಿ ಇತಿ ಇತಿಶಬ್ದಾಧ್ಯಾಹಾರೇಣ ಯೋಜ್ಯಮ್ । ಅನ್ಯಥಾ ಸ್ವತಂತ್ರಮಸ್ವತಂತ್ರಂ ಚ ತತ್ತ್ವಂ ಪ್ರತ್ಯೇಕಂ ದ್ವಿವಿಧಮಿತಿ ಪ್ರತೀತಿಃ ಸ್ಯಾತ್ । ಸ್ವರೂಪಪ್ರಮಿತಿಪ್ರವೃತ್ತಿಲಕ್ಷಣ-ಸತ್ತಾತ್ರೈವಿಧ್ಯೇ ಪರಾನಪೇಕ್ಷಂ ಸ್ವತಂತ್ರಮ್ । ಪರಾಪೇಕ್ಷಮಸ್ವತಂತ್ರಮ್ ।

ತದುಪಪಾದನಾಯೋಕ್ತಂ ಇಷ್ಯತೇ ಇತಿ । ಪ್ರಾಮಾಣಿಕೈಃ ಇತಿ ಶೇಷಃ । ತಥಾ ಹಿ— ಯದಿ ತತ್ತ್ವಮೇವ ನಾಸ್ತೀತಿ ಬ್ರೂಯಾತ್ ತದಾ ಪ್ರತ್ಯಕ್ಷಾದಿವಿರೋಧಃ । ಸಾ ಭ್ರಾಂತಿರಿತಿ ಚೇನ್ನ । ಬಾಧಕಾಭಾವಾತ್ । ನ ಚ ನಿರಧಿಷ್ಠಾನಾ ಭ್ರಾಂತಿರಸ್ತಿ । ನಾಪಿ ನಿರವಧಿಕೋ ಬಾಧಃ । ನಾಸ್ತ್ಯೇವ ತತ್ತ್ವಮಿತ್ಯಸ್ಯಾರ್ಥಸ್ಯ ಪ್ರಮಿತತ್ವಾಪ್ರಮಿ-ತತ್ವಯೋಃ ವ್ಯಾಘಾತಶ್ಚ ।

ಈಗ ಒಳಭೇದವನ್ನೂ ಸ್ವತಂತ್ರ, ಅಸ್ವತಂತ್ರ ತತ್ತ್ವಗಳ ಲಕ್ಷಣಗಳನ್ನೂ ತಿಳಿಸುತ್ತಾರೆ.

ಆ ತತ್ತ್ವವು ಎರಡು ಬಗೆಯಾಗಿದೆ. ಸ್ವತಂತ್ರ ತತ್ತ್ವ, ಅಸ್ವತಂತ್ರ ತತ್ತ್ವ ಎಂಬಿವೆ ಆ ವಿಧಗಳು. ಮೂಲದಲ್ಲಿನ ''ಸ್ವತಂತ್ರಮಸ್ವತಂತ್ರಂ ಚ'' ಎಂಬ ಕಾರಿಕೆಗೆ ಅರ್ಥ ಹೇಳುವಾಗ ಇತಿ ಎಂಬ ಶಬ್ದವನ್ನು ಅಧ್ಯಾಹಾರ ಮಾಡಿ-ಕೊಳ್ಳಬೇಕು. ಇಲ್ಲದಿದ್ದರೆ ಅಸ್ವತಂತ್ರ ತತ್ತ್ವದಲ್ಲಿ ಹೇಗೆ ಎರಡು ವಿಧಗಳಿವೆಯೊ, ಹಾಗೆಯೇ ಸ್ವತಂತ್ರ ತತ್ತ್ವ-ದಲ್ಲಿಯೂ ಎರಡು ವಿಧಗಳಿರಬಹುದು ಎಂಬ ತಿಳುವಳಿಕೆಯುಂಟಾಗಲು ಅವಕಾಶವಿದೆ. ಇತಿ ಶಬ್ದವನ್ನು ಅಧ್ಯಾಹಾರ ಮಾಡಿಕೊಂಡರೆ ಹಾಗೆ ಬೇರೆ ವಿಧದ ತಿಳಿವಳಿಕೆಯುಂಟಾಗಲು ಅವಕಾಶವಿಲ್ಲ.

ಸ್ವತಂತ್ರ ತತ್ತ್ವವೆಂದರೇನು ?

ಸ್ವರೂಪ (ವಸ್ತುವಿನ ಮೂಲರೂಪ) ಪ್ರಮಿತಿ (ಅದರ ಹೊರ ಒಳಮೈಗಳ ಅಳತೆ, ಗಾತ್ರ, ತೂಕ, ಬಣ್ಣ, ರುಚಿ, ಮುಂತಾದ ಸರಿಯಾದ ತಿಳಿವಳಿಕೆ) ಪ್ರವೃತ್ತಿ (ಅದು ಯಾವುದನ್ನು ಕುರಿತು ಹೊರಡುವುದೋ ಅಂತಹ ಕೆಲಸದಲ್ಲಿ

Rarest Archiver

ತೊಡಗುವುದು) ಈ ಮೂರು ವಾಸ್ತವಿಕ ಗುಣಗಳನ್ನು 'ಇರುವಿಕೆ' ಅಥವಾ 'ಸತ್ತಾ' ಎಂದು ಕರೆಯುತ್ತಾರೆ. ಈ ಮೂರುವಿಧದ ಇರುವಿಕೆಯಲ್ಲಿ, ಯಾರ ಅಪೇಕ್ಷೆಯ ಲೇಶವೂ ಯಾರಿಗೂ ಅಗತ್ಯವಿಲ್ಲವೊ ಅವನು ಸ್ವತಂತ್ರತತ್ತ್ವ-ವೆನಿಸುವನು.

ಅಸ್ವತಂತ್ರ ತತ್ತ್ವವೆಂದರೇನು ?

ಈ ಹಿಂದೆ ಹೇಳಿದ ಮೂರು ವಿಧದ ಇರುವಿಕೆಯಲ್ಲಿ ಯಾವುದು ಇತರ ವಸ್ತುವಿನ ಅಪೇಕ್ಷೆಯನ್ನು ಅನುಸರಿಸುವುದೊ ಅದು ಅಸ್ವತಂತ್ರ ತತ್ತ್ವವೆನಿಸುವುದು.

ಇದನ್ನು ಪ್ರತಿಪಾದಿಸುವುದಕ್ಕಾಗಿಯೇ ಮೂಲಕಾರಿಕೆಯಲ್ಲಿ 'ಇಷ್ಯತೆ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. 'ಇಷ್ಯತೆ' ಎಂದರೆ ಒಪ್ಪಿಕೊಳ್ಳಲಾಗಿದೆ ಎಂದರ್ಥ. 'ಪ್ರಾಮಾಣಿಕೈಃ' ಎಂಬ ಪದವನ್ನು ಸೇರಿಸಿಕೊಂಡು ಅರ್ಥ ಹೇಳಬೇಕು. ಮೇಲಿನ ಅಭಿಪ್ರಾಯವನ್ನು ಸ್ವಂತವಾಗಿ ನಾವಾಗಲಿ, ಜನಸಾಮಾನ್ಯರಾಗಲಿ, ಒಪ್ಪಿಕೊಂಡದ್ದು ಮಾತ್ರವಲ್ಲ. ''ಪ್ರತ್ಯಕ್ಷಾದಿ ಪ್ರಮಾಣಗಳನ್ನು ಅಂಗೀಕರಿಸಿದ ಪ್ರೇಕ್ಷಾವಂತರೂ ಸಹ ಒಪ್ಪಿಕೊಂಡಿದ್ದಾರೆ.'' ಎಂಬ ಭಾವವು 'ಪ್ರಾಮಾಣಿಕೈಃ' ಎಂಬ ಪದವನ್ನು ಶೇಷಪೂರಣ ಮಾಡಿಕೊಂಡದ್ದರಿಂದ ಹೊರ ಹೊಮ್ಮಿದೆ.

ತತ್ತ್ವಗಳ ವಿಚಾರದಲ್ಲಿ ಪ್ರೇಕ್ಷಾವಂತರ ಈ ಒಡಂಬಡಿಕೆಯು ಯುಕ್ತವೇ ಆಗಿದೆ. ಅದು ಹೇಗೆಂದರೆ— ಪ್ರಪಂಚದಲ್ಲಿ ತತ್ತ್ವವೇ ಇಲ್ಲವೆಂದು ಹೇಳುವುದಾದರೆ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಗೋಚರಿಸುವ ವಸ್ತುಗಳು ಸುಳ್ಳಾಗಬೇಕಾದೀತೆಂಬ ವಿರೋಧ ಬರುವುದು. ಹಾಗೆ ತೋರುವ ಪದಾರ್ಥಗಳು ಭ್ರಾಂತಿ ಮೂಲಕವಾಗಿ ತೋರುತ್ತವೆ ಎನ್ನುವಂತಿಲ್ಲ. ಏಕೆಂದರೆ ಭ್ರಾಂತಿಜ್ಞಾನವು ಅನಂತರಕಾಲದಲ್ಲಿ ಬಂದ ಭಾದಜ್ಞಾನದಿಂದ ನಷ್ಟ-ವಾಗುವುದೆಂಬ ನಿಯಮವಿದೆ. ಇಲ್ಲಿ ಅನಂತರಕಾಲದಲ್ಲಿ ಬೇರೆ ಬಗೆಯ ಬಾಧಜ್ಞಾನ ಹುಟ್ಟುವುದಕ್ಕೆ ಅವಕಾಶವೇ ಇಲ್ಲ. ಅಲ್ಲದೆ ಭ್ರಾಂತಿಯು ಹುಟ್ಟಬೇಕಾದರೆ ಯಾವುದಾದರೂ ಆಶ್ರಯವನ್ನು ಹೊಂದಿಕೊಂಡೇ ಹುಟ್ಟಬೇಕು. ಆಶ್ರಯರಹಿತವಾಗಿ ಯಾವ ಭ್ರಾಂತಿಯೂ ಹುಟ್ಟಲಾರದು. ಪ್ರಕೃತದಲ್ಲಿ ಸರ್ವಥಾ ತತ್ತ್ವವೇ ಇಲ್ಲವೆಂದಿರುವಾಗ ಆಶ್ರಯವೂ ಇಲ್ಲವೆಂದಂತಾಯಿತು. ಅದನ್ನು ಅವಲಂಬಿಸಿ ಹುಟ್ಟಲಿರುವ ಭ್ರಾಂತಿಯೂ ಇಲ್ಲವಾಗುತ್ತದೆ.

ಮತ್ತು ಬಾಧಜ್ಞಾನ ಹುಟ್ಟಲು ಅದಕ್ಕೆ ಒಂದು ನಿಯಮಿತವಾದ ಅವಧಿ ಇರಬೇಕು. ಅದು ಕಾಲದ ಅಥವಾ ಸ್ಥಳದ ಅವಧಿಯಾಗಿರಬಹುದು. ಹೀಗೆ ಎಲ್ಲಿಯೂ ಅವಧಿರಹಿತವಾದ ಬಾಧಜ್ಞಾನ ಹುಟ್ಟಲೂ ಅವಕಾಶವಿಲ್ಲ, ಆದುದರಿಂದ ತತ್ತ್ವವೇ ಇಲ್ಲವೆಂಬ ವಾದವು ಸಾಧುವಲ್ಲ.

ಈಗ ತತ್ತ್ವವೆ ಇಲ್ಲವೆಂಬ ಮಾತಿಗೆ ಪ್ರಮಾಣವುಂಟೆ ? ಇಲ್ಲವೆ ? ಎಂದು ಕೇಳಿದರೆ ಉಂಟು ಅಥವಾ ಇಲ್ಲವೆಂದು ಪ್ರಕಾರವಾಗಿ ಉತ್ತರ ಹೇಳಿದರೂ ಪೂರ್ವೋತ್ತರವಾಕ್ಯಗಳಿಗೆ ಪರಸ್ಪರ ವಿರೋಧ ಬರುವುದು ಹೇಗೆಂದರೆ; ಪ್ರಮಾಣವುಂಟು ಎಂದರೆ; ಪ್ರಮಾಣವೇ ಒಂದು ತತ್ತ್ವವಾದುದರಿಂದ ತತ್ತ್ವವಿಲ್ಲವೆಂಬ ಮಾತಿಗೆ ವಿರೋಧ ಬರುವುದು. ಪ್ರಮಾಣವಿಲ್ಲವೆಂದರೆ; ಪ್ರತ್ಯಕ್ಷಾದಿ ಪ್ರಮಾಣಗಳಿಂದ ಗೋಚರಿಸುವ ವಸ್ತುಗಳನ್ನು ಅಪಲಾಪ ಮಾಡಿದಂತಾಗುವುದು. ಹೀಗೆ ಬರುವ ವಿರೋಧಕ್ಕೆ ಶಾಸ್ತ್ರದಲ್ಲಿ ವ್ಯಾಘಾತವೆಂದು ಹೆಸರು.

ಭಾವದೀಪ—

ಕೇಚಿತ್ಸ್ವರೂಪಮೇವ ಧರ್ಮಿಣಃ ಸತ್ತಾಮಾಹುಃ । ಅನ್ಯೇ ಪ್ರಮಿತಿಮ್ । ಅಪರೇ ಪ್ರವೃತ್ತಿಮ್ । ಅತೋ ಮತತ್ರಯಾನುರೋಧೇನಾಹ ಸ್ವರೂಪೇತ್ಯಾದಿ । ತದುಪಪಾದನಾಯೇತಿ । ಸ್ವಾತಂತ್ರ್ಯಪಾರತಂತ್ರ್ಯಭೇದೇನ ತತ್ತ್ವ-

Rarest Archiver

ದ್ವೈವಿಧ್ಯೋಪಪಾದನಾಯೇತ್ಯರ್ಥಃ । ಸಾ ಭ್ರಾಂತಿರಿತಿ । ವಿಧೇಯಾಪೇಕ್ಷಯಾ ಸ್ತ್ರೀಲಿಂಗೋಕ್ತಿಃ । ಘಟಃ ಸನ್ ಪಟಃ ಸನ್ ಇತ್ಯಾದಿಪ್ರತ್ಯಕ್ಷಾದಿರಿತ್ಯರ್ಥಃ । ಭ್ರಾಂತಿಬಾಧಾವಂಗೀಕುರ್ವಾಣೇನಾಪಿ ಆರೋಪಾಧಿಷ್ಠಾನತ್ವೇನ ಇದಂ ಏವಂ ನೇತಿ ಬಾಧಾವಧಿತ್ವೇನ ವಾ ಶುಕ್ತಿರಜತಾದೌ ಇದಂ ರಜತಂ ನೇದಂ ರಜತಂ ಇತ್ಯಾದಾವಿವ ಕಿಂಚಿತ್ ತತ್ತ್ವಮಭ್ಯುಪೇಯಮ್। ಅನ್ಯಥಾ ತಾವುಭೌ ನ ಸ್ಯಾತಾಮಿತಿ ಭಾವೇನಾಹ ನ ಚೇತಿ ॥ ಇತ್ಯಸ್ಯಾರ್ಥಸ್ಯೇತಿ । ತತ್ತ್ವಾಭಾವರೂಪಾರ್ಥಸ್ಯ ಪ್ರಮಿತತ್ವೇ ಸ ಏವ ತತ್ತ್ವಮಿತಿ ತತ್ತ್ವಾಭಾವೋಕ್ತಿರ್ವ್ಯಾಹತಾ । ಅಪ್ರಮಿತತ್ವೇ ಭಾವರೂಪತತ್ತ್ವಮೇವ ನಾಸ್ತೀತಿ ತತ್ತ್ವಾಭಾವೋಕ್ತಿರ್ವ್ಯಾಹತೇತ್ಯರ್ಥಃ ।

ತದುಪಪಾದನಾಯೇತಿ— ಸ್ವಾತಂತ್ರ್ಯ ಪಾರತಂತ್ರ್ಯವೆಂಬ ಭೇದದಿಂದ ತತ್ತ್ವಗಳ ದ್ವೈವಿಧ್ಯವನ್ನು ಪ್ರತಿಪಾದಿಸುವುದಕ್ಕಾಗಿ ಮೂಲದಲ್ಲಿ 'ಇಷ್ಯತೇ' ಎಂದು ಹೇಳಿದ್ದಾರೆ.

ಸಾ ಭ್ರಾಂತಿರಿತಿ— ಇಲ್ಲಿ ತತ್ತ್ವಂ ಎಂಬುದು ನಪುಂಸಕಲಿಂಗವಾಗಿದ್ದರೂ ಭ್ರಾಂತಿ ಶಬ್ದವು ಸ್ತ್ರೀಲಿಂಗವಾದುದರಿಂದ 'ಸಾ ಭ್ರಾಂತಿಃ' ಎಂದು ಸ್ತ್ರೀಲಿಂಗದಲ್ಲಿ ಹೇಳಲಾಗಿದೆ. ಉದ್ದೇಶ್ಯ-ವಿಧೇಯಗಳಲ್ಲಿ ವಿಧೇಯವೇ ಪ್ರಧಾನವಾದುದರಿಂದ ಸ್ತ್ರೀಲಿಂಗದಲ್ಲಿ ಹೇಳಲಾಗಿದೆಯೆಂದು ಗಮನಿಸಬೇಕು. ಪ್ರತ್ಯಕ್ಷವಿರೋಧವೆಂದರೆ ಯಾವುದು ? ಎಂದರೆ, ''ಘಟವಿದೆ, ಪಟವಿದೆ'' ಇತ್ಯಾದಿಗಳು ಪ್ರತ್ಯಕ್ಷಗಳು. ಇವಕ್ಕೆ ವಿರೋಧ ಬರುತ್ತದೆ ಎಂದರ್ಥ.

ಭ್ರಾಂತಿಗೆ ಒಂದು ಅಧಿಷ್ಠಾನವನ್ನೂ ಬಾಧಕ್ಕೆ ಒಂದು ಅವಧಿಯನ್ನೂ ಸರ್ವರೂ ಒಪ್ಪಲೇಬೇಕು. ಹಾಗೆ ಒಪ್ಪಿದಾಗ ಆರೋಪದ ಅಧಿಷ್ಠಾನದಲ್ಲಿ ''ಇದು ಹೀಗಲ್ಲ'' ಎಂದು ಹೇಳಬೇಕು. ಇದರ ಹಾಗೆ ಶುಕ್ತಿರಜತಸ್ಥಳದಲ್ಲಿ ''ಇದು ಬೆಳ್ಳಿಯಲ್ಲ'' ಎಂದು ಹೇಳಬೇಕು. ಆಗ ಆರೋಪದ ಅಧಿಷ್ಠಾನವನ್ನೂ ಬಾಧದ ಅವಧಿಯನ್ನೂ ತತ್ತ್ವವೆಂದು ಅಂಗೀಕಾರ ಮಾಡಲೇಬೇಕು. ಇಲ್ಲವಾದರೆ ಭ್ರಾಂತಿ ಬಾಧಗಳು ಇಲ್ಲವಾಗಲಿ ಎನ್ನುವ ಪ್ರಸಂಗ ಬಂದೀತು. ಇದನ್ನು ಪರಿಹರಿಸಲು ''ನ ಚೇತಿ'' ಎಂಬ ವಾಕ್ಯವನ್ನು ಹೇಳಲಾಗಿದೆ.

ನ ಚೇತಿ, ಇತ್ಯಸ್ಯಾರ್ಥಸ್ಯೇತಿ— ''ತತ್ತ್ವವಿಲ್ಲ'' ಎಂಬ ಮಾತು ಪ್ರಾಮಾಣಿಕವಾದರೆ ಅದೇ ತತ್ತ್ವವೆಂದಾಗಿ ತತ್ತ್ವವಿಲ್ಲವೆಂಬ ಮಾತಿಗೆ ವಿರೋಧ ಬರುತ್ತದೆ. ಅಪ್ರಾಮಾಣಿಕವೆಂದಾದರೆ ತತ್ತ್ವಾಭಾವದ ಅಭಾವವು ಭಾವರೂಪದ ತತ್ತ್ವವೆಂದಾಗಿ ತತ್ತ್ವವಿಲ್ಲ ಎಂಬ ಮಾತಿಗೆ ವಿರೋಧ ಬರುತ್ತದೆ.

ಟೀಕಾ—

ಯದಿ ಚೈಕಮೇವ ತತ್ತ್ವಂ, ತದಾ ಭೇದೋಪಲಂಭವಿರೋಧಃ, ತದ್ಭ್ರಾಂತಿತಾಯಾಂ ಚ ಬಾಧಕಂ ವಾಚ್ಯಮ್ । ತಚ್ಚಾನ್ಯತ್ರ ನಿರಸ್ತಮ್ ।

ಯದಿ ವಾ ಸರ್ವಮೇವ ಸ್ವತಂತ್ರಂ ಸ್ಯಾತ್, ತದಾ ಪಾರತಂತ್ರ್ಯಾದಿಪ್ರತೀತಿವಿರೋಧಃ । ನಿತ್ಯಸುಖಾದಿಪ್ರಸಂಗಶ್ಚ ।

ಯದಿ ವಾಽಸ್ವತಂತ್ರಮೇವ ತತ್ತ್ವಂ ಭವೇತ್ ಅನವಸ್ಥಿತೇರಸಂಭವಾಚ್ಚ ನ ಕಸ್ಯಾಪಿ ಸತ್ತಾದಿಕಂ ಸ್ಯಾತ್ । ಆಗಮವಿರೋಧಶ್ಚ ।

Rarest Archiver

ಏಕ ತತ್ತ್ವವಾದ ನಿರಾಕರಣ

ಸರಿ, ಒಂದೇ ತತ್ತ್ವವಿದೆ ಎಂದು ಹೇಳಿದರೆ ಪದಾರ್ಥಗಳಲ್ಲಿನ ಪರಸ್ಪರ ಭೇದಗಳು ಗೋಚರಿಸುತ್ತಿರುವುದರ ಅನುಭವವಿರುವುದರಿಂದ ಹಾಗೆ ಹೇಳುವುದಕ್ಕೂ ಸಾಧ್ಯವಿಲ್ಲ. ಮತ್ತು ಹಾಗೆ ತೋರುವ ಭೇದಗಳ ಮೂಲಕ 'ಒಂದೇ ತತ್ತ್ವವಿದೆ' ಎಂಬ ವಾಕ್ಯಕ್ಕೆ ವಿರೋಧ ಬರುವುದು. ಭ್ರಾಂತಿಜ್ಞಾನದಿಂದ ಆ ಪದಾರ್ಥಗಳು ಪರಸ್ಪರ ಭಿನ್ನವಾಗಿರುವಂತೆ ತೋರುತ್ತವೆ ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಈ ಮೊದಲೇ ಹೇಳಿದಂತೆ ಅದಕ್ಕೆ ಅನಂತರಕಾಲದ ಯಾವುದಾದರೊಂದು ಬಾಧಜ್ಞಾನವಿದೆಯೆಂದು ನಿರೂಪಿಸಲೇಬೇಕು. ಈ ನಿರೂಪಣೆಗೆ ಅವಕಾಶ ಯಾವಾಗಲೂ ದೊರಕುವುದಿಲ್ಲ. ಪರಕೀಯರು ಬಾಧಜ್ಞಾನವನ್ನು ಹೇಗೆ ನಿರೂಪಿಸುವರು? ಆ ನಿರೂಪಣೆ ಸರಿಯೇ? ಎಂಬ ಪ್ರಕಾರವನ್ನು ಬೇರೆ ಪ್ರಕರಣದಲ್ಲಿ ಪರಿಹರಿಸಿದ್ದಾರೆ. ಇದರಿಂದ ತತ್ತ್ವವೆ ಇಲ್ಲವೆಂಬ ಶೂನ್ಯವಾದವನ್ನೂ ಒಂದೇ ತತ್ತ್ವವೆಂಬ ಅದ್ವೈತವಾದವನ್ನೂ ಪರಿಹರಿಸಿದಂತಾಯಿತು.

ಸರ್ವಸ್ವತಂತ್ರವಾದ, ಸರ್ವಪರತಂತ್ರವಾದಗಳ ನಿರಾಕರಣ

ಈಗ ಎಲ್ಲವೂ ಸ್ವತಂತ್ರ ತತ್ತ್ವವೇ ಆಗಲಿ ಅಥವಾ ಪರತಂತ್ರ ತತ್ತ್ವವೇ ಆಗಲಿ ಎಂಬ ವಾದವನ್ನು ಪರಿಹರಿಸುತ್ತಾರೆ.

ಒಂದು ವೇಳೆ ಎಲ್ಲವೂ ಸ್ವತಂತ್ರ ತತ್ತ್ವವೇ ಆಗಲಿ ಎಂದು ಹೇಳುವುದಾದರೆ; ಆಗ ಮಾನವನು ಪರತಂತ್ರ ಎಂಬ ಅನುಭವಕ್ಕೆ ವಿರೋಧವಾಗುತ್ತದೆ. ಹೇಗೆಂದರೆ, ದೇವದತ್ತನು ಯಜ್ಞದತ್ತನಿಗೆ ಅಧೀನ, ಯಜ್ಞದತ್ತನು ಚೈತ್ರರಥನಿಗೆ ಅಧೀನ, ಎಂಬ ಅನುಭವವು ನಿತ್ಯ ಸಿದ್ಧವಾಗಿದೆ. ಮೇಲಿನ ಹೇಳಿಕೆಯು ಈ ಅನುಭವಕ್ಕೆ ವಿರೋಧವಾಗುತ್ತದೆ. ಹಾಗೇನಾದರೂ ಎಲ್ಲವೂ ಸ್ವತಂತ್ರ ತತ್ತ್ವವೆ ಆಗಿದ್ದರೆ; ಜಗತ್ತಿನಲ್ಲಿ ಎಲ್ಲರಿಗೂ ನಿತ್ಯಸುಖವೇ ಉಂಟಾಗ-ಬಹುದಾಗಿತ್ತು. ಯಾರಿಗೂ ದುಃಖಲೇಶವೆ ಆಗಬಾರದಾಗಿತ್ತು. ಇಂತಹ ಅನುಭವ ಯಾರಿಗೂ ಎಂದಿಗೂ ಆಗುವುದಿಲ್ಲ. ಆದುದರಿಂದ ಸರ್ವವೂ ಸ್ವತಂತ್ರತತ್ತ್ವವೆಂಬ ವಾದವು ಸಾಧುವಲ್ಲ.

ಹಾಗಾದರೆ ಎಲ್ಲವೂ ಪರತಂತ್ರತತ್ತ್ವವೇ ಆಗಲಿ ಎಂಬ ವಾದವೂ ಸಾಧುವಲ್ಲ. ಏಕೆಂದರೆ; ದೇವದತ್ತನೆಂಬ ತತ್ತ್ವ ಯಜ್ಞದತ್ತನೆಂಬ ತತ್ತ್ವಕ್ಕೆ ಅಧೀನ. ಅದು ಪರತಂತ್ರವಾಗಿರುವುದರಿಂದ ಯಜ್ಞದತ್ತನೆಂಬ ತತ್ತ್ವ ಯಜ್ಞರಾತನೆಂಬ ತತ್ತ್ವಕ್ಕೆ ಅಧೀನ. ಅದೂ ಪರತಂತ್ರವಾಗಿರುವುದರಿಂದ. ಎಂದು ಮುಂತಾಗಿ ಎಲ್ಲಿಗೂ ನಿಲ್ಲದೆ ಅಪ್ರಾಮಾಣಿಕ ಅನಂತ ಪದಾರ್ಥಗಳ ಕಲ್ಪನೆಯ ಪ್ರವಾಹದ ಅವಿಶ್ರಾಂತಿ ಎಂಬ ರೀತಿಯಲ್ಲಿ 'ಅನವಸ್ಥಿತಿ' ಎಂಬ ದೋಷ ಒದಗುತ್ತದೆ ಮತ್ತು ತತ್ತ್ವದ ಲಕ್ಷಣಕ್ಕೆ 'ಅಸಂಭವ' ಎಂಬ ದೋಷವೂ ಬರುತ್ತದೆ. ಇದರಿಂದ ಜಗತ್ತಿನಲ್ಲಿ ಯಾವ ತತ್ತ್ವಕ್ಕೂ ಉಳಿಗಾಲವೇ ಇಲ್ಲದಂತಾಗಿ ಅದರ ಅಸ್ತಿತ್ವಕ್ಕೆ ಧಕ್ಕೆ ಒದಗುತ್ತದೆ. ಅದೂ ಅಲ್ಲದೆ ತತ್ತ್ವಗಳ ಅಸ್ತಿತ್ವವನ್ನು ಪ್ರತಿಪಾದಿಸುವ ವೇದಾಗಮಗಳಿಗೆ ವಿರೋಧವೂ ಬರುತ್ತದೆ. ಆದುದರಿಂದ ಎಲ್ಲವೂ ಸ್ವತಂತ್ರತತ್ತ್ವವೆಂದಾಗಲೀ ಪರತಂತ್ರತತ್ತ್ವವೆಂದಾಗಲಿ ಒಪ್ಪುವುದು ಸರಿಯಲ್ಲವೆಂದು ಸಿದ್ಧವಾಯಿತು.

ಭಾವದೀಪ—

ನನ್ವಸ್ತು ನಾಮ ತತ್ತ್ವಂ ತಚ್ಚ ಬ್ರಹ್ಮರೂಪಂ ಶೂನ್ಯರೂಪಂ ವಾ ಸ್ವರಸಭಂಗುರಂ ವಿಜ್ಞಾನರೂಪಂ ವಾ ಏಕಮೇವ ನ ದ್ವಿವಿಧಮಿತ್ಯತ ಆಹ ಯದಿ ಚೇತಿ ॥ ಭೇದೋಪಲಂಭೇತಿ । ನಾಹಂ ಚೈತ್ರಃ ಅಪಿ ತು ಮೈತ್ರ ಇತ್ಯಾದಿರೂಪೇಣ

Rarest Archive

ಜೀವಾನಾಂ ಅನ್ಯೋನ್ಯಂ ಜಡಾಚ್ಚ ಜಡಾನಾಂ ಅನ್ಯೋನ್ಯಂ ಚ ಭೇದೋಪಲಂಭವಿರೋಧ ಇತ್ಯರ್ಥಃ ॥ ತಚ್ಚಾನ್ಯತ್ರೇತಿ । ದೃಶ್ಯತ್ವಾದ್ಯನುಮಾನಾದಿರೂಪಬಾಧಕಮ್ । ''ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್'' (2-2-29) ಇತ್ಯಾದಿ ಸೂತ್ರಭಾಷ್ಯಾದೌ ತತ್ತ್ವನಿರ್ಣಯಾದಿಪ್ರಕರಣೇಷು ಚ ನಿರಸ್ತಮಿತ್ಯರ್ಥಃ ॥

ಪಾರತಂತ್ರ್ಯಾದೀತಿ । ಆರಬ್ಧಕಾರ್ಯಪ್ರತಿಹತ್ಯಾ ಅನಭಿಲಷಿತಾನಿಷ್ಟಪ್ರಾಪ್ತ್ಯಾ ಚ ಪಾರತಂತ್ರ್ಯಾನುಭವಾತ್ । ಆದಿಪದೇನ ಹಿತಾಕರಣಾಹಿತಕರಣಕೃತ್ಸ್ನಪ್ರಸಕ್ತ್ಯಾದಿಗ್ರಹಃ ॥ ನಿತ್ಯಸುಖಾದೀತಿ । ''ಯದಿ ನಾಮ ನ ತಸ್ಯ ವಶೇ ಸಕಲಂ ಕಥಮೇವ ತು ನಿತ್ಯಸುಖಂ ನ ಭವೇತ್'' ಇತ್ಯುಕ್ತೇರಿತಿ ಭಾವಃ । ಆದಿಪದೇನ ದುಃಖನಿವೃತ್ತಿಃ ॥ ಅನವಸ್ಥಿತೇರಿತಿ । ಪರಾಧೀನತ್ವಾವಿಶೇಷಾದಸ್ಯಾಯಂ ನಿಯಾಮಕಃ ತಸ್ಯಾನ್ಯಃ ತಸ್ಯಾಪ್ಯಪರ ಇತಿ ಅಪರ್ಯವಸಿತಾನಂತವ್ಯಕ್ತಿಪರಂಪರಾಪತ್ತ್ಯಾ ಪೂರ್ವಪೂರ್ವನಿಯಮನಾಸಿದ್ಧ್ಯಾ ಉತ್ತರೋತ್ತರನಿಯಮನಾಸಿದ್ಧೇಃ ಮೂಲಕ್ಷಯಕರಾನವಸ್ಥಾದೋಷಾತ್ ಇತ್ಯರ್ಥಃ । ಅಭ್ಯುಪೇತ್ಯೇದಮುದಿತಮ್ । ವಸ್ತುತಸ್ತು ಪರತಂತ್ರತ್ವಾವಿಶೇಷಾದನ್ಯೇನಾನ್ಯಸ್ಯ ನಿಯಮನಮೇವಾಸಂಭವೀತ್ಯಾಹ ಅಸಂಭವಾದಿತಿ ॥ ಏಕೇನಾನ್ಯಸ್ಯ ನಿಯಮನಾಸಂಭವಾನ್ನ ಕಸ್ಯಾಪಿ ಸತ್ತಾಪ್ರತೀತಿಃ ಪ್ರವೃತ್ತಿಶ್ಚ ಸ್ಯಾದಿತ್ಯರ್ಥಃ ॥ ತದಾಹ ಸೂತ್ರಕಾರಃ ''ಅನವಸ್ಥಿತೇರಸಂಭವಾಚ್ಚ ನೇತರಃ'' (1-2-17) ಇತಿ ॥ ಆಗಮೇತಿ । ''ಪೃಥಿವೀಮಂತರೋ ಯಮಯತಿ ಆತ್ಮಾನಮಂತರೋ ಯಮಯತಿ'' ಇತ್ಯಾದ್ಯಾಗಮವಿರೋಧ ಇತ್ಯರ್ಥಃ । ''ಸರ್ವಮಸೌ ತು ಹರಿರ್ಯಮಯೇದಿತಿ ವೈದಿಕಮಸ್ತಿ ವಚಃ'' ಇತ್ಯುಕ್ತೇರಿತಿ ಭಾವಃ ।

ಯದಿ ಚೇತಿ, ಭೇದೋಪಲಂಭೇತಿ— ತತ್ತ್ವವೇನೋ ಇರಲಿ, ಅದು ಬ್ರಹ್ಮರೂಪವೋ ? ಶೂನ್ಯರೂಪವೋ ? ಮಿಂಚಿನಂತೆ ಮಾಯವಾಗುವ ವಿಜ್ಞಾನರೂಪವೋ ? ಅಥವಾ ಅದು ಒಂದೇ ವಿಧ, ಎರಡು ವಿಧವಲ್ಲ ಮುಂತಾದ ಆಕ್ಷೇಪಗಳು ಹುಟ್ಟಿಕೊಂಡಿವೆ. ಇಲ್ಲಿ ಅದರ ಪರಿಹಾರ ಮಾಡಿದ್ದಾರೆ. ತತ್ತ್ವವು ಒಂದೇ ಎನ್ನುವುದಾದರೆ ಪರಸ್ಪರ ಭೇದವು ತೋರುತ್ತಿರುವಾಗ ಅದಕ್ಕೆ ವಿರೋಧ ಬರುತ್ತದೆ. ''ನಾನು ಚೈತ್ರನಲ್ಲ, ಮೈತ್ರನಾಗಿದ್ದೇನೆ'' ಎಂಬುದು ಜೀವರ ಪರಸ್ಪರ ಭೇದವನ್ನು ಎತ್ತಿ ತೋರುತ್ತದೆ. ''ಇದು ಘಟವಲ್ಲ, ಪಟ'' ಎಂಬುದು ಜಡ ವಸ್ತುಗಳ ಪರಸ್ಪರ ಭೇದವನ್ನು ತಿಳಿಸುತ್ತದೆ. ಆದುದರಿಂದ ಏಕತತ್ತ್ವವಾದವು ಸಾಧುವಲ್ಲ.

ತಚ್ಚಾನ್ಯತ್ರೇತಿ— ಹಾಗೇ ತೋರುವುದನ್ನು ಭ್ರಾಂತಿ ಎನ್ನುವುದಾದರೆ ಅದಕ್ಕೆ ಬಾಧಕವನ್ನು ಹೇಳಬೇಕು. ಅದು ಯಾವುದೆಂದರೆ, ದೃಶ್ಯತ್ವ, ಜಡತ್ವ, ಪರಿಚ್ಛಿನ್ನತ್ವ ಮುಂತಾದ ಅನುಮಾನ ರೂಪಕ ಬಾಧಕ. ''ವೈಧರ್ಮ್ಯಾಚ್ಚ ನ ಸ್ವಪ್ನಾದಿವತ್'' ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ ಮತ್ತು ತತ್ತ್ವನಿರ್ಣಯ ಪ್ರಕರಣ ಗ್ರಂಥ ಮುಂತಾದವುಗಳಲ್ಲಿ ಅಂತಹ ಬಾಧಕಗಳನ್ನು ನಿರಾಸಗೊಳಿಸಿದ್ದಾರೆ ಎಂದರ್ಥ.

ಪಾರತಂತ್ರ್ಯಾದೀತಿ— ನಾವು ಪ್ರಾರಂಭಮಾಡಿದ ಕಾರ್ಯಗಳಿಗೆ ವಿಘ್ನ ಬರುವುದು, ನಮಗೆ ಬೇಡದ ಅನಿಷ್ಟ ಫಲಗಳು ದೊರೆಯುವುದು ಮುಂತಾದವುಗಳಿಂದ ನಮಗೆ ಪಾರತಂತ್ರ್ಯದ ಅನುಭವವಾಗುತ್ತದೆ. ನಮಗೆ ಹಿತವನ್ನು ಸಾಧಿಸಲು ಸಾಧ್ಯವಾಗದು, ಪ್ರಯತ್ನಿಸಿದರೆ ಅಹಿತಗಳಾಗುವುದು ಮುಂತಾದ ಎಲ್ಲ ರೀತಿಯ ಪ್ರಸಕ್ತಿಗಳು ಒದಗುವುದು, ಇವು ಟೀಕೆಯಲ್ಲಿನ ಆದಿಪದಕ್ಕೆ ಅರ್ಥ.

ನಿತ್ಯಸುಖಾದೀತಿ— ಶ್ರೀಹರಿಯ ವಶದಲ್ಲಿ ಸಕಲ ಜಗತ್ತೂ ಇಲ್ಲದಿದ್ದ ಪಕ್ಷದಲ್ಲಿ ಅವನಿಗೆ ಹೇಗೆ ತಾನೆ ನಿತ್ಯಸುಖವು ಆಗದೆ ಇದ್ದೀತು ? ಆತನ ವಶದಲ್ಲಿ ಸಕಲ ಜಗತ್ತೂ ಇರುವುದರಿಂದಲೇ ಅವನು ನಿತ್ಯಸುಖಿಯಾಗಿದ್ದಾನೆ

Rarest Archive

ಎಂಬ ವಚನ ಪ್ರಮಾಣಾನುಸಾರ ಶ್ರೀಹರಿಗೆ ಸ್ವಾತಂತ್ರ್ಯವು ಚೆನ್ನಾಗಿ ಒಪ್ಪಿತವಾಗಿದೆ. ಅವನಲ್ಲಿ ನಿತ್ಯ ಸುಖವಿರುವುದರಿಂದಲೇ ದುಃಖನಿವೃತ್ತಿಯೂ ಇದೆ ಎಂಬುದು ಆದಿಪದದಿಂದ ಸೂಚಿತವಾಗಿದೆ.

ಅನವಸ್ಥೇರಿತಿ— ಅನವಸ್ಥಿತಿ ಎಂದರೆ : ಅಪ್ರಾಮಾಣಿಕ ಅನಂತ ಪದಾರ್ಥಗಳ ಪ್ರವಾಹದ ಮೂಲಕ ವಿಶ್ರಾಂತಿ ಇಲ್ಲದೆ ಕಲ್ಪಿಸುತ್ತ ಹೋಗುವುದು. ಪ್ರಕೃತದಲ್ಲಿ ಜೀವರು ಪರಾಧೀನರಾಗಿದ್ದಾರೆಂಬುದು ಪ್ರಸಿದ್ಧ. ಅವನು ಇವನಿಗೆ ನಿಯಾಮಕನು, ಇವನು ಮತ್ತೊಬ್ಬನಿಗೆ, ಅವನು ಬೇರೊಬ್ಬನಿಗೆ, ಅವನು ಮಗದೊಬ್ಬನಿಗೆ ಎಂಬ ರೀತಿಯಿಂದ ಸಾಲು ಹಿಡಿದು ಬರುವ ಈ ನಿಯಮನಕ್ಕೆ ಕೊನೆಯೇ ಇಲ್ಲ. ಇದು ಎಣಿಕೆಗೆ ಸಿಕ್ಕಲಾರದಷ್ಟು ವ್ಯಕ್ತಿಗಳನ್ನು ಅವಲಂಬಿಸಿರುವುದು. ಈ ಪರಂಪರೆಯಲ್ಲಿ ಪೂರ್ವಪೂರ್ವದ ವ್ಯಕ್ತಿಗಳಿಗೆ ನಿಯಮವು ಸಿದ್ಧಿಸದಿರುವುದರಿಂದ ಅನಂತರದ ವ್ಯಕ್ತಿಗಳಿಗೆ ನಿಯಮನವು ಹೇಗೆ ಸಿದ್ಧಿಸೀತು ? ಆದುದರಿಂದ ಪರಸ್ಪರ ವ್ಯಕ್ತಿಗತ ನಿಯಮನದ ಮೂಲವೇ ನಾಶವಾಗುವುದರಿಂದ ಅನವಸ್ಥಿತಿ ಎಂಬ ದೋಷವು ಬರುತ್ತದೆ ಎಂದರ್ಥ.

ಅಸಂಭವಾದಿತಿ— ಮೇಲಿನ ವಾದವನ್ನು ಒಪ್ಪಿಕೊಂಡು ಇದನ್ನು ಹೇಳಿದ್ದು, ವಾಸ್ತವಿಕವಾಗಿ ವಿಚಾರ ಮಾಡಿದರೆ ಸರ್ವಜೀವರೂ ಪರತಂತ್ರರು. ಒಬ್ಬನು ಮತ್ತೊಬ್ಬನಿಗೆ ನಿಯಮನ ಮಾಡುವನು ಎಂಬುದೇ ಅಸಂಭವ. ಆದುದರಿಂದ ಯಾವನೊಬ್ಬನ ಇರುವಿಕೆಯ ವಿಷಯದಲ್ಲಿಯೂ ಅವನ ಕಾರ್ಯಪ್ರಯತ್ನದ ವಿಷಯದಲ್ಲಿಯೂ ವಿಶ್ವಾಸ ಉಳಿಯಲಾರದು. ಸೂತ್ರಕಾರರಾದ ಬಾದರಾಯಣರು ''ಅನವಸ್ಥೇರಸಂಭವಾಚ್ಚ ನೇತರಃ'' ಎಂಬ ಸೂತ್ರದಲ್ಲಿ ಜೀವನು ಪರತಂತ್ರನೆಂಬುದನ್ನು ಸ್ಪಷ್ಟರಾಗಿ ಹೇಳಿದ್ದಾರೆ. ಜೀವನು ಸ್ವತಂತ್ರನಾದರೆ; ಅನವಸ್ಥಿತಿ, ಅಸಂಭವ ಎಂಬ ದೋಷಗಳು ಬರುತ್ತವೆ ಎಂಬ ಎರಡು ಯುಕ್ತಿಗಳನ್ನು ಹೇಳಿ ಜೀವನು ಸರ್ವಥಾ ಸ್ವತಂತ್ರನಲ್ಲ ಎಂಬುದನ್ನು ಸ್ಥಾಪಿಸಿದ್ದಾರೆ ಎಂದು ಭಾವ.

ಟೀಕಾ—

ಯದ್ಯಪಿ ಭಾವಾಭಾವತಯಾ ವಾ ಚೇತನಾಚೇತನತ್ವೇನ ವಾ ನಿತ್ಯಾನಿತ್ಯತಯಾ ವಾ ಅಸ್ಯ ದ್ವೈವಿಧ್ಯಂ ಶಕ್ಯತೇ ವಕ್ತುಮ್ । ತಥಾಽಪ್ಯಸ್ಯ ವೈಯರ್ಥ್ಯಾದಯಮೇವ ವಿಭಾಗೋ ನ್ಯಾಯಃ । ಪರತಂತ್ರಪ್ರಮೇಯಂ ಸ್ವತಂತ್ರಪ್ರಮೇಯಾಯತ್ತತಯಾ ವಿದಿತಂ ಹಿ ನಿಃಶ್ರೇಯಸಾಯ ಭವತಿ । ತಥಾ ಚ ಪ್ರಕರಣಾಂತೇ ವಕ್ಷ್ಯತಿ । ಅನ್ಯಥಾ ಗಂಗಾವಾಲುಕಾಪರಿಗಣನವದಿದಂ ತತ್ತ್ವಸಂಖ್ಯಾನಂ ಅಪಾರ್ಥಕಂ ಸ್ಯಾತ್ । ಅತಃ ಸ್ವತಂತ್ರಾಸ್ವತಂತ್ರಭೇದಾತ್ ದ್ವಿವಿಧಂ ತತ್ತ್ವಮಿತಿ ।

ತತ್ತ್ವಗಳ ವಿಭಾಗ

ಈಗ ತತ್ತ್ವಗಳನ್ನು ವಿಭಾಗಗೊಳಿಸುವುದರ ಸ್ವಾರಸ್ಯವನ್ನು ನಿರೂಪಿಸುತ್ತಾರೆ.

ಒಂದು ವೇಳೆ ಈ ತತ್ತ್ವವನ್ನು ಭಾವ, ಅಭಾವವೆಂದಾಗಲಿ, ಚೇತನ, ಅಚೇತನವೆಂದಾಗಲಿ, ನಿತ್ಯ, ಅನಿತ್ಯವೆಂದಾಗಲಿ ವಿಭಾಗಗೊಳಿಸಲು ಸಾಧ್ಯವಾಗುತ್ತಿರುವಾಗ ನಿಮ್ಮ ಆಚಾರ್ಯರು ಬೇರೆ ವಿಧವಾಗಿ ವಿಭಾಗಗೊಳಿಸಲು ಕಾರಣವೇನು ? ಎಂದರೆ;

ಪರಕೀಯರ ಈ ಪ್ರಶ್ನೆ ಸಾಧುವಲ್ಲ. ಅವರು ಸೂಚಿಸಿದ ವಿಭಾಗ ಕ್ರಮವು ನ್ಯಾಯಸಮ್ಮತವೂ ಅಲ್ಲ. ಅದೆ ರೀತಿ ವಿಭಾಗಗೊಳಿಸಿದರೆ ಅದು ವ್ಯರ್ಥವಾಗುವುದು. ಆದುದರಿಂದ ಸ್ವತಂತ್ರ-ಅಸ್ವತಂತ್ರವೆಂಬ ರೀತಿಯ ವಿಭಾಗವೇ

Rarest Archiver

ನ್ಯಾಯಸಮ್ಮತವೂ ಸಾರ್ಥಕವೂ ಆಗಿದೆ ಮತ್ತು ಪರತಂತ್ರಪ್ರಮೇಯವು ಸ್ವತಂತ್ರಪ್ರಮೇಯಕ್ಕೆ ಸರ್ವಥಾ ಅಧೀನವಾದದ್ದು ಎಂದು ತಿಳಿದು ಉಪಾಸನೆ ಮಾಡುವುದರಿಂದ ಪರಮಸುಖರೂಪದ ಮುಕ್ತಿಯು ಲಭಿಸುವುದು. ಶ್ರೀಮದಾಚಾರ್ಯರು ಈ ವಿಷಯವನ್ನು ಈ ಗ್ರಂಥದ ಕೊನೆಯಲ್ಲಿ ನಿರೂಪಿಸಿದ್ದಾರೆ, ಹಾಗಿಲ್ಲದಿದ್ದರೆ. ಈ ತತ್ತ್ವಸಂಖ್ಯಾನ ಗ್ರಂಥವು ಗಂಗಾನದಿಯ ದಡದ ಮೇಲಿನ ಮರಳಿನ ಕಣಗಳ ಎಣಿಕೆಯಂತೆ ಹೀನ ಪ್ರಯೋಜನಕಾರಿಯಾಗುತ್ತಿತ್ತು. ಆದುದರಿಂದ ಶ್ರೀಮದಾಚಾರ್ಯರ ಕ್ರಮದಂತೆ ತತ್ತ್ವಗಳನ್ನು ವಿಭಾಗಗೊಳಿಸುವುದೇ ಸಂಪ್ರದಾಯಬದ್ಧವೂ, ನ್ಯಾಯಸಮ್ಮತವೂ, ಮೋಕ್ಷಸಂಪಾದಕವೂ ಆಗಿದೆ, ಆದುದರಿಂದ ಸ್ವತಂತ್ರವೆಂತಲೂ, ಅಸ್ವತಂತ್ರವೆಂತಲೂ ತತ್ತ್ವದಲ್ಲಿ ಎರಡು ವಿಧಗಳಿವೆ, ಎಂಬುದು ಸಿದ್ಧವಾಯಿತು.

ಭಾವದೀಪ—

ಏವಂ ಚ ತತ್ತ್ವಪದೇನ ದ್ವಿವಿಧಪದೇನ ಸ್ವತಂತ್ರಾಸ್ವತಂತ್ರಪದಾಭ್ಯಾಂ ವ್ಯಾವರ್ತಿತಂ ಪಕ್ಷಚತುಷ್ಟಯಂ ಇಷ್ಯತ ಇತಿ ಪದಸೂಚಿತಯುಕ್ತಿಭಿಃ ನಿರಸ್ಯ ಇದಾನೀಂ ಏವಂವಿಧವಿಭಾಗಮಾಕ್ಷಿಪ್ಯ ಸಮಾಧತ್ತೇ ಯದ್ಯಪೀತ್ಯಾದಿನಾ । ಸ್ವತಂತ್ರತತ್ತ್ವಸ್ಯೇತ್ಯತಃ ಪ್ರಾಕ್ತನೇನ ಗ್ರಂಥೇನ । ಅಸ್ಯೇತಿ । ತತ್ತ್ವಸ್ಯೇತ್ಯರ್ಥಃ ।

ನ್ಯಾಯ್ಯತಾಂ ವ್ಯನಕ್ತಿ ಪರತಂತ್ರೇತ್ಯಾದಿನಾ । ಕುತ ಏತದಿತ್ಯತ ಆಹ ತಥಾ ಚೇತಿ । ಉಕ್ತಪ್ರಕಾರೇಣ ವಕ್ಷ್ಯತಿ ಚ 'ಸೃಷ್ಟಿಸ್ಥಿತಿಶ್ಚ' ಇತ್ಯಾದಿನಾ । ಸರ್ವಸ್ಯೇಶಾಯತ್ತತ್ವಮಿತ್ಯರ್ಥಃ । ತಾದೃಶಜ್ಞಾನಂ ನಿಃಶ್ರೇಯಸಹೇತುರಿತಿ ತತ್ರಾನುಕ್ತಾವಪಿ ತದುಕ್ತಿವೈಯರ್ಥ್ಯಾನ್ಯಥಾನುಪಪತ್ತ್ಯಾ ತಲ್ಲಭ್ಯತ ಇತಿ ಭಾವಃ । ಪರತಂತ್ರೇತ್ಯಾದಿಸ್ವೋಕ್ತಾರ್ಥೇ ಸ್ವಯಂ ಯುಕ್ತಿಂ ಚಾಹ ಅನ್ಯಥೇತಿ । ಏವಂ ವಿಭಾಗಾಕರಣೇತಿ ವಾ । ಪರಾಧೀನತಯಾ ಜಗತೋ ಜ್ಞಾತವ್ಯತ್ವಾಭಾವ ಇತಿ ವಾ । ತಥಾ ಜ್ಞಾನಸ್ಯ ನಿಃಶ್ರೇಯಸಹೇತುತ್ವಾಭಾವ ಇತಿ ವಾರ್ಥಃ ॥ ಅತ ಇತಿ । ಸ್ವಾತಂತ್ರ್ಯಾದಿಭೇದೇನ ವಿಭಾಗಸ್ಯ ಉಕ್ತದಿಶಾ ನ್ಯಾಯ್ಯತ್ವಾದಿತ್ಯರ್ಥಃ । ಇತಿಶಬ್ದಃ ಸ್ವತಂತ್ರಮಸ್ವತಂತ್ರಂ ಚೇತ್ಯನೇನೋಕ್ತವಿಭಾಗಸಮರ್ಥನಪರಿಸಮಾಪ್ತೌ ವರ್ತತೇ ।

ಆಗಮೇತಿ, ಯದ್ಯಪೀತ್ಯಾದಿನಾ ಇತಿ— ಜೀವನೇ ಸ್ವತಂತ್ರನೆಂದರೆ ಆಗಮವಿರೋಧವು ಬರುವುದು. ಅದು ಹೇಗೆಂದರೆ; ಶ್ರೀಹರಿಯು ಪೃಥಿವಿಯ ಒಳಗಿದ್ದು ಅದನ್ನು ನಡೆಸುವನು. ಜೀವರೊಳಗಿದ್ದು ಅವರಿಂದ ಕೆಲಸ ಮಾಡಿಸುವನು ಎಂಬ ಅಭಿಪ್ರಾಯದ ಉಪನಿಷದ್‌ವಾಕ್ಯಗಳಿಗೆ ವಿರೋಧಬರುವುದು ಎಂದರ್ಥ. ಶ್ರೀಮದಾಚಾರ್ಯರ ದ್ವಾದಶಸ್ತೋತ್ರದಲ್ಲಿ ಶ್ರೀಹರಿಯು ಸರ್ವಜಗವನ್ನು ನಿಯಮಿಸುವನು ಎಂಬ ವೈದಿಕ ವಚನವಿದೆ ಎಂಬುದರಿಂದ ಇದೇ ವಿಷಯವನ್ನೇ ಸಮರ್ಥಿಸಲಾಗಿದೆ. ಇಂತಹ ಆಗಮವಾಕ್ಯಗಳಿಗೂ ವಿರೋಧ ಬರುವುದು ಎಂದರ್ಥ.

ಸ್ವತಂತ್ರ ಅಸ್ವತಂತ್ರಗಳೆಂದು ತತ್ತ್ವದಲ್ಲಿ ಎರಡುವಿಧ. ಇಲ್ಲಿ ತತ್ತ್ವಗಳನ್ನು ಕುರಿತು ನಾಲ್ಕು ಬಗೆಯ ಪಕ್ಷಗಳನ್ನು ಹೇಳಲಾಗಿತ್ತು. 'ಇಷ್ಯತೇ' ಎಂಬ ಪದದಿಂದ ಸೂಚಿತವಾದ ಯುಕ್ತಿಗಳಿಂದ ಆ ನಾಲ್ಕು ಪಕ್ಷಗಳನ್ನು ನಿರಾಕರಿಸಲಾಯಿತು. ಈಗ ಸ್ವತಂತ್ರ ಅಸ್ವತಂತ್ರಗಳೆಂಬ ವಿಭಾಗವನ್ನು ಆಕ್ಷೇಪಿಸಿಕೊಂಡು ಸಮಾಧಾನ ಹೇಳುವರು. ಸ್ವತಂತ್ರತತ್ತ್ವಸ್ಯ ಎಂಬ ವಾಕ್ಯಕ್ಕಿಂತ ಪೂರ್ವದ ಗ್ರಂಥದಲ್ಲಿ ವಿಬಾಗದ ಆಕ್ಷೇಪಕ್ಕೆ ಸಮಾಧಾನ ಹೇಳಿದ್ದಾರೆ.

ಅಸ್ಯೇತಿ ಪರತಂತ್ರೇತ್ಯಾದಿನಾ ತಥಾ ಚೇತಿ— ಇದಂ ಶಬ್ದದ ಷಷ್ಠೀವಿಭಕ್ತಿಗೆ ಈ ತತ್ತ್ವದ ಎಂದರ್ಥ. ಪರತಂತ್ರೇತ್ಯಾದಿಪದದಿಂದ ಶ್ರೀಮದಾಚಾರ್ಯಕೃತ ವಿಬಾಗವು ನ್ಯಾಯಸಮ್ಮತವಾಗಿದೆ ಎಂಬುದನ್ನು ವ್ಯಕ್ತಗೊಳಿಸಿದ್ದಾರೆ. ಇದು ಏಕೆ ನ್ಯಾಯಸಮ್ಮತವು ? ಎಂಬ ಆಕ್ಷೇಪ ಬಂದರೆ, ಅದಕ್ಕೆ ತಥಾ ಚ ಎಂಬುದರಿಂದ ಸಮಾಧಾನ ಹೇಳಿದ್ದಾರೆ.

Rarest Archiver

ಶ್ರೀಮದಾಚಾರ್ಯರು ಈ ಪ್ರಕರಣದ ಉಪಸಂಹಾರದಲ್ಲಿ ''ಸೃಷ್ಟಿಸ್ಥಿತಿಶ್ಚ'' ಎಂಬ ಮಾತುಗಳಿಂದ ಸರ್ವವೂ ಈಶ್ವರಾಧೀನ ಎಂಬುದನ್ನು ಸ್ಥಾಪಿಸಿದ್ದಾರೆ. ಅಲ್ಲಿ ಅಂತಹ ಪರಮಾತ್ಮನ ಜ್ಞಾನವು ಮುಕ್ತಿಗೆ ಸಾಧನ ಎಂಬುದನ್ನು ಹೇಳಲಿಲ್ಲ. ಕೇವಲ ಸರ್ವವೂ ಈಶ್ವರಾಧೀನ ಎಂದು ಮಾತ್ರ ಹೇಳಿದ್ದಾರೆ. ಇಷ್ಟು ಹೇಳಿದ್ದರಿಂದಲೇ ಈಶ್ವರಾ-ಧೀನತ್ವಜ್ಞಾನವು ಮುಕ್ತಿಗೆ ಸಾಧನ ಎಂಬಂಶವು ಸುಸ್ಪಷ್ಟವಾಗುತ್ತದೆ. ಅದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದನ್ನು ಒಪ್ಪದಿದ್ದರೆ ಸರ್ವವೂ ಈಶ್ವರಾಧೀನ ಎಂಬ ಮಾತು ವ್ಯರ್ಥವಾಗಬೇಕಾದೀತು. ಹಾಗಾಗಬಾರದೆಂದು ಭಾವಿಸಿ ಸರ್ವವೂ ಈಶ್ವರಾಧೀನ ಎಂಬ ಜ್ಞಾನದಿಂದ ಮುಕ್ತಿಯು ಲಭಿಸುತ್ತದೆ ಎಂದು ತಿಳಿಯಬೇಕು. ಎಂದು ಬಾವ.

ಅನ್ಯಥೇತಿ— ಪರತಂತ್ರ ಇತ್ಯಾದಿ ವಿಬಾಗದಲ್ಲಿ ತಾವು ಯಾವ ಅರ್ಥವನ್ನು ಹೇಳಿದ್ದಾರೆಯೋ ಅದನ್ನು ಸಮರ್ಥಿಸಲು ಅದಕ್ಕೆ ತಾವೇ ಯುಕ್ತಿಯನ್ನು ಹೇಳುತ್ತಾರೆ. ಅದನ್ನು ಮೂರು ವಿಧವಾಗಿ ವಿಕಲ್ಪಗೊಳಿಸುತ್ತಾರೆ.

1) ಪರತಂತ್ರ ಇತ್ಯಾದಿಯಾಗಿ ವಿಬಾಗ ಮಾಡದಿದ್ದರೆ;

2) ಜಗತ್ತು ಪರಾಧೀನವಾಗಿದೆ ಎಂದು ತಿಳಿಯಲಾಗದಿದ್ದರೆ;

3) ಜಗತ್ತು ಪರಾಧೀನ ಎಂಬ ತಿಳಿವಳಿಕೆಯು ಮುಕ್ತಿಗೆ ಸಾಧನವಾಗಲಾರದು ಎನ್ನುವುದಾದರೆ;

ಈ ಮೂರುವಿಧ ವಿಕಲ್ಪಗಳು ಅನ್ಯಥಾ ಎಂಬ ಪದದಿಂದ ಸೂಚಿತವಾಗಿವೆ.

ಅತ ಇತಿ— ಸ್ವತಂತ್ರ, ಅಸ್ವತಂತ್ರ ಎಂದು ಪೂರ್ವದಲ್ಲಿ ಮಾಡಿದ ವಿಬಾಗವು ನ್ಯಾಯಸಮ್ಮತವಾದುದು ಎಂದರ್ಥ. ಅದಕ್ಕಾಗಿ ಉದಾಹರಿಸಿದ ಆಗಮಗಳೂ ಯುಕ್ತಿಗಳೂ ಸಹ ಸಮಂಜಸವೆಂದು ಭಾವ.

ಇತಿಶಬ್ದವನ್ನು ಸ್ವತಂತ್ರಂ ಇತ್ಯಾದಿಯಾಗಿ ಮಾಡಿದ ವಿಭಾಗವನ್ನು ಸಮರ್ಥಿಸುವುದಕ್ಕೂ ಪ್ರಯೋಗಿಸಿದ್ದಾರೆ.

ಟೀಕಾ—

ಸ್ವತಂತ್ರತತ್ತ್ವಸ್ಯ ಪ್ರಾಧಾನ್ಯಾತ್ ತದೇವ ಆದೌ ಉದ್ದಿಷ್ಟಮ್ । ಉದ್ದೇಶೇನೈವ ಲಕ್ಷಣಂ ಚ ಲಬ್ಧಮ್ । ಅತ ಏವಾದೌ ತನ್ನಿರ್ದಿಶತಿ—

''ಸ್ವತಂತ್ರೋ ಭಗವಾನ್ ವಿಷ್ಣುಃ ....''

ಅತ್ರ ಭಗವಾನಿತಿ ವಿಷ್ಣೋಃ ಸ್ವಾತಂತ್ರ್ಯೋಪಪಾದಕಮ್ । ಅನ್ಯತ್ ಅಸ್ವತಂತ್ರಮಿತಿ ಶೇಷಃ ।

ಅಥವಾ 'ದ್ವೇ ತತ್ತ್ವೇ' ಇತ್ಯುಕ್ತೇ ಸ್ವತಂತ್ರಮಿವ ಪರತಂತ್ರಮೇಕಾ ವ್ಯಕ್ತಿರೇವ ಪ್ರಸಜ್ಯೇತ । ತಥಾ ಚ ಪ್ರಮಾಣವಿರೋಧೋ ವಕ್ಷ್ಯಮಾಣವಿಬಾಗವಿರೋಧಶ್ಚ । ಅತೋ ದ್ವಿವಿಧಮಿತ್ಯುಕ್ತಮ್ । ತತಶ್ಚ ಸ್ವತಂತ್ರ-ಮಪ್ಯನೇಕವಿಧಂ ಸ್ಯಾದಿತ್ಯತ ಇದಮುಕ್ತಮ್ ।

ಅಥವಾ ಸ್ವತಂತ್ರಾಸ್ವತಂತ್ರಭೇದೇನ ತತ್ತ್ವದ್ವೈವಿಧ್ಯಂ ಅಂಗೀಕುರ್ವಾಣಾ ಅಪಿ ಸಾಂಖ್ಯಾದಯಃ ಪ್ರಧಾನಾದಿಕಂ ಸ್ವತಂತ್ರತತ್ತ್ವಂ ಆತಿಷ್ಠಂತೇ । ತನ್ನಿರಾಸಾಯ ಇದಮುದಿತಮಿತಿ ।

Rarest Archiver

ಮೊದಲು ಸ್ವತಂತ್ರ ತತ್ತ್ವವನ್ನೇ ಏಕೆ ನಿರ್ದೇಶಗೊಳಿಸಿದರು ?

ಈಗ ಶ್ರೀ ಟೀಕಾರಾಯರು ಸ್ವತಂತ್ರತತ್ತ್ವವನ್ನು ಮೊದಲು ನಿರ್ದೇಶಗೊಳಿಸಿದ್ದುದರ ಉದ್ದೇಶ, ಪ್ರಯೋಜನ-ಗಳನ್ನು ತಿಳಿಸುವರು.

ಹಿಂದೆ ಹೇಳಿದಂತೆ ಮುಕ್ತಿ ಲಭಿಸುವುದರಿಂದಲೆ ಮೊತ್ತ ಮೊದಲು ಸ್ವತಂತ್ರತತ್ತ್ವವನ್ನು ನಿರ್ದೇಶಗೊಳಿಸುವರು. ಇಲ್ಲಿ ಐಶ್ವರ್ಯವಾಚಕ ಭಗವಾನ್ ಎಂಬ ಶಬ್ದವನ್ನು ವಿಷ್ಣುವಿಗೆ ವಿಶೇಷಣವಾಗಿ ಹೇಳಿದ್ದಾರೆ. ಇದರಿಂದ ವಿಷ್ಣು ಒಬ್ಬನೆ ಸ್ವತಂತ್ರ ಎಂಬುದು ಸೂಚಿತವಾಗುತ್ತದೆ. ವಿಷ್ಣುವಿನಿಂದ ಭಿನ್ನವಾದುದು ಎಲ್ಲವೂ ಅಸ್ವತಂತ್ರವೆಂಬುದು ಮಿಕ್ಕಮಾತಿ-ನಿಂದಲೇ ವ್ಯಕ್ತವಾಯಿತು. ಹಾಗಲ್ಲದೆ 'ದ್ವೇ ತತ್ತ್ವೇ' ಎಂದು ಹೇಳಿದರೆ ಸ್ವತಂತ್ರ ತತ್ತ್ವದಂತೆ ಪರತಂತ್ರ ತತ್ತ್ವವೂ ಒಂದೇ ವ್ಯಕ್ತಿಯಾಗಲಿ ಎಂದು ಹೇಳುವ ಪ್ರಸಂಗ ಒದಗುತ್ತಿತ್ತು. ಒಂದೇ ವ್ಯಕ್ತಿಯಾಗಲಿ ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ಏಕೆಂದರೆ ಪ್ರಮಾಣಗಳಿಗೆ ವಿರೋಧವೂ ಮುಂದೆ ಹೇಳಲಿರುವ ವಿಭಾಗದ ಕ್ರಮಕ್ಕೆ ವಿರೋಧವೂ ಒದಗುತ್ತದೆ.

ಈ ಮೇಲಿನ ಪ್ರಯೋಜನಕ್ಕಾಗಿಯೇ ಶ್ರೀಮದಾಚಾರ್ಯರು 'ದ್ವಿವಿಧಂ' ಎಂದು ಹೇಳಿದ್ದಾರೆ ಮತ್ತು ಪರತಂತ್ರ ತತ್ತ್ವದಲ್ಲಿ ಹೇಗೆ ಅನೇಕ ವಿಧಗಳಿವೆಯೋ ಹಾಗೆಯೆ ಸ್ವತಂತ್ರ ತತ್ತ್ವದಲ್ಲಿಯೂ ಅನೇಕ ವಿಧಗಳಿರ-ಬಹುದು ಎಂಬ ಪ್ರಶ್ನೆಯು ಹುಟ್ಟುತ್ತದೆ. ಇದನ್ನು ಪರಿಹರಿಸುವುದಕ್ಕಾಗಿಯೂ 'ದ್ವೇ ತತ್ತ್ವೇ' ಎಂದು ಹೇಳದೆ 'ದ್ವಿವಿಧಂ' ಎಂದು ಹೇಳಿದ್ದಾರೆ. ಮತ್ತೊಂದು ಬಗೆಯಾಗಿ ಹೇಳುವುದಾದರೆ;

ಸಾಂಖ್ಯ ಮೊದಲಾದ ದಾರ್ಶನಿಕರು ಸ್ವತಂತ್ರ, ಅಸ್ವತಂತ್ರವೆಂಬ ರೀತಿಯಿಂದ ತತ್ವದಲ್ಲಿ ಎರಡು ವಿಧಗಳನ್ನು ಒಪ್ಪಿಕೊಂಡಿದ್ದಾರೆ. ಆದರೆ ಅವರು ಪ್ರಧಾನವೆ ಮುಂತಾದ ತತ್ತ್ವಗಳನ್ನು ಸ್ವತಂತ್ರ ತತ್ತ್ವವನ್ನಾಗಿ ಸಾಧಿಸಿದ್ದಾರೆ. ಅವರೂ ಸಹ ತತ್ತ್ವವಾದಿಗಳೆಂದು ಕರೆಯಲ್ಪಟ್ಟಿದ್ದಾರೆ. ಅಂಥವರು ಶ್ರೀಮದಾಚಾರ್ಯರಿಗೆ ಅಸಮ್ಮತರು. ಅವರ ತಾತ್ತ್ವಿಕ ಭಾವನೆಯೂ ಅಸಮ್ಮತ. ಆದುದರಿಂದ ಅದನ್ನು ನಿರಾಕರಿಸಲು 'ದ್ವಿವಿಧಂ' ಎಂಬ ಮಾತನ್ನು ಹೇಳಿರುವರೆಂಬುದನ್ನು ಮನಗಾಣಬೇಕು.

ಭಾವದೀಪ—

ಸ್ವತಂತ್ರತತ್ತ್ವಸ್ಯ ಪ್ರಥಮೋದ್ದೇಶೇ ನಿಮಿತ್ತಮಾಹ ಸ್ವತಂತ್ರತತ್ತ್ವಸ್ಯೇತಿ ॥ ಉದ್ದಿಷ್ಟಮಿತಿ । ಪ್ರಥಮವಾಕ್ಯೇ । ನನು ಉದ್ದೇಶಸ್ಯ ಲಕ್ಷಣೋಕ್ತ್ಯರ್ಥತ್ವಾದುದ್ದೇಶಾನಂತರಂ ಲಕ್ಷಣಾನುಕ್ತಿರನುಚಿತೇತ್ಯತ ಆಹ ಉದ್ದೇಶೇನೈವೇತಿ ॥ ಲಕ್ಷಣಂ ಚೇತಿ । ಸ್ವಸತ್ತಾದೌ ಪರಾನಪೇಕ್ಷತ್ವರೂಪಮಿತ್ಯರ್ಥಃ ॥ ಅತ ಏವೇತಿ । ಪ್ರಾಧಾನ್ಯಾದೇವೇತ್ಯರ್ಥಃ ।

ನನು ಸ್ವತಂತ್ರೋ ವಿಷ್ಣುರಿತ್ಯೇತಾವತೈವ ಪೂರ್ತೌ ಭಗವಾನಿತಿ ಪದಂ ವ್ಯರ್ಥಮಿತ್ಯತ ಆಹ ಅತ್ರ ಭಗವಾ-ನಿತೀತಿ ॥ ಸ್ವಾತಂತ್ರ್ಯೋಪಪಾದಕಮಿತಿ । ತೇನ ಸಮಗ್ರೈಶ್ವರ್ಯಾದಿಷಡ್ಗುಣವತ್ತ್ವಸ್ಯ ಲಾಭಾದಿತಿ ಭಾವಃ । ಮೂಲೇ ಅಸ್ವತಂತ್ರತತ್ತ್ವಪ್ರದರ್ಶಕಪದಾಭಾವಾದಾಹ ಅನ್ಯದಸ್ವತಂತ್ರಮಿತಿ ಶೇಷ ಇತಿ । ''ಸಂಖ್ಯಾಯಾಃ ವಿಧಾರ್ಥೇ ಧಾ'' ಇತ್ಯುಕ್ತಸ್ಯ ದ್ವಿವಿಧಮಿತಿ ಧಾ ಪ್ರತ್ಯಯಸ್ಯಾರ್ಥವತ್ತ್ವಂ ವಕ್ತುಮಾಹ ಅಥವೇತಿ । ತತ್ರಾವಾಂತರಭೇದಸೂಚಕ ಧಾ ಪ್ರತ್ಯಯಾಭಾವಾದಿತಿ ಭಾವಃ ॥ ತಥಾ ಚೇತಿ । ಏಕವ್ಯಕ್ತಿಪ್ರಸಕ್ತಿಶ್ಚ ಪ್ರತ್ಯಕ್ಷಾದಿಪ್ರಮಾಣವಿರೋಧ ಇತ್ಯರ್ಥಃ । ಅತ

Rarest Archive

ಇತಿ । ಅವಾಂತರಾನೇಕಭೇದಸೂಚನಾಯೇತ್ಯರ್ಥಃ ॥ ಇತ್ಯುಕ್ತಮಿತಿ । ಅವಾಂತರಾನೇಕಭೇದೋಪೇತೇ ದ್ವೇ ತತ್ತ್ವೇ ಇತ್ಯರ್ಥಲಾಭಾಯ ಧಾ ಪ್ರತ್ಯಯಾಂತಪದಂ ಪ್ರಯುಕ್ತಮಿತ್ಯರ್ಥಃ । ಅಸ್ತ್ವೇವಂ ತಥಾಪಿ ಕಿಂ ಪ್ರಕೃತ ಇತ್ಯತ ಆಹ ತತಶ್ಚೇತಿ । ಧಾಪ್ರತ್ಯಯಾಂತಪ್ರಯೋಗಶ್ಚೇತ್ಯರ್ಥಃ । ಪರತಂತ್ರಮಿವೇತಿ ಯೋಜ್ಯಮ್ ।

ವಿಷ್ಣುರಿತ್ಯುಕ್ತೇರರ್ಥವತ್ತ್ವಾಯ ಯೋಜನಾಂತರಮಾಹ ಅಥವೇತಿ ॥ ಸಾಂಖ್ಯಾದಯ ಇತಿ । ಸಾಂಖ್ಯಶೈವ-ಹಿರಣ್ಯಗರ್ಭಸ್ಕಂದಸೂರ್ಯಶಕ್ತ್ಯಾದಿಕಮಿತ್ಯರ್ಥಃ । ಆತಿಷ್ಠಂತೇ = ಅಭ್ಯುಪಗಚ್ಛಂತಿ ।

ಸ್ವತಂತ್ರತತ್ತ್ವಸ್ಯೇತಿ, ಉದ್ದಿಷ್ಟಮಿತಿ, ಪ್ರಥಮವಾಕ್ಯೇ— ಪ್ರಥಮ ವಾಕ್ಯದಲ್ಲಿ ಸ್ವತಂತ್ರತತ್ತ್ವವನ್ನು ಉದ್ದೇಶಿಸಿ ಹೇಳಿರುವುದರ ಕಾರಣವನ್ನು ಸ್ವತಂತ್ರತತ್ತ್ವಸ್ಯ ಎಂಬ ವಾಕ್ಯದಲ್ಲಿ ಹೇಳಿದ್ದಾರೆ. ಪ್ರಥಮ ವಾಕ್ಯದಲ್ಲಿ ಅದನ್ನು ಉದ್ದೇಶಗೊಳಿಸಲಾಗಿದೆ ಎಂದರ್ಥ.

ಉದ್ದೇಶೇನೈವೇತಿ, ಲಕ್ಷಣಂ ಚೇತಿ— ಲಕ್ಷಣವನ್ನು ನಿರೂಪಿಸಲು ಉದ್ದೇಶವನ್ನು ಹೇಳಬೇಕು. ಆದರೂ ಉದ್ದೇಶಾನಂತರವೂ ಲಕ್ಷಣವನ್ನು ಹೇಳದಿರುವುದು ಅನುಚಿತವಲ್ಲವೆ ? ಎಂಬ ಆಕ್ಷೇಪವನ್ನು ಇಲ್ಲಿ ಪರಿಹರಿಸಿದ್ದಾರೆ. ಉದ್ದೇಶನಿರೂಪಣೆಯ ಸಂಗಡವೇ ಲಕ್ಷಣದ ನಿರೂಪಣೆಯೂ ಆಗಿದೆ. ಅದೆಂದರೆ, ತನ್ನ ಇರುವಿಕೆಯಲ್ಲಿ ಪರರ ಇಚ್ಛೆಯನ್ನು ಅನುಸರಿಸದಿರುವುದು ಇತ್ಯಾದಿ ಲಕ್ಷಣ ಎಂದರ್ಥ.

ಅತ ಏವೇತಿ— ಸ್ವತಂತ್ರತತ್ತ್ವವು ಪ್ರಧಾನವಾದುದರಿಂದಲೇ ಅದನ್ನು ಮೊತ್ತಮೊದಲು ನಿರ್ದೇಶಿಸಿದರು ಎಂದರ್ಥ.

ಅತ್ರ ಭಗವಾನಿತೀತಿ— ಮೂಲದಲ್ಲಿ ವಿಷ್ಣುವು ಸ್ವತಂತ್ರನು ಎಂದಿಷ್ಟು ಮಾತ್ರ ಹೇಳಬಹುದಾಗಿತ್ತು. ಅದನ್ನು ಬಿಟ್ಟು ಅವನಿಗೆ ಭಗವಾನ್ ಎಂಬ ವಿಶೇಷಣವನ್ನು ಏಕೆ ಕೊಟ್ಟರು ? ಎಂಬ ಆಕ್ಷೇಪಕ್ಕೆ ಸಮಾಧಾನ ಹೇಳಲು ಅದನ್ನು ಪ್ರಯೋಗಿಸಿದ್ದಾರೆ. ಇದು ಪರಮಾತ್ಮನ ನಿರತಿಶಯವಾದ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. ಪರಮಾತ್ಮನು ಸಮಗ್ರವಾದ ಷಡ್ಗುಣಸಂಪನ್ನನು ಎಂಬರ್ಥವು ಇದರಿಂದ ಲಭಿಸುತ್ತದೆ ಎಂದು ಬಾವ.

ಅನ್ಯದಸ್ವತಂತ್ರಮಿತಿ ಶೇಷ ಇತಿ— ಸ್ವತಂತ್ರ ತತ್ತ್ವದಿಂದ ಭಿನ್ನವಾದುದು ಮಿಕ್ಕದ್ದೆಲ್ಲವೂ ಅಲ್ಪತಂತ್ರತತ್ತ್ವವು ಎಂದರ್ಥ. ಮೂಲದಲ್ಲಿ ಅಸ್ವತಂತ್ರತತ್ತ್ವವನ್ನು ತಿಳಿಸುವ ಪದವು ಕಾಣದುದರಿಂದ ಅನ್ಯದಸ್ವತಂತ್ರಂ ಎಂಬ ಮಾತನ್ನು ಹೇಳಿದ್ದಾರೆ.

ಅಥವೇತಿ— ಸಂಖ್ಯೆಯೊಳಗಿನ ವಿಧಗಳು ಎಂಬರ್ಥದಲ್ಲಿ ಧಾ ಪ್ರತ್ಯಯವನ್ನು ಪ್ರಯೋಗಿಸಲಾಗಿದೆ. ''ದ್ವಿಧೇತರತ್'' ಎಂಬಲ್ಲಿ ಇದು ಕಂಡಿದೆ. ಅದಕ್ಕೆ ''ದ್ವಿವಿಧಂ'' ಎಂಬಲ್ಲಿಯೂ ಧಾ ಪ್ರತ್ಯಯದ ಅರ್ಥವನ್ನೇ ಹೇಳಬೇಕು ಎಂದು ಭಾವ. ಅಲ್ಲಿ ಒಳಪ್ರಭೇದವನ್ನು ಸೂಚಿಸುವ ಧಾ ಪ್ರತ್ಯಯವು ಇಲ್ಲದುದರಿಂದ ಹಾಗೆ ಅರ್ಥವನ್ನು ಹೇಳಬೇಕೆಂದು ಅಭಿಪ್ರಾಯ.

ತಥಾ ಚೇತಿ— ಸ್ವತಂತ್ರತತ್ತ್ವದಂತೆ ಅಸ್ವತಂತ್ರತತ್ತ್ವವು ಒಂದೇ ವ್ಯಕ್ತಿಯಾಗಿ ನಿಲ್ಲಬೇಕಾದೀತು. ಇದು ಇತಿಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳದಿದ್ದರೆ ಒದಗುವ ದೋಷ ಅಸ್ವತಂತ್ರತತ್ತ್ವವೂ ಒಂದೇ ವ್ಯಕ್ತಿಯಾಗಲಿ, ದೋಷವೇನು ? ಎಂದರೆ, ಪ್ರತ್ಯಕ್ಷಾದಿ ಪ್ರಮಾಣಗಳಿಗೆ ವಿರೋಧ ಬರುತ್ತದೆ ಎಂದರ್ಥ.

Rarest Archive

ಅತ ಇತಿ— ಅನೇಕ ಭೇದಗಳನ್ನೂ ಒಳಪ್ರಭೇದಗಳನ್ನೂ ಸೂಚಿಸುವುದಕ್ಕಾಗಿ ಹೇಳಿದ್ದಾರೆಂದರ್ಥ.

ಇತ್ಯುಕ್ತಮಿತಿ— ದ್ವಿವಿಧಂ ಎಂಬಲ್ಲಿಯೂ ದ್ವಿಧಾ ಎಂಬಲ್ಲಿಯೂ ದ್ವಿಶಬ್ದದ ಮೇಲೆ ವಿಧಾರ್ಥವನ್ನು ಸೂಚಿಸುವ ಧಾ ಪ್ರತ್ಯಯವನ್ನು ಹೇಳಲಾಗಿದೆ. ಎರಡು ತತ್ತ್ವಗಳಲ್ಲಿ ಅವಾಂತರ ಅನೇಕ ಭೇದಗಳಿವೆ ಎಂಬ ಅರ್ಥವನ್ನು ಸೂಚಿಸುವುದಕ್ಕಾಗಿ ಧಾ ಪ್ರತ್ಯಯಾಂತ ಪದವನ್ನು ಪ್ರಯೋಗಿಸಲಾಗಿದೆ ಎಂದರ್ಥ.

ತತಶ್ಚೇತಿ— ಅದೇನೊ ಹಾಗಿರಲಿ. ಪ್ರಕೃತಕ್ಕೆ ಏನು ಬಂತು ? ಎಂದರೆ, ಧಾ ಪ್ರತ್ಯಯಾಂತ ಪದವನ್ನು ಪ್ರಯೋಗ ಮಾಡಿದ್ದರಿಂದ ಪರತಂತ್ರತತ್ತ್ವದಂತೆ ಸ್ವತಂತ್ರತತ್ತ್ವವು ಅನೇಕವಿಧವಲ್ಲ ಎಂಬರ್ಥವು ಸ್ಫುಟವಾಗುತ್ತದೆ. ಇಲ್ಲಿ ಪರತಂತ್ರದಂತೆ ಎಂಬುದನ್ನು ಸೇರಿಸಿಕೊಳ್ಳಬೇಕು.

ಅಥವೇತಿ— ವಿಷ್ಣುವು ಎಂದು ಹೇಳಿದ್ದಕ್ಕೆ ಪ್ರಯೋಜನವೇನು ? ಎಂಬ ಆಕ್ಷೇಪ ಬಂದರೆ ಬೇರೆ ಪ್ರಕಾರದ ಯೋಜನೆಯನ್ನು ತಿಳಿಸಿದ್ದಾರೆ.

ಸಾಂಖ್ಯಾದಯಃ ಇತಿ— ಸಾಂಖ್ಯರು ಪ್ರಧಾನವನ್ನೂ, ಶೈವರು ಶಿವನನ್ನೂ, ಹೈರಣ್ಯಗರ್ಭರು ಹಿರಣ್ಯಗರ್ಭನನ್ನೂ (ಬ್ರಹ್ಮನನ್ನೂ), ಸ್ಕಾಂದರು ಸ್ಕಂದನನ್ನೂ, ಸೌರರು ಸೂರ್ಯನನ್ನೊ, ಶಾಕ್ತರು ಶಕ್ತಿಯನ್ನೂ, ಪರಮ ತತ್ತ್ವವೆಂತಲೂ ಸ್ವತಂತ್ರವೆಂತಲೂ ಪ್ರತಿಪಾದಿಸುತ್ತಾರೆ. ಅದನ್ನು ನಿರಸನಗೊಳಿಸಲು ವಿಷ್ಣುಪದವನ್ನು ಪ್ರಯೋಗಿಸಿದ್ದಾರೆಂದು ಭಾವ.

ಆತಿಷ್ಠಂತೇ— ಒಡಂಬಡುತ್ತಾರೆ.

ಟೀಕಾ—

ದ್ವಿವಿಧಮಿತ್ಯುಕ್ತ್ಯಾ ಪರತಂತ್ರತತ್ತ್ವಂ ಅವಾಂತರಭೇದವತ್ ಇತಿ ಸೂಚಿತಮ್ । ತತ್ಕಥಮ್ ? ಇತಿ । ತತ್ರಾಹ—

"......................... ಭಾವಾಭಾವೌ ದ್ವಿಧೇತರತ್ ।"

ಇತರತ್ ಸ್ವತಂತ್ರತತ್ತ್ವಾತ್, ಅಸ್ವತಂತ್ರತತ್ತ್ವಂ ದ್ವಿಧಾ । ಕಥಮ್ ? ಭಾವೋಽಭಾವಶ್ಚೇತಿ । ಅಭಾವಪ್ರತೀತಿರ್ಭಾವಪ್ರತೀತ್ಯಧೀನಾ ನಿಯಮೇನೇತಿ ಪ್ರಾಧಾನ್ಯಾತ್ ಪ್ರಥಮಂ ಭಾವಸ್ಯೋದ್ದೇಶಃ । ಪ್ರಥಮಪ್ರತೀತಾವಸ್ತೀತ್ಯುಪಲಭ್ಯತೇ ಯಃ ಸ ಭಾವಃ । ಯಶ್ಚ ಪ್ರಥಮೋಪಲಬ್ಧೌ ನಾಸ್ತೀತಿ ಪ್ರತೀಯತೇ ಸಃ ಅಭಾವಃ । ದ್ವಿತೀಯಾದಿಪ್ರತೀತೌ ರೂಪಾಂತರಮ್ । ಕಾರ್ಯಗಮ್ಯತ್ವಾತ್ ಸಾಮಗ್ರೀಭೇದಸ್ಯ ।

ತಥಾ ಚ ಪ್ರತೀತಿಃ "ಅಸ್ತ್ಯತ್ರ ಘಟಃ, ಸ ನ ಶುಕ್ಲ ಇತಿ" । ಏವಂ "ನಾಸ್ತ್ಯತ್ರ ಘಟಃ, ಅಸ್ತಿ ಘಟಾಭಾವ" ಇತಿ ।

'ದ್ವಿವಿಧಂ' ಎಂಬ ಪದದ ಪ್ರಯೋಜನ

ಮೂಲದಲ್ಲಿ 'ದ್ವಿವಿಧಂ' ಎಂದು ಹೇಳಿರುವುದರಿಂದ ಪರತಂತ್ರ ತತ್ತ್ವದಲ್ಲಿ ಅನೇಕ ಒಳಪ್ರಭೇದಗಳಿವೆ ಎಂಬುದು ಸೂಚಿತವಾಗುತ್ತದೆ. ಅದು ಹೇಗೆಂದರೆ; ಸ್ವತಂತ್ರದಿಂದ ಭಿನ್ನವಾದ ಪರತಂತ್ರತತ್ತ್ವವು ಭಾವವೆಂತಲೂ

Rarest Archiver

ಅಭಾವವೆಂತಲೂ ಎರಡು ವಿಧವಾಗಿ ವಿಭಾಗಗೊಂಡಿದೆ. 'ಇತರತ್' ಎಂದರೆ ಯಾವುದರಿಂದ 'ಇತರತ್' ಎಂಬ ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ ಸ್ವತಂತ್ರದಿಂದ ಎಂದು ಉತ್ತರಿಸಬೇಕು. 'ಸ್ವತಂತ್ರಾತ್' ಎಂಬಲ್ಲಿನ ಪಂಚಮಿ ವಿಭಕ್ತಿಗೆ ಅತ್ಯಂತಭೇದ ಎಂದರ್ಥ. ಹೀಗೆ ಪರತಂತ್ರ ತತ್ತ್ವದಲ್ಲಿ ಪ್ರಧಾನವಾಗಿ ಎರಡು ವಿಧಗಳಿವೆ ಎಂದು ವ್ಯಕ್ತವಾಯಿತು.

ಇಲ್ಲಿ ಅಭಾವ ತೋರಬೇಕಾದರೆ ಭಾವಕ್ಕೆ ಅಧೀನ ಪಟ್ಟುಕೊಂಡೆ ತೋರಬೇಕು. ಹೀಗಾಗುವುದು ಶಾಸ್ತ್ರದ ಪ್ರಧಾನ ನಿಯಮ. ಇದಕ್ಕನುಗುಣವಾಗಿ ಇಲ್ಲಿ ಶ್ರೀಮದಾಚಾರ್ಯರು ಪ್ರಥಮತಃ ಭಾವ ಪದಾರ್ಥವನ್ನೇ ಉದ್ದೇಶ-ಗೊಳಿಸಿದ್ದಾರೆ.

ಭಾವ ಎಂದರೇನು ?

ಯಾವುದು ಮೊದಲನೆಯ ತೋರಿಕೆಯಲ್ಲಿ 'ಇದೆ' ಎಂದು ಗೋಚರಿಸುವುದೋ ಅದಕ್ಕೆ ಭಾವವೆಂದು ಹೆಸರು.

ಅಭಾವವೆಂದರೇನು ?

ಯಾವುದು ಮೊದಲನೆಯ ತೋರಿಕೆಯಲ್ಲಿ 'ಇಲ್ಲ' ಎಂದು ಗೋಚರಿಸುವುದೋ ಅದಕ್ಕೆ ಅಭಾವವೆಂದು ಹೆಸರು.

ಇದು ಹೀಗೇಕಾಗಬೇಕು ?

ಎಂದರೆ; ಸಹಜವಾಗಿಯೇ ಭಾವಾಭಾವಗಳು ವಿಧಿ ಮತ್ತು ನಿಷೇಧ ರೂಪಗಳಾಗಿವೆ. ವಿಧಿ ಎಂದರೆ ''ಹೋಗು, ನೋಡು, ತೆಗೆದುಕೊ'' ಮುಂತಾದ ಕ್ರಿಯೆಗಳಿಗೆ ಹೊಂದಿಕೆಯಾಗತಕ್ಕದ್ದು. ನಿಷೇಧವೆಂದರೆ; ಬೇಡ, ಇಲ್ಲ, ಅಲ್ಲ, ಸಲ್ಲದು, ಮುಂತಾದ ಕ್ರಿಯೆಗಳಿಗೆ ಹೊಂದಿಕೆಯಾಗತಕ್ಕದ್ದು. ವಿಧಿರೂಪದಲ್ಲಿ ಭಾವವೂ, ನಿಷೇಧರೂಪದಲ್ಲಿ ಅಭಾವವೂ ತೋರುವುವು. ಇದಕ್ಕೆ ವಿಪರೀತವಾದರೆ; ನಿಷೇಧ ಮತ್ತು ವಿಧಿರೂಪಗಳಾಗಿ ತೋರುವುವು. ಇವು-ಗಳಲ್ಲಿ, ಆಪಾತತಃ ಹುಟ್ಟುವಾಗ ಎಂದರೆ ಮೊದಲ ತೋರಿಕೆಯಲ್ಲಿಯೇ ಗೋಚರಿಸುವಾಗ ಸಮಂಜಸವಾಗಿ ವಿಧಿರೂಪದಲ್ಲಿಯೇ ಭಾಸವಾಗುತ್ತದೆ. ಎರಡನೆಯ ತೋರಿಕೆಯಿಂದ ಮುಂದೆ ಗೋಚರಿಸುವಾಗ ರೂಪಾಂತರವಾಗಿ ಎಂದರೆ ''ಇಲ್ಲ, ಅಲ್ಲ, ಸಲ್ಲದು, ಬೇಡ'' ಮುಂತಾದ ನಿಷೇಧ ರೂಪದಲ್ಲಿ ಭಾಸವಾಗುತ್ತದೆ. ತಿಳಿವಳಿಕೆಯನ್ನು ಹುಟ್ಟಿಸುವ ಸಾಧನಗಳು ಬೇರೆ ಬೇರೆಯಾದಾಗ ಆಯಾ ತೋರಿಕೆಗಳೂ ಬೇರೆ ಬೇರೆಯಾಗಿ ಜನಿಸುತ್ತವೆ. ಇದು ಕಾರ್ಯದಿಂದ ಗಮನಾರ್ಹವಾಗಿದೆ. ಆ ತೋರಿಕೆಗಳು ಯಾವುವೆಂದರೆ, ''ಇಲ್ಲಿ ಕುಂಭವಿದೆ.'' ''ಅದು ಬಿಳುಪಾಗಿಲ್ಲ'' ಎಂತಲೂ ಹೀಗೆಯೆ ''ಇಲ್ಲಿ ಕುಂಭವಿಲ್ಲ'' ''ಕುಂಭದ ಅಭಾವವಿದೆ'' ಎಂತಲೂ ತೋರುವುದು. ಮೊದಲನೆಯದರಲ್ಲಿ ಕುಂಭದ ಇರುವಿಕೆಯು ತೋರುತ್ತಿದ್ದು ಅದರ ಬಿಳುಪಿನ ನಿಷೇಧವು ತೋರುತ್ತದೆ. ಎರಡನೆಯದರಲ್ಲಿ ಸಹಜವಾಗಿ ಕುಂಭದ ಇರುವಿಕೆಯನ್ನು ನಿಷೇಧಿಸಿ ಅದರ ಅಭಾವವನ್ನು ವಿಧಾನಿಸಿದ್ದುದು ಕಂಡು ಬರುತ್ತದೆ. ಇದೇ ಮತ್ತೊಂದು ರೀತಿಯ ನಿಷೇಧ ವಿಧಿ ರೂಪಗಳು. ಹೀಗೆ ತೋರಿಕೆಯಲ್ಲಿ ವಿಧಿ-ನಿಷೇಧಗಳ ವಿಪರ್ಯಾಸವು ಶಾಸ್ತ್ರಸಿದ್ಧವಾಗಿದೆ.

ತತ್ತ್ವವಿಭಾಗಗಳ ಮೇಲಿನ ಸಂದೇಹಗಳು ಮತ್ತು ಪರಿಹಾರ

ಈಗ ಶ್ರೀ ಟೀಕಾರಾಯರು ತತ್ತ್ವಗಳ ಮೇಲಿನ ವಿಭಾಗಗಳಲ್ಲಿ ತೋರಿ ಬರುವ ಸಂದೇಹಗಳನ್ನು ವಿಮರ್ಶಿಸಿ ಪರಿಹರಿಸಿದ್ದಾರೆ.

Rarest Archiver

ಭಾವದೀಪ—

ಉತ್ತರವಾಕ್ಯಮವತಾರಯತಿ ಇತ್ಯುಕ್ತ್ಯೇತಿ । ವಿಧಾರ್ಥೇ ವಿಹಿತ ಧಾ ಪ್ರತ್ಯಯಾಂತಪದೋಕ್ತ್ಯೇತ್ಯರ್ಥಃ । ತತ್ಕಥಮಿತಿ ಪ್ರಶ್ನಃ । ತತ್ರ ಏವಂ ಪ್ರಶ್ನೇ ಸತಿ ಪರಿಹಾರಮಾಹೇತ್ಯರ್ಥಃ । ಇತಿಪದಾಧ್ಯಾಹಾರೇಣಾಹ ಭಾವೋ-ಽಭಾವಶ್ಚೇತೀತಿ । ಭಾವಸ್ಯ ಪ್ರಥಮೋದ್ದೇಶೇ ನಿಮಿತ್ತಮಾಹ ಅಭಾವಪ್ರತೀತಿರಿತಿ ॥ ನಿಯಮೇನೇತಿ । ಪ್ರತಿಯೋಗಿಜ್ಞಾನಂ ವಿನಾ ಅಭಾವಪ್ರತೀತೇಃ ಕದಾಪ್ಯನುದಯಾದಿತಿ ಭಾವಃ ।

''ಪ್ರಥಮಪ್ರತಿಪತ್ತಿಷು । ನಿಷೇಧವಿಧಿರೂಪತ್ವಂ ಭಾವಾಭಾವತ್ವಮತ್ರ ಹಿ'' ಇತಿ ಯುಕ್ತಿಪಾದೀಯಾನು-ವ್ಯಾಖ್ಯಾನಾನುರೋಧೇನಾಹ ಪ್ರಥಮಪ್ರತೀತಾವಿತಿ । ವಿಷಯಿವಿಷಯಯೋರಾಧಾರಾಧೇಯಭಾವೋ ಗೌಣ ಇತ್ಯಭಿಪ್ರೇತ್ಯ ಸಪ್ತಮೀಪ್ರಯೋಗಃ । ಕುತ ಏತದಿತಿ । ಏತದ್ಭಾವಾಭಾವವ್ಯವಸ್ಥಾಕಲ್ಪನಂ ಕುತಃ ಕುತೋ ಮಾನಾ-ದಿತ್ಯರ್ಥಃ । ಘಟಾದೇರ್ಭಾವಸ್ಯಾಪಿ ಪಟಾದಿರ್ನೇತಿ ನಿಷೇಧಧೀವಿಷಯತ್ವಾದಿತಿ ಭಾವಃ । ಭಾವಾಭಾವಧೀರೇವ ಪ್ರಮಾಣಂ ತಥಾ ಪ್ರತೀತೌ ಚ ತತ್ತತ್ಸ್ವರೂಪಮೇವ ನಿಯಾಮಕಮಿತಿ ಭಾವೇನಾಹ ಸ್ವರೂಪೇಣೇತಿ ॥ ವಿಧೀತಿ । ಅಪರಪ್ರತಿಕ್ಷೇಪಪರಪ್ರತಿಕ್ಷೇಪರೂಪಾವಿತ್ಯರ್ಥಃ । ನನ್ವಸ್ತು ನಾಮ ಭಾವಾಭಾವಯೋಃ ಸ್ವರೂಪೇಣ ವಿಧಿನಿಷೇಧ-ರೂಪತಾ ಚ । ತಥಾಪಿ ಕಿಂ ಪ್ರಕೃತ ಇತ್ಯತ ಆಹ ತತ್ರೇತಿ । ನನ್ವಾಪಾತಜಾಯಾಂ ಸಂವಿದಿಸ್ವರೂಪಮೇವಾವಭಾಸತೇ ರೂಪಾಂತರಂ ತು ದ್ವಿತೀಯಾದಿಪ್ರತೀತೌ ಭಾಸತ ಇತಿ ಕುತಃ । ರೂಪದ್ವಯಪ್ರತೀತಿಸಾಮಗ್ರೀಭೇದೇ ಮಾನಾಭಾವಾ-ದಿತ್ಯತ ಆಹ ಕಾರ್ಯಗಮ್ಯತ್ವಾದಿತಿ । ಪ್ರತೀತಿರೂಪಕಾರ್ಯಭೇದ ಏವ ತತ್ಸಾಮಗ್ರೀಭೇದೇ ಮಾನಮಿತಿ ಭಾವಃ । ಪೂರ್ವಾಪರಭಾವಾಪನ್ನೋಕ್ತರೂಪದ್ವಿವಿಧಪ್ರತೀತಿರೂಪಕಾರ್ಯಗಮ್ಯತ್ವಾತ್ ಭಾವಾಬಾವಪ್ರತೀತಿದ್ವಯಸಾಮಗ್ರೀ-ಭಾವಸ್ಯಾದೌ ವಿಧಿರೂಪಪ್ರತೀತಿಂ ಜನಯಿತ್ವಾ ಪಶ್ಚಾತ್ ನಿಷೇಧರೂಪಪ್ರತೀತಿಂ ಜನಯತಿ । ಅಭಾವಪ್ರತೀತಿಸಾಮಗ್ರೀ ತು ಭಾವಪ್ರತೀತಿವೈಪರೀತ್ಯೇನಾಭಾವಪ್ರತೀತಿಂ ಜನಯತೀತ್ಯೇವಂ ಭಾವಾಭಾವಪ್ರತೀತಿಸಾಮಗ್ರ್ಯೋರ್ಭೇದಸ್ಯೇತಿ ವಾ । ಭಾವಸ್ಯಾದೌ ವಿಧಿಪ್ರತೀತಿಸಾಮಗ್ರೀ ಪಶ್ಚಾನ್ನಿಷೇಧಪ್ರತೀತಿಸಾಮಗ್ರೀ ಇತ್ಯಾದಿರೂಪೇಣ ಸಾಮಗ್ರೀಭೇದಸ್ಯೇತಿ ವಾರ್ಥಃ ।

ಕಾರ್ಯಮೇವಾಸಿದ್ಧಮಿತ್ಯತ ಆಹ ತಥಾ ಚೇತಿ । ಉಕ್ತರೂಪೇಣಾಸ್ತಿ ಚ ಪ್ರತೀತಿರಿತ್ಯರ್ಥಃ ।

ಇತ್ಯುಕ್ತ್ಯೇತಿ— ''ಭಾವಾಭಾವೌ ದ್ವಿಧೇತರತ್'' ಎಂಬ ಉತ್ತರವಾಕ್ಯಕ್ಕೆ ಇದರಿಂದ ಅವತಾರಿಕೆಯನ್ನು ಕೊಟ್ಟಿ-ದ್ದಾರೆ. ವಿಧಾ ಎಂಬರ್ಥದಲ್ಲಿ ಧಾ ಪ್ರತ್ಯಯವನ್ನು ವಿಧಿಸಲಾಗಿದೆ. ಇದರಿಂದ ದ್ವಿಧಾ ಎಂದಾಯಿತು. ಈ ಪದವನ್ನು ಪ್ರಯೋಗಿಸುವುದರಿಂದ ಪರತಂತ್ರತತ್ತ್ವದಲ್ಲಿ ಅನೇಕ ಪ್ರಭೇದಗಳಿವೆ ಎಂಬರ್ಥವು ಸೂಚಿತವಾಗುತ್ತದೆ. ಅದು ಹೇಗೆ ಎಂಬುದು ಪ್ರಶ್ನೆ. ಆ ವಿಷಯದಲ್ಲಿ ಹೀಗೆ ಪ್ರಶ್ನೆಯು ಹುಟ್ಟಿಕೊಳ್ಳಲಾಗಿ ಅದಕ್ಕೆ ಪರಿಹಾರವನ್ನು ಹೇಳಿದರು ಎಂದರ್ಥ.

ಭಾವೋಽಭಾವಶ್ಚೇತಿ— ಇಲ್ಲಿ ಇತಿಶಬ್ದದ ಅಧ್ಯಾಹಾರದೊಡನೆ ಹೇಳಿದ್ದಾರೆ.

ಅಭಾವಪ್ರತೀತಿರಿತಿ— ಭಾವವನ್ನು ಪ್ರಥಮದಲ್ಲಿ ಉದ್ದೇಶಗೊಳಿಸಿದುದರ ಕಾರಣವನ್ನು ಹೇಳಿದರು.

ನಿಯಮೇನೇತಿ— ಪ್ರತಿಯೋಗಿಯ ಜ್ಞಾನವಿಲ್ಲದೆ ಅಭಾವದ ಪ್ರತೀತಿಯು ಯಾವಾಗಲೂ ಹುಟ್ಟಲಾರದು ಎಂದು ಭಾವ.

Rarest Archiver

ಪ್ರಥಮಪ್ರತೀತಾವಿತಿ— ಶ್ರೀಮದಾಚಾರ್ಯಕೃತ ಅನುವ್ಯಾಖ್ಯಾನದ ಯುಕ್ತಿಪಾದದಲ್ಲಿ ''ಪ್ರಥಮಪ್ರತಿಪತ್ತಿಷು । ನಿಷೇಧವಿಧಿರೂಪತ್ವಂ ಭಾವಾಭಾವತ್ವಮತ್ರ ಹಿ'' ಎಂದಿದೆ. ಅದಕ್ಕೆ ಅನುಗುಣವಾಗಿ ಇಲ್ಲಿ ಭಾವಾಭಾವಗಳ ಲಕ್ಷಣಗಳನ್ನು ಹೇಳಿದ್ದಾರೆ. ಅದೆಂದರೆ ಮೊದಲನೆಯ ತಿಳಿವಳಿಕೆಯಲ್ಲಿ ಯಾವುದು ಇದೆ ಎಂದು ತೋರುವುದೋ ಅದೇ ಭಾವ. ಯಾವುದು ಇಲ್ಲವೆಂದು ತೋರುವುದೋ ಅದೇ ಅಭಾವ. ವಿಧಿರೂಪದಲ್ಲಿ ಭಾವವೂ ನಿಷೇಧರೂಪದಲ್ಲಿ ಅಭಾವವೂ ತೋರುತ್ತವೆ. ಇದಕ್ಕೆ ವಿಪರೀತವಾದರೆ ನಿಷೇಧರೂಪವಾಗಿ ಭಾವವೂ ವಿಧಿರೂಪವಾಗಿ ಅಭಾವವೂ ತೋರುತ್ತವೆ ಎಂದು ಅಭಿಪ್ರಾಯ ಪಡಲಾಗಿದೆ. ಪ್ರಥಮಪ್ರತೀತೌ ಎಂಬಲ್ಲಿ ಸಪ್ತಮೀವಿಭಕ್ತಿಯನ್ನು ಹೇಳಿದ್ದಾರೆ. ಅದೇಕೆಂದರೆ, ವಿಷಯೀ ಆಧಾರವಾಗಿಯೂ ವಿಷಯ ಆಧೇಯವಾಗಿಯೂ ಇರಬೇಕೆಂಬ ನಿಯಮವು ಮುಖ್ಯವಲ್ಲ. ಗೌಣ ಎಂದರೆ ಅಪ್ರಧಾನ ಎಂಬುದನ್ನು ತಿಳಿಸಲು ಸಪ್ತಮೀ ಪ್ರಯೋಗ ಮಾಡಿದ್ದಾರೆ.

ಕುತ ಏತದಿತಿ— ಭಾವಾಭಾವಗಳ ಈ ವ್ಯವಸ್ಥೆಯ ಕಲ್ಪನೆಯನ್ನು ಏಕೆ ಮಾಡಲಾಗಿದೆ ? ಮತ್ತು ಯಾವ ಪ್ರಮಾಣದಿಂದ ಮಾಡಲಾಗಿದೆ ? ಎಂದರ್ಥ.

ಘಟ ಮುಂತಾದವು ಭಾವವಸ್ತುಗಳಾಗಿವೆ. ಅದಾಗ್ಯೂ ಅವುಗಳನ್ನು ''ಘಟವು ಪಟವಲ್ಲ'' ಎಂದು ನಿಷೇಧಿಸಲು ಸಾಧ್ಯ. ಆಗ ನಿಷೇಧಕ್ಕೆ ಭಾವ ವಸ್ತುವಾದ ಪಟವೂ ವಿಷಯವಾಗಿರುವಾಗ ನಿಷೇಧಕ್ಕೆ ಯಾವುದು ವಿಷಯ ? ವಿಧಿಗೆ ಯಾವುದು ವಿಷಯ ? ಎಂಬ ವ್ಯವಸ್ಥೆಯೇ ಇಲ್ಲದಂತಾಗುತ್ತದೆ. ಆದುದರಿಂದ ಇದಕ್ಕೆ ಒಂದು ಸರಿಯಾದ ವ್ಯವಸ್ಥೆಯಿಲ್ಲ. ಪ್ರಮಾಣವಿಲ್ಲ.

ಸ್ವರೂಪೇಣೇತಿ— ಇದು ಭಾವ ಎಂಬ ತಿಳಿವಳಿಕೆ, ಇದು ಅಭಾವ ಎಂಬ ತಿಳಿವಳಿಕೆ. ಹೀಗೆ ಆಯಾ ತಿಳಿವಳಿಕೆಗಳೇ ಭಾವಾಭಾವ ವಸ್ತುಗಳಿರುವ ವಿಷಯದಲ್ಲಿ ಪ್ರಮಾಣ. ಅವು ಹಾಗೆ ತೋರುವುದಕ್ಕೆ ಆಯಾ ವಸ್ತುಗಳ ಸ್ವರೂಪವೇ ನಿಯಾಮಕ ಎಂದರೆ ಕಾರಣ. ಅದುದರಿಂದ ವಿಧಿನಿಷೇಧಗಳ ಸ್ವರೂಪದಿಂದಲೇ ಭಾವಾಭಾವಗಳು ತೋರುತ್ತವೆ ಎನ್ನಲಾಗಿದೆ.

ವಿಧೀತಿ— ವಿಧಿರೂಪ, ನಿಷೇಧರೂಪಗಳೆಂದರೇನು ? ವಿಧಿರೂಪ ಭಾವಪದಾರ್ಥ. ಅದು ಅಪರ ವಸ್ತುವನ್ನು ಪ್ರತಿಕ್ಷೇಪ ಮಾಡುತ್ತದೆ. ಉದಾಹರಣೆ— ಘಟವು ಇದೆ ಎಂಬುದು ವಿಧಿರೂಪ. ಇದು ಘಟಾಭಾವವಿಲ್ಲ ಎಂಬ ಅಪರ ವಸ್ತುವನ್ನು ಪ್ರತಿಕ್ಷೇಪ ಮಾಡಿದೆ. ಆದುದರಿಂದ ಇದು ವಿಧಿರೂಪ ಭಾವವಸ್ತುವಾಗಿದೆ. ಘಟವಿಲ್ಲ ಎಂಬುದು ನಿಷೇಧರೂಪ. ಇದು ಘಟಾಭಾವವಿದೆ ಎಂಬ ಪರವಸ್ತುವನ್ನು ಪ್ರತಿಕ್ಷೇಪ ಮಾಡಿದೆ. ಆದುದರಿಂದ ಇದು ನಿಷೇಧರೂಪ ಆಭಾವವಸ್ತುವಾಗಿದೆ.

ತತ್ರೇತಿ— ಭಾವಾಭಾವಗಳು ಸ್ವರೂಪದಿಂದಲೇ ವಿಧಿನಿಷೇಧರೂಪಗಳಾಗಿರಲಿ, ಪ್ರಕೃತಕ್ಕೆ ಏನಾದಂತಾಯಿತು ? ಎಂದರೆ, ಮೊದಲ ತೋರುವಾಗ ಸ್ವರೂಪವೇ ಭಾಸವಾಗುತ್ತದೆ. ಎರಡನೆಯ ಬಾರಿ ತೋರುವಾಗ ಅದಕ್ಕೆ ವಿಪರೀತವಾಗಿ ಎಂದರೆ ವಿಧಿಯು ನಿಷೇಧರೂಪದಲ್ಲಿಯೂ ನಿಷೇಧವು ವಿಧಿರೂಪದಲ್ಲಿಯೂ ಭಾಸವಾಗುತ್ತದೆ ಎಂದು ಭಾವ.

ಕಾರ್ಯಗಮ್ಯತ್ವಾದಿತಿ— ಮೊದಲ ತೋರಿಕೆಯಲ್ಲಿ ಸ್ವರೂಪವೇ ಭಾಸವಾಗಬೇಕು. ಎರಡನೆಯ ತೋರಿಕೆಯಿಂದ ಮುಂದೆ ರೂಪಾಂತರವಾಗಿ ಭಾಸವಾಗಬೇಕು. ಇದು ಹೀಗಾಗಲು ಕಾರಣವೇನು ? ಎರಡು ರೂಪದಲ್ಲಿ

Rarest Archiver

ತೋರುವ ಸಾಮಗ್ರಿಗಳು ಬೇರೆ ಬೇರೆಯಾಗಿವೆ ಎನ್ನುವುದಕ್ಕೆ ಪ್ರಮಾಣವೇನು ? ಎಂಬ ಆಕ್ಷೇಪಕ್ಕೆ ಇಲ್ಲಿ ಸಮಾಧಾನ ಹೇಳಲಾಗಿದೆ. ಅವು ಹಾಗೆ ತೋರಬೇಕಾದರೆ ಅವುಗಳಿಗೆ ಕಾರಣವಿರಲೇಬೇಕು. ಕಾರಣವೇ ಸಾಮಗ್ರಿಗಳು. ಅವು ಭಿನ್ನಭಿನ್ನವಾಗಿರುವಾಗ ಪ್ರತೀತಿಗಳೂ ಭಿನ್ನಭಿನ್ನವಾಗಿ ಹುಟ್ಟುತ್ತವೆ. ಉದಾಹರಣೆ— ''ಇಲ್ಲಿ ಘಟವಿದೆ, ಅದು ಬಿಳುಪಾಗಿಲ್ಲ'' ಇದು ಒಂದು ರೀತಿಯ ಸಾಮಗ್ರಿಯಿಂದ ಹುಟ್ಟಿದ ಪ್ರತೀತಿ. ''ಇಲ್ಲಿ ಘಟವಿಲ್ಲ, ಘಟಾಭಾವವಿದೆ'' ಇದು ಮತ್ತೊಂದು ರೀತಿಯ ಸಾಮಗ್ರಿಯಿಂದ ಹುಟ್ಟಿದ ಪ್ರತೀತಿ. ಪೂರ್ವಾಪರಭಾವವನ್ನು ಎಂದರೆ ಹಿಂದು-ಮುಂದಾಗುವಿಕೆಯನ್ನು ಎರಡುವಿಧವಾದ ಪ್ರತೀತಿಗಳು ಹೊಂದಿವೆ. ಹೇಗೆಂದರೆ ಭಾವವು ಅಭಾವವಾಗಿಯೂ, ಅಭಾವವು ಭಾವವಾಗಿಯೂ ಕಾಣುವ ಪ್ರತೀತಿಗಳು. ಇವೆರಡು ಕಾರ್ಯಗಳು. ಇಂತಹ ಕಾರ್ಯಗಳಿಂದ ನಮಗೆ ಕಂಡುಬರುವುದೇನೆಂದರೆ, ಭಾವಾಭಾವಗಳೆಂಬ ಎರಡು ಪ್ರತೀತಿಗಳು ಹುಟ್ಟಲು ಸಾಮಗ್ರಿಗಳು ಇವೆ ಎಂದು ತಿಳಿದು-ಬರುತ್ತದೆ. ಇದು ಮೊದಲು ವಿಧಿರೂಪದ ಪ್ರತೀತಿಯನ್ನು ಹುಟ್ಟಿಸಿ ಅನಂತರ ನಿಷೇಧರೂಪದ ಪ್ರತೀತಿಯನ್ನು ಹುಟ್ಟಿಸುತ್ತದೆ. ಆಭಾವಪ್ರತೀತಿಯ ಸಾಮಗ್ರಿಯಾದರೂ ಭಾವಪ್ರತೀತಿಗೆ ವಿಪರೀತವಾಗಿ ಅಭಾವದ ಪ್ರತೀತಿಯನ್ನು ಹುಟ್ಟಿಸುತ್ತದೆ. ಈ ರೀತಿಯಾಗಿ ಭಾವದ ಮತ್ತು ಅಭಾವದ ಪ್ರತೀತಿಗಳ ಸಾಮಗ್ರಿಗಳು ಬೇರೆಬೇರೆಯಾಗಿವೆ. ಅಥವಾ ಮೊದಲು ಭಾವದ ವಿಧಿರೂಪದ ಸಾಮಗ್ರಿಯು, ಅನಂತರ ನಿಷೇಧರೂಪದ ಅಭಾವದ ಪ್ರತೀತಿಯ ಸಾಮಗ್ರಿಯು ಇರುತ್ತದೆ. ಇವು ಸಾಮಗ್ರಿಯ ಭೇದಗಳು ಇರುವಲ್ಲಿ ಪ್ರಮಾಣ ಎಂದು ಭಾವ.

ಹಿಂದೆ ಹೇಳಿದ ಕಾರ್ಯಗಳೇ ಅಸಿದ್ಧ ಎನ್ನುವುದಾದರೆ, ಅದಕ್ಕೆ ಸಮಾಧಾನ,

ತಥಾ ಚೇತಿ— ಪೂರ್ವೋಕ್ತ ಪ್ರಕಾರ ಪ್ರತೀತಿಯು ಇದ್ದೇ ಇದೆ. ಕಾರ್ಯಗಳು ಅಸಿದ್ಧವಲ್ಲ.

ಟೀಕಾ—

ನನು ಸ್ವತಂತ್ರತತ್ತ್ವಂ ಭಾವೋಽಭಾವೋಽನ್ಯದ್ವಾ ? ನಾದ್ಯದ್ವಿತೀಯೌ । ಭಾವಾಭಾವಯೋಃ ಪರ-ತಂತ್ರಪ್ರಭೇದತ್ವಾತ್ । ನ ತೃತೀಯಃ । ವ್ಯಾಘಾತಾತ್ । ಮೈವಮ್ । ಭಾವಲಕ್ಷಣಾಕ್ರಾಂತತ್ವಾತ್ । ಪರತಂತ್ರಂ ಭಾವಾಭಾವತಯಾ ದ್ವಿಧೈವ ನ ಪುನರೇಕವಿಧಂ ನಾಪಿ ತ್ರಿವಿಧಮಿತ್ಯೇವಂಪರೋ ವಿಭಾಗಃ । ನ ಪುನಃ ಪರ-ತಂತ್ರಮೇವ ಭಾವಾಭಾವಾತ್ಮಕಮಿತಿ ।

ಯಥಾ ಭಾವೇಷು ಸ್ವತಂತ್ರತತ್ತ್ವಂ ಪ್ರವಿಶತಿ ತಥಾ ವಿಭಾಗಃ ಕ್ರಿಯತಾಮ್ ಇತಿ ಚೇತ್ ನೈವಂ ಶಂಕ್ಯಮ್ । ತದ್ಧಿ ಪ್ರಧಾನತಯಾ ಸರ್ವವಿವಿಕ್ತಮೇವ ವೇದಿತವ್ಯಮ್ । ಅನ್ಯಥಾ—

''ದ್ವಿವಿಧಂ ತತ್ತ್ವಂ ಭಾವೋಽಭಾವಶ್ಚ । ಭಾವೋಽಪಿ ದ್ವಿವಿಧಃ ನಿತ್ಯೋಽನಿತ್ಯಶ್ಚ । ನಿತ್ಯೋ ದ್ವಿವಿಧಃ ಚೇತನೋಽಚೇತನಶ್ಚ । ಚೇತನೋಽಪಿ ದ್ವಿವಿಧಃ ಸ್ವತಂತ್ರೋಽಸ್ವತಂತ್ರಶ್ಚ'' ಇತಿ ಕರ್ತವ್ಯಮ್ । ಏವಂ ಸತಿ ನ ಪ್ರಾಧಾನ್ಯೇನ ಪ್ರತಿಪತ್ತಿಃ ಸ್ಯಾತ್ । ಭಗವದ್ವ್ಯತಿರಿಕ್ತಸ್ಯ ಸರ್ವಸ್ಯಾಪ್ಯಸ್ವಾತಂತ್ರ್ಯಪ್ರತೀತಿರ್ನ ಸ್ಯಾತ್ ।

ಅಸ್ಮಿನ್ ಪಕ್ಷೇ ಸ್ವತಂತ್ರಸ್ಯ ಭಾವತ್ವಂ ನ ವಿದಿತಂ ಸ್ಯಾದಿತಿ ಸಮಮೇವ ಇತಿ ಚೇನ್ನ । ಪುರುಷಾರ್ಥೋಪ-ಯೋಗಾನುಪಯೋಗಾಭ್ಯಾಂ ವಿಶೇಷಾತ್ । ಅಭಾವಾದೀನಾಂ ನಿತ್ಯತ್ವಾದ್ಯನುಕ್ತಿಶ್ಚ ಸಮೈವ । ತಸ್ಮಾದ್ಯಥಾನ್ಯಾ ಸಮೇವಾಸ್ತು ।

Rarest Archiver

ಅದು ಸರಿ. ಸ್ವತಂತ್ರ ತತ್ತ್ವವು ಭಾವದಲ್ಲಿ ಸೇರುವುದೋ ಅಭಾವದಲ್ಲಿ ಸೇರುವುದೋ? ಅಥವಾ ಅವೆರಡನ್ನೂ ಬಿಟ್ಟು ಮತ್ತೊಂದರಲ್ಲಿ ಸೇರುವುದೊ? ಎಂದರೆ,

ಮೊದಲಿನ ಎರಡರಲ್ಲಿಯೂ ಸೇರುವುದಿಲ್ಲ. ಏಕೆಂದರೆ; ಭಾವಾಭಾವಗಳು ಪರತಂತ್ರತತ್ತ್ವದ ಪ್ರಭೇದದಲ್ಲಿ ಸೇರಿವೆ.

ಹಾಗಾದರೆ ಮೂರನೆಯ ಪ್ರಕಾರದಲ್ಲಿ ಸೇರುವುದೊ ? ಎಂದರೆ,

ಅದೂ ಸಮಂಜಸವಲ್ಲ. ಏಕೆಂದರೆ ಭಾವವಲ್ಲದ್ದು ಅಭಾವವೆಂತಲೂ, ಅಭಾವವಲ್ಲದ್ದು ಭಾವವೆಂತಲೂ ಎರಡೇ ಭೇದಗಳು ಸಿದ್ಧಿಸಿರುವಾಗ ಇನ್ನು ಮೂರನೆಯ ಭೇದಕ್ಕೆ ಅವಕಾಶವೇ ಇರುವುದಿಲ್ಲ ಮತ್ತು ಸ್ವಕೃತ ವಿಭಾಗಕ್ಕೆ ವಿರೋಧ ಬರುವುದಾದುದರಿಂದ ವ್ಯಾಘಾತ ದೋಷ ಒದಗುವುದು.

ಈ ಮೇಲಿನ ಹೇಳಿಕೆಯು ಸರಿಯಲ್ಲ.

''ಏಕೆಂದರೆ; ಸ್ವತಂತ್ರತತ್ತ್ವವು ಭಾವ ಲಕ್ಷಣದಲ್ಲಿ ಅಡಕವಾಗುತ್ತದೆ. ಪರತಂತ್ರತತ್ತ್ವದಲ್ಲಿ ಭಾವವೆಂತಲೂ ಅಭಾವವೆಂತಲೂ ಎರಡೇ ವಿಧಗಳಿವೆ. ಅದು ಒಂದೇ ವಿಧವೆಂದು ಹೇಳುವುದಕ್ಕಾಗುವುದಿಲ್ಲ ಮತ್ತು ಮೂರು ವಿಧಗಳಿವೆ ಎಂದು ವಾದಿಸುವುದೂ ಸರಿಯಲ್ಲ.''

ಹೀಗೆ ಬೇರೆ ಪ್ರಕಾರವಾಗಿ ವಿಭಾಗಗಳನ್ನು ಸೂಚಿಸಿದ್ದುದು ಸಾಧುವಲ್ಲ.

ಇನ್ನು ಪರತಂತ್ರತತ್ತ್ವದಲ್ಲಿ ಭಾವ, ಅಭಾವಗಳೆಂಬ ರೀತಿಯಲ್ಲಿ ಎರಡು ವಿಧಗಳಿವೆ ಎಂಬುದನ್ನು ಏಕೆ ಒಪ್ಪಬೇಕು ? ಸ್ವತಂತ್ರತತ್ತ್ವವನ್ನು ಭಾವದಲ್ಲಿ ಸೇರಿಸುವ ಹಾಗೆ ವಿಭಾಗಗೊಳಿಸಬಹುದಲ್ಲವೆ ? ಎಂದು ಕೇಳಬಾರದು.

ಏಕೆಂದರೆ; ಸ್ವತಂತ್ರತತ್ತ್ವವು ಎಲ್ಲಕ್ಕಿಂತಲೂ ಮಿಗಿಲಾಗಿ ಎಲ್ಲವನ್ನೂ ಮೀರಿ ಪ್ರತ್ಯೇಕವಾಗಿ ತಾನೇ ತಾನಾಗಿ ಇರುವುದೆಂಬುದನ್ನು ಗಮನಿಸಬೇಕು.

ಮತ್ತೊಂದು ವಿಭಾಗ ಕ್ರಮ

ಈಗ ಬೇರೊಂದು ರೀತಿಯ ವಿಭಾಗವನ್ನು ಸಂದೇಹಿಸಿ ಪರಿಹರಿಸುವರು.

ಶ್ರೀಮದಾಚಾರ್ಯರು ಒಪ್ಪಿಕೊಂಡ ರೀತಿಯಲ್ಲಿ ವಿಭಾಗಗೊಳಿಸದೆ ಬೇರೆ ರೀತಿಯಲ್ಲಿ ವಿಭಾಗಗೊಳಿಸಿದರೆ ಅದು ಹೀಗಾಗುವುದು.

''ತತ್ತ್ವಗಳಲ್ಲಿ ಎರಡು ವಿಧ. ಭಾವ ಮತ್ತು ಅಭಾವ, ಭಾವದಲ್ಲಿಯೂ ಎರಡು ವಿಧ. ನಿತ್ಯ ಮತ್ತು ಅನಿತ್ಯ. ನಿತ್ಯದಲ್ಲಿ ಎರಡು ವಿಧ. ಚೇತನ ಮತ್ತು ಅಚೇತನ. ಚೇತನದಲ್ಲಿಯೂ ಎರಡು ವಿಧ. ಸ್ವತಂತ್ರ ಮತ್ತು ಅಸ್ವತಂತ್ರ'' ಎಂದು ವಿಭಾಗ ಮಾಡಬೇಕಾಗುತ್ತದೆ. ಹೀಗೆ ವಿಭಾಗಗೊಳಿಸಿದರೆ ಸ್ವತಂತ್ರತತ್ತ್ವವು ಪ್ರಧಾನವೆಂದು ಹೇಳಿದಂತಾಗಲಿಲ್ಲ. ಪರಮಾತ್ಮನಿಂದ ವ್ಯತಿರಿಕ್ತವಾದ ಸರ್ವಪ್ರಪಂಚವೂ ಅಸ್ವತಂತ್ರವೆಂಬ ತಿಳಿವಳಿಕೆಯೂ ಹುಟ್ಟಿದಂತಾಗಲಿಲ್ಲ. ಆದುದರಿಂದ ಈ ಮೇಲಿನಂತೆ ವಿಭಾಗಗೊಳಿಸಿದ ಪಕ್ಷವು ಸರಿಯಲ್ಲ.

Rarest Archiver

ಹಾಗಾದರೆ, ಸ್ವತಂತ್ರತತ್ತ್ವವು ಭಾವಪದಾರ್ಥದಲ್ಲಿ ಸೇರಿದಂತಾಗಲಿಲ್ಲವೆಂಬ ಪೂರ್ವದಲ್ಲಿ ಮಾಡಿದ ದೋಷಾರೋಪಣೆಯು ನಿಮಗೂ ಸಲ್ಲುತ್ತದೆ. ಮತ್ತು ಈ ವಿಚಾರದಲ್ಲಿ ನಮಗೂ ನಿಮಗೂ ಸಾಮ್ಯವುಂಟಾಗುತ್ತದೆ ಎಂದರೆ;

ಈ ಹೇಳಿಕೆಯು ಸರಿಯಲ್ಲ. ಎಂದಿಗೂ ಸಾಮ್ಯವುಂಟಾಗುವುದಿಲ್ಲ. ಏಕೆಂದರೆ; ನಮ್ಮ ರೀತಿಯಿಂದ ವಿಭಾಗಗೊಳಿಸುವುದು ಪುರುಷಾರ್ಥಕ್ಕೆ ಉಪಯೋಗವಾದುದು. ನಿಮ್ಮ ಪ್ರಕಾರದ ವಿಭಾಗವು ಪುರುಷಾರ್ಥಕ್ಕೆ ಉಪಯೋಗವಾಗುವುದಿಲ್ಲ. ಆದುದರಿಂದ ಇಲ್ಲಿ ನಮಗೂ ನಿಮಗೂ ಎಷ್ಟೋ ಅಂತರ ಕಂಡುಬಂದಿದೆಯಾಗಿ ಸಮಾನತೆಯುಂಟಾಗಲಿಲ್ಲ.

ಇದೂ ಅಲ್ಲದೆ ನಿಮ್ಮ ರೀತಿಯ ವಿಭಾಗದ ಪ್ರಕಾರ ಒಪ್ಪಿಕೊಂಡರೆ ಅಭಾವವೆ ಮುಂತಾದ ಕೆಲವು ಪದಾರ್ಥ-ಗಳಿಗೆ ಶಾಸ್ತ್ರ ಸಿದ್ಧವಾದ ನಿತ್ಯತ್ವವನ್ನು ಪ್ರತಿಪಾದಿಸಲಾಗದೆ ಇಕ್ಕಟ್ಟಿನಲ್ಲಿ ಸಿಕ್ಕಿ ಬೀಳುವ ಪ್ರಸಂಗ ಒದಗುವುದು. ಆದುದರಿಂದ ಶ್ರೀಮದಾಚಾರ್ಯರು ಹೇಗೆ ತತ್ತ್ವಗಳನ್ನು ವಿಭಾಗಗೊಳಿಸಿದ್ದಾರೆಯೊ ಹಾಗೆಯೆ ''ಯಥಾನ್ಯಾಸ-ಮೇವ ಸಾಧು'' ಎಂಬ ವಚನವನ್ನು ಪರಿಸೀಲಿಸಿ ಒಪ್ಪಿಕೊಳ್ಳುವುದೇ ಶ್ರೇಯಸ್ಕರ.

ಭಾವದೀಪ—

ಅಸ್ವತಂತ್ರಂ ಭಾವಾಭಾವಭೇದಾತ್ ದ್ವಿವಿಧಮಿತ್ಯಂಗೀಕಾರೇ ಸ್ವತಂತ್ರಂ ಭಾವೋ ನ ಸ್ಯಾದಿತ್ಯಾಶಯೇನಾಶಂಕತೇ ನನ್ವಿತಿ । ಅನ್ಯದ್ವಾ ಭಾವಾಭಾವಾಭ್ಯಾಂ ಅನ್ಯದ್ವೇತ್ಯರ್ಥಃ । ಪರತಂತ್ರಪ್ರಭೇದತ್ವಾತ್ । ಪರತಂತ್ರವಿಶೇಷತ್ವಾದಿತ್ಯರ್ಥಃ । ವ್ಯಾಘಾತಾದಿತಿ । ಭಾವೋ ನೇತ್ಯುಕ್ತೇ ಅಭಾವ ಇತಿ ಪ್ರಾಪ್ತಂ ಪುನರಭಾವೋ ನೇತ್ಯುಕ್ತೇ ವ್ಯಾಘಾತಃ । ತಥಾ ಅಭಾವೋ ನೇತ್ಯುಕ್ತೇ ಭಾವ ಇತಿ ಪ್ರಾಪ್ತಂ ಪುನಃ ಭಾವೋ ನೇತ್ಯುಕ್ತೇ ವ್ಯಾಘಾತಃ ಇತ್ಯರ್ಥಃ ॥ ಭಾವಲಕ್ಷಣೇತಿ । ಅಸ್ತಿ ಬ್ರಹ್ಮ । ನಾರಾಯಣೋ ವಾ ಇದಮಗ್ರ ಆಸೀತ್ ಬ್ರಹ್ಮ ವಾ ಇದಮಗ್ರ ಆಸೀತ್ ಇತ್ಯಾದಿರೂಪೇಣ ಪ್ರಥಮಪ್ರತೀತೌ ವಿಧಿತಯಾ ಪ್ರತೀಯಮಾನತ್ವರೂಪಭಾವಲಕ್ಷಣೋಪೇತತ್ವಾತ್ ಭಾವತ್ವಮೇವೇತ್ಯರ್ಥಃ । ತರ್ಹಿ ಭಾವಾಭಾವೌ ದ್ವಿಧೇತರದಿತ್ಯುಕ್ತವಿರೋಧ ಇತ್ಯತ ಆಹ ಪರತಂತ್ರಮಿತಿ ॥ ಇತ್ಯೇವಂಪರ ಇತಿ । ಇತ್ಯೇವಮೇತಾದೃಶೋ ನ್ಯೂನಾ-ಧಿಕಸಂಖ್ಯಾವ್ಯವಚ್ಛೇದಃ ಪರಃ ಉದ್ದೇಶ್ಯಃ ಯಸ್ಯ ಸ ತಥಾ ತತ್ಪ್ರಯೋಜಕ ಇತಿ ಯಾವತ್ ॥ ವಿಭಾಗ ಇತಿ । ಭಾವಾ-ಭಾವೌ ದ್ವಿಧೇತರದಿತ್ಯನೇನೋಕ್ತವಿಭಾಗ ಇತ್ಯರ್ಥಃ । ಇತಿಶಬ್ದಾನಂತರಂ ಏವಂ ಪರ ಇತ್ಯಸ್ಯಾನುಷಂಗಃ । ಇತ್ಯೇವ-ಮೇತಾದೃಶೋಽಯಂ ಇತರವ್ಯವಚ್ಛೇದಃ ತತ್ಪರೋ ನ ಭವತೀತ್ಯರ್ಥಃ ।

ಶಂಕತೇ ಯಥೇತಿ ॥ ತದ್ಧೀತಿ । ಸ್ವತಂತ್ರತತ್ತ್ವಮಿತ್ಯರ್ಥಃ ॥ ಅನ್ಯಥೇತಿ । ಸ್ವತಂತ್ರತತ್ತ್ವಸ್ಯ ಭಾವತ್ವಾರ್ಥಕ-ವಿಭಾಗಕರಣೇ ತು ಇತಿ ಕರ್ತವ್ಯಮಿತ್ಯನ್ವಯಃ । ಅಸ್ತ್ವೇವಂ ತಥಾಪಿ ಕಾ ಹಾನಿರಿತ್ಯತ ಆಹ ಏವಮಿತೀತಿ । ಭಾವತ್ವವತ್ ನಿತ್ಯತ್ವಚೇತನತ್ವಯೋರಪಿ ಲಾಭಾಯೋಕ್ತಂ ನಿತ್ಯೋಽನಿತ್ಯ ಇತ್ಯಾದಿ ವಿಭಾಗದ್ವಯಮ್ ॥ ಸರ್ವಸ್ಯಾಪೀತಿ । ಉಕ್ತ-ವಿಭಾಗೇ ಭಗವದನ್ಯಚೇತನಮಾತ್ರಸ್ಯೈವಾಸ್ವಾತಂತ್ರ್ಯಪ್ರತೀತೇರಿತಿ ಭಾವಃ ॥ ಶಂಕತೇ ಅಸ್ಮಿನ್ಪಕ್ಷ ಇತಿ । ಮೂಲಕೃದುಕ್ತ-ವಿಭಾಗಪಕ್ಷ ಇತ್ಯರ್ಥಃ । ಪುರುಷಾರ್ಥೇತಿ । ಮೂಲಕೃದುಕ್ತಟೀಕಾಕೃದುಕ್ತವಿಭಾಗದ್ವಯಪಕ್ಷೇಽಪಿ ಕಸ್ಯಚಿದರ್ಥಸ್ಯಾಜ್ಞಾನ-ಸಾಮ್ಯೇಽಪಿ ಮೂಲಕೃದುಕ್ತವಿಭಾಗಪಕ್ಷಃ ಪುರುಷಾರ್ಥೋಪಯೋಗೀ ಅವಶ್ಯಂ ಜ್ಞಾತವ್ಯಃ ಪ್ರಾಧಾನ್ಯಸರ್ವವಿಭಕ್ತ-ತ್ವಯೋಃ ಸ್ವತಂತ್ರತತ್ತ್ವಜ್ಞಾನೋದಯಾತ್ ಟೀಕಾಕೃತ್ಪ್ರದರ್ಶಿತವಿಭಾಗಪಕ್ಷೇ ತಯೋರಜ್ಞಾನಾತ್ ಭಾವತ್ವಜ್ಞಾನಸ್ಯ ಚ

Rarest Archive

ಪುರುಷಾರ್ಥಾನುಪಯೋಗೇನ ತದಜ್ಞಾನೇऽಪಿ ದೋಷಾಭಾವಾತ್ । ಮೂಲಕೃದುಕ್ತವಿಭಾಗಪಕ್ಷೇ ತು ಪುರುಷಾರ್ಥೋಪಯೋಗಿತ್ವವಿಶೇಷಭಾವಾದಿತ್ಯರ್ಥಃ । ಅಥಾಪ್ಯನುಪಪತ್ತಿರಸ್ತೀತ್ಯಾಶಂಕ್ಯಾಹ ಅಭಾವಾದೀನಾಮಿತಿ । ಅತ್ಯಂತಾಭಾವಧ್ವಂಸಯೋರ್ನಿತ್ಯತ್ವಂ ಪ್ರಾಗಭಾವಸ್ಯಾನಿತ್ಯತ್ವಂ ತ್ರಯಾಣಾಮಚೇತನತ್ವಂ ಪಾರತಂತ್ರ್ಯಮಚೇತನೇऽಪಿ ಕೇಷಾಂಚಿದನಿತ್ಯತ್ವಂ ಪಾರತಂತ್ರ್ಯಮಿತ್ಯಾದಿಕಮಪಿ ಟೀಕಾಕೃತ್ಪ್ರದರ್ಶಿತವಿಬಾಗೇ । ಮೂಲಕೃದುಕ್ತವಿಬಾಗೇ ವಿಷ್ಣೋರ್ಭಾವತ್ವಮೇವ ನೋಕ್ತಮಿತಿ ಕಸ್ಯಚಿದನುಕ್ತಿರುಭಯತ್ರ ಸಮೈವ । ಪ್ರತ್ಯುತಾತ್ರ ಬಹೂನಾಂ ಅನುಕ್ತಿಃ । ತತ್ರ ಭಾವತ್ವಸ್ಯ ಅನುಕ್ತಿರೇವ ಇತ್ಯರ್ಥಃ ॥ ತಸ್ಮಾದಿತಿ । ಅನುಕ್ತ್ಯೋಃ ಸಾಮ್ಯಾನ್ಮೂಲೋಕ್ತವಿಭಾಗೇ ವಿಶೇಷಸತ್ತ್ವಾಚ್ಚ ಮೂಲೋಕ್ತವಿಭಾಗ ಏವಾಸ್ತು ಇತ್ಯರ್ಥಃ ।

ನನ್ವಿತಿ— ಅಸ್ವತಂತ್ರವು ಭಾವ-ಅಭಾವಗಳೆಂಬ ರೀತಿಯಿಂದ ಎರಡುವಿಧವಾಗಿದೆ ಎಂದು ಅಂಗೀಕಾರ ಮಾಡಿದರೆ, ಸ್ವತಂತ್ರವು ಭಾವವಸ್ತುವಾಗಿದೆ. ಹೋಗಲಿ ಎಂಬ ಅಭಿಪ್ರಾಯದಿಂದ ಆಶಂಕೆ ಮಾಡಲಾಗಿದೆ. ಟೀಕೆಯಲ್ಲಿನ ಅನ್ಯದ್ವಾ ಎಂಬುದಕ್ಕೆ ಭಾವ-ಅಭಾವಗಳಿಂದ ಅನ್ಯವಾದದ್ದು ಎಂದರ್ಥ. ಪರತಂತ್ರಪ್ರಭೇದತ್ವಾತ್ ಎಂದರೆ, ಪರತಂತ್ರದಲ್ಲಿ ವಿಶೇಷವಿರುವುದರಿಂದ ಎಂದರ್ಥ.

ವ್ಯಾಘಾತಾದಿತಿ— ಭಾವವಲ್ಲ ಎಂದರೆ ಅಭಾವವೆಂದಾಗುತ್ತದೆ. ಪುನಃ ಅಭಾವವಲ್ಲ ಎಂದರೆ ವ್ಯಾಘಾತವಾಗುತ್ತದೆ. ಹಾಗೆಯೇ ಅಭಾವವಲ್ಲ ಎಂದರೆ ಭಾವವೆಂದಾಗುತ್ತದೆ. ಪುನಃ ಭಾವವಲ್ಲವೆಂದರೆ ವ್ಯಾಘಾತವಾಗುತ್ತದೆ ಎಂದರ್ಥ.

ಭಾವಲಕ್ಷಣೇತಿ— ''ಅಸ್ತಿ ಬ್ರಹ್ಮ = ಬ್ರಹ್ಮನಿದ್ದಾನೆ. ನಾರಾಯಣೋ ವಾ ಇದಮಗ್ರ ಆಸೀತ್, ಬ್ರಹ್ಮ ವಾ ಇದಮಗ್ರ ಆಸೀತ್ = ನಾರಾಯಣನು ಸೃಷ್ಟಿಯ ಆದಿಯಲ್ಲಿ ಇದ್ದನು. ಬ್ರಹ್ಮನೆಂಬ ನಾಮದ ಅವನೇ ಸೃಷ್ಟಿಯ ಆದಿಯಲ್ಲಿ ಇದ್ದವನು'' ಇತ್ಯಾದಿ ರೂಪದಿಂದ ಪ್ರಥಮಪ್ರತೀತಿಯಲ್ಲಿ ವಿಧಿರೂಪವಾಗಿ ಭಾವವು ತೋರುತ್ತದೆ. ಈ ಭಾವಲಕ್ಷಣದಿಂದ ಕೂಡಿರುವುದರಿಂದ ಸ್ವತಂತ್ರವನ್ನು ಭಾವವೆಂದೇ ಹೇಳಬೇಕು.

ಪರತಂತ್ರಮಿತಿ— ''ಭಾವಾಭಾವೌ ದ್ವಿಧೇತರತ್'' ಭಾವಾಭಾವಗಳೆಂದು ಅಸ್ವತಂತ್ರವು ಎರಡು ಬಗೆಯಾಗಿದೆ ಎಂಬ ಮಾತಿಗೆ ವಿರೋಧವಾಗುವುದು ಎಂಬ ಆಕ್ಷೇಪವನ್ನು ಇಲ್ಲಿ ಪರಿಹರಿಸಲಾಗಿದೆ.

ಇತ್ಯೇವಂ ಪರ ಇತಿ— ಈ ರೀತಿಯಾದ ನ್ಯೂನ ಮತ್ತು ಅಧಿಕ ಸಂಖ್ಯೆಗಳನ್ನು ಪರಿಹರಿಸುವುದೇ ಮುಖ್ಯವಾದ ಉದ್ದೇಶವು ಯಾವುದಕ್ಕಿದೆಯೋ ಅಂತಹ ವಿಭಾಗವೆಂದರ್ಥ. ಅದೇ ಅದರ ಪ್ರಯೋಜನವೆಂಬುದು ತಾತ್ಪರ್ಯ.

ವಿಭಾಗ ಇತಿ— ಅಸ್ವತಂತ್ರದಲ್ಲಿ ಭಾವಾಭಾವಗಳೆಂದು ಎರಡು ವಿಧಗಳಿವೆ ಎಂಬ ಮಾತಿನಿಂದ ತಿಳಿಸಿದ ವಿಭಾಗವೆಂದರ್ಥ. ಇತಿಶಬ್ದದ ಅನಂತರದಲ್ಲಿ ''ಏವಂ ಪರಃ'' ಎಂಬ ಪದಗಳನ್ನು ಅನುಷಂಗಮಾಡಿಕೊಳ್ಳಬೇಕು. ಆಗ ಈರೀತಿ ಅರ್ಥವು ಲಭಿಸುತ್ತದೆ. ಯಾವುದು ಇತರವನ್ನು ಪರಿಹರಿಸುವ ವಿಭಾಗವೋ ಅದು ಅದರ ಪರವಲ್ಲ, ಎಂದರ್ಥ.

ಯಥೇತಿ— ಇಲ್ಲಿ ಯಥಾ ಎಂಬುದರಿಂದ ಆ ಶಂಕೆ ಮಾಡಿದ್ದಾರೆ. ಅದೆಂದರೆ, ಸ್ವತಂತ್ರವು ಭಾವಗಳಲ್ಲಿ ಸೇರುವಂತೆ ವಿಭಾಗಿಸಿರಿ ಎನ್ನುವಂತಿಲ್ಲ ಎಂಬುದು ಆಶಂಕೆ.

ತದ್ಧೀತಿ— ಸ್ವತಂತ್ರ ತತ್ತ್ವವೆಂದರ್ಥ.

Rarest Archiver

ಅನ್ಯಥೇತಿ— ಸ್ವತಂತ್ರ ತತ್ತ್ವಕ್ಕೆ ಭಾವ ಎಂಬ ಅರ್ಥ ಬರುವಂತೆ ವಿಭಾಗ ಮಾಡುವುದಾದರೆ ಹೀಗೆ ವಿಭಾಗಿಸಬೇಕಾಗುವುದು ಎಂದು ಅನ್ವಯ.

ಏವಮಿತೀತಿ— ತತ್ತ್ವವು ಎರಡುವಿಧ. ಭಾವ ಮತ್ತು ಅಭಾವ ಎಂದು ವಿಭಾಗಿಸಲಿ, ಯಾವ ಹಾನಿ ಇದೆ ? ಎಂಬ ಪ್ರಶ್ನೆಗೆ ಸಮಾಧಾನ ಹೇಳಲಾಗಿದೆ. ಈ ವಿಭಾಗದಲ್ಲಿ ಭಾವತ್ವವು ಲಭಿಸಿದಂತೆ ನಿತ್ಯತ್ವವೂ ಚೇತನತ್ವವೂ ಲಭಿಸುವುದಕ್ಕಾಗಿ ನಿತ್ಯ, ಅನಿತ್ಯ ಇತ್ಯಾದಿಯಾಗಿ ಎರಡು ವಿಭಾಗಗಳನ್ನು ಮಾಡಿದ್ದಾಗಿದೆ.

ಸರ್ವಸ್ಯಾಪೀತಿ— ಹೀಗೆ ಹೇಳಿದ ವಿಭಾಗದಲ್ಲಿ ಪರಮಾತ್ಮನನ್ನು ಬಿಟ್ಟು ಮಿಕ್ಕ ಚೇತನ ಮಾತ್ರಕ್ಕೂ ಎಂದರೆ ಎಲ್ಲ ಚೇತನರಿಗೂ ಅಸ್ವಾತಂತ್ರ್ಯವಿದೆ ಎಂದು ತೋರುತ್ತದೆ, ಎಂದು ಭಾವ.

ಅಸ್ಮಿನ್‌ಪಕ್ಷ ಇತಿ— ಇಲ್ಲಿ ಆಶಂಕಿಸಿದ್ದಾರೆ. ಮೂಲಗ್ರಂಥಕಾರರು ಹೇಳಿದ ವಿಭಾಗವನ್ನು ಇಟ್ಟುಕೊಂಡ ಪಕ್ಷದಲ್ಲಿ ಎಂದರ್ಥ.

ಪುರುಷಾರ್ಥೇತಿ— ಮೂಲಕಾರರು ಮತ್ತು ಟೀಕಾಕಾರರು ಹೇಳಿದ ಎರಡು ವಿಭಾಗಗಳ ಪಕ್ಷದಲ್ಲಿಯೂ ಯಾವುದೋ ಒಂದು ಪದಾರ್ಥಕ್ಕೆ ಅಜ್ಞಾನದ ವಿಷಯದಲ್ಲಿ ಸಾಮ್ಯವುಂಟಾಬಹುದು. ಅದಾದರೂ ಮೂಲಕಾರರು ಹೇಳಿದ ವಿಭಾಗದ ಪಕ್ಷದಲ್ಲಿ ಪುರುಷಾರ್ಥಕ್ಕೆ ಉಪಯೋಗವಿದೆ. ಅದನ್ನು ಅವಶ್ಯವಾಗಿ ತಿಳಿಯತಕ್ಕದ್ದು. ಪ್ರಾಧಾನ್ಯದಲ್ಲಿಯೂ ಸರ್ವವಿಭಕ್ತತ್ವದಲ್ಲಿಯೂ ಸ್ವತಂತ್ರತತ್ತ್ವದ ಜ್ಞಾನವು ಹುಟ್ಟುವುದು. ಟೀಕಾಕಾರರು ತೋರಿಸಿದ ವಿಭಾಗದ ಪಕ್ಷದಲ್ಲಿ ಅವೆರಡೂ ತಿಳಿದುಬರಲಾರದು. ಸ್ವತಂತ್ರತತ್ತ್ವವು ಭಾವಪದಾರ್ಥವೆಂದು ತಿಳಿದಲ್ಲಿ ಪುರುಷಾರ್ಥಕ್ಕೇನೂ ಉಪಯೋಗವಿಲ್ಲ. ಅದುದರಿಂದ ಆ ರೀತಿಯ ತಿಳಿವಳಿಕೆಯಾಗದಿದ್ದರೂ ದೋಷವೇನೂ ಇಲ್ಲ. ಮೂಲಕಾರರು ಹೇಳಿದ ವಿಭಾಗದ ಪಕ್ಷದಲ್ಲಿ ಪುರುಷಾರ್ಥಕ್ಕೆ ಉಪಯೋಗವಿದೆ. ಅದಿರುವುದೇ ಅಲ್ಲಿನ ವಿಶೇಷವೆಂದು ಭಾವ.

ಅಭಾವಾದೀನಾಮಿತಿ— ಹಾಗಿದ್ದರೂ ಅಲ್ಲಿ ಒಂದು ಬಾಧಕವಿದೆ. ಅದು ಅನುಪಪತ್ತಿ. ಅದೆಂದರೆ; ಟೀಕಾಕಾರರು ತೋರಿಸಿದ ವಿಭಾಗದಲ್ಲಿ ಅತ್ಯಂತಾಭಾವ ಮತ್ತು ಧ್ವಂಸ ಇವುಗಳಿಗೆ ನಿತ್ಯತ್ವವನ್ನು ಹೇಳಿದಂತಾಗಲಿಲ್ಲ, ಪ್ರಾಗಭಾವಕ್ಕೆ ಅನಿತ್ಯತ್ವವನ್ನು ಹೇಳಲಿಲ್ಲ. ಪ್ರಾಗಭಾವಾದಿ ಮೂರು ಅಭಾವಗಳಿಗೆ ಅಚೇತನತ್ವವನ್ನೂ ಪಾರತಂತ್ರ್ಯವನ್ನೂ ಹೇಳಿದಂತಾಗಲಿಲ್ಲ. ಅವುಗಳಿಗೆ ಅಚೇತನತ್ವವು ಉಂಟೆಂದರೂ ಕೆಲವು ಪದಾರ್ಥಗಳಿಗೆ ಅನಿತ್ಯತ್ವವನ್ನೂ ಪಾರತಂತ್ರ್ಯವನ್ನೂ ಹೇಳಿದಂತಾಗಲಿಲ್ಲ, ಇದು ಇಲ್ಲಿನ ಅನುಪಪತ್ತಿ. ಮೂಲಕಾರರು ಹೇಳಿದ ವಿಭಾಗದಲ್ಲಿ ವಿಷ್ಣುವಿಗೆ ಭಾವತ್ವವನ್ನೂ ಹೇಳಿದಂತಾಗಲಿಲ್ಲ, ಮತ್ತೆ ಕೆಲವು ಪದಾರ್ಥಗಳಿಗೆ ಆಯಾ ಧರ್ಮಗಳನ್ನೂ ಹೇಳಿದಂತಾಗಲಿಲ್ಲ. ಇದು ಇಲ್ಲಿನ ಅನುಪಪತ್ತಿ. ಹೀಗೆ ಇವೆರಡು ರೀತಿಯ ಅನುಪಪತ್ತಿಗಳು ಸಮವೇ ಆಗಿವೆ. ಅದಕ್ಕೆ ಬದಲಾಗಿ ಇಲ್ಲಿ ಅನೇಕ ಧರ್ಮಗಳ ಅನುಕ್ತಿಯು ಕಂಡುಬಂದಿದೆ. ಅಲ್ಲಿ ಭಾವತ್ವವನ್ನು ಹೇಳದಿರುವ ಒಂದೇ ಅನುಪಪತ್ತಿಯು ಕಂಡು ಬಂದಿದೆ ಎಂದರ್ಥ.

ತಸ್ಮಾದಿತಿ— ಎರಡು ಪಕ್ಷಗಳ ವಿಭಾಗದಲ್ಲಿ ಕಂಡುಬರುವ ನ್ಯೂನತೆಗಳು ಸಮವಾಗಿದ್ದರೂ ಮೂಲಕಾರರ ವಿಭಾಗದಲ್ಲಿ ಪುರುಷಾರ್ಥೋಪಯೋಗವೆಂಬ ವಿಶೇಷವಿರುವುದರಿಂದ ಅವರ ರೀತಿಯ ವಿಭಾಗವೇ ಉತ್ತಮ, ಅದೇ ಇರಲಿ ಎಂದರ್ಥ. ಪರತಂತ್ರವನ್ನು 'ಭಾವ' ಮುಂತಾದ ರೀತಿಯಲ್ಲಿ ವಿಭಾಗಮಾಡಿದರೆ ವಿಶೇಷವಿದೆ ಎಂದು ಹೇಳಬಯಸಿದವನು ಆಕ್ಷೇಪಿಸುತ್ತಾನೆ.

Rarest Archive

ಟೀಕಾ—

ಅಥ ಅಸ್ವತಂತ್ರಂ ಚೇತನತ್ವಾದಿನೈವ ವಿಭಜ್ಯತಾಮ್ । ಕಿಂ ಚೇತನತ್ವಾದಿನಾ ವಿಭಜ್ಯ ಭಾವಾಭಾವತಯಾ ವಿಭಾಗಃ ಕರ್ತವ್ಯಃ ? ಉತಾಯಂ ನ ಕರ್ತವ್ಯ ಏವ ? ನಾದ್ಯಃ । ವಿಶೇಷಾಭಾವಾತ್ । ಅಭಾವಸ್ಯ ಅಚೇತನತ್ವಂ ಏವಂ ಸತಿ ನೋಕ್ತಂ ಸ್ಯಾತ್ ಇತಿ ಚೇತ್ ತಥಾ ಸತಿ ಚೇತನಸ್ಯ ಭಾವತ್ವಮಪಿ ನೋಕ್ತಂ ಸ್ಯಾದಿತಿ ಸಮಮ್ । ತರ್ಹಿ ಕೇನ ವಿಶೇಷೇಣಾಸ್ಯ ಪ್ರಾಧಾನ್ಯಮಿತಿ ಚೇತ್ ವಾದಿವಿಪ್ರತಿಪತ್ತಿಭಾವಾಭಾವಾಭ್ಯಾಂ ವಿಶೇಷಾತ್ । ಅತ ಏವ ನ ದ್ವಿತೀಯೋಽಪೀತಿ ।

ಅಸ್ವತಂತ್ರ ತತ್ತ್ವವಿಭಾಗದ ಮೇಲಿನ ಆಕ್ಷೇಪಗಳು
ಅದರ ಪರಿಹಾರ

ಅದು ಸರಿ. ಅಸ್ವತಂತ್ರ ತತ್ತ್ವವನ್ನು ಚೇತನ, ಅಚೇತನವೆಂಬ ರೀತಿಯಿಂದ ಮಾತ್ರ ವಿಭಾಗಗೊಳಿಸಿರಿ. ಒಪ್ಪುತ್ತೇವೆ. ಅದನ್ನು ಬಿಟ್ಟು ಇನ್ನೂ ಮುಂದುವರೆದು ಭಾವ, ಅಭಾವವೆಂಬ ರೀತಿಯಲ್ಲಿ ಏಕೆ ವಿಭಾಗಗೊಳಿಸುವಿರಿ ? ಹೀಗೆ ಮಾಡುವುದು ಸಮಂಜಸವೆ ? ಅಥವಾ ಅಲ್ಲವೆ ? ಎಂದು ಕೇಳಿದರೆ;

ಸಮಂಜಸವೆಂಬ ಮೊದಲನೆಯ ಪಕ್ಷವು ಸಾಧುವಲ್ಲ. ಏಕೆಂದರೆ; ವಿಭಾಗದಲ್ಲಿ ಪರಸ್ಪರ ವ್ಯತ್ಯಾಸಗಳು ಕಾಣ-ಲಾರವು. ಹಾಗಾದರೆ ಅಭಾವವನ್ನು ಅಚೇತನವೆಂದು ಹೇಳಿದಂತಾಗಲಿಲ್ಲವಲ್ಲ ? ಎಂದರೆ, ಚೇತನವನ್ನು ಭಾವ ಪದಾರ್ಥವೆಂದು ಹೇಳಿದಂತಾಗಲಿಲ್ಲವೆಂಬ ದೋಷ ಒದಗುತ್ತದೆ. ಇದು ಉಭಯರಿಗೂ ಸಮಾನ. ಹಾಗಾದರೆ ಯಾವ ಹಿರಿಮೆಯಿಂದ ಇದಕ್ಕೆ ಪ್ರಾಧಾನ್ಯವುಂಟಾಗುತ್ತದೆ ? ಎಂದರೆ;

ನಮ್ಮ ಮತದಲ್ಲಿ (ಪರ) ವಾದಿಗಳಿಂದ ಸಂದೇಹ ಪುಂಜಗಳನ್ನು ಎತ್ತಿ ತೋರಲು ಅವಕಾಶವಿದೆ. ಆದರೆ ನಿಮ್ಮ ಮತದಲ್ಲಿ ವಾದಿಸಂದೇಹಗಳಿಗೆ ಅವಕಾಶಲೇಶವೂ ಇಲ್ಲ. ಇದೇ ಅಂತಹ ಹಿರಿಮೆಗೆ ಕಾರಣವಾಗಿದೆ.

ಇನ್ನು ಸಮಂಜಸವಲ್ಲವೆಂಬ ಎರಡನೆಯ ಪಕ್ಷವು ಸಾಧುವಲ್ಲ. ಮೊದಲು ಹೇಳಿದ ರೀತಿಯಲ್ಲಿ ನಿಮ್ಮ ಮತದಲ್ಲಿ ವಾದಿಸಂದೇಹಗಳಿಗೆ ಎಡೆಯಿಲ್ಲವೆಂದು ಸಮರ್ಥಿಸಲು ಸಾಧ್ಯವಿಲ್ಲ. ಆದುದರಿಂದ ಶ್ರೀಮದಾಚಾರ್ಯರ ಪ್ರಕಾರವೇ ತತ್ತ್ವಗಳನ್ನು ವಿಭಾಗಗೊಳಿಸುವುದು ಮೋಕ್ಷಸಾಧನವೆಂಬ ಅಂಶವು ವ್ಯಕ್ತವಾಗಿದೆ.

ಭಾವದೀಪ—

ಪರತಂತ್ರಸ್ಯ ಭಾವತ್ವಾದಿನಾ ವಿಭಾಗೇ ವಿಶೇಷಂ ವಿವಕ್ಷುರಾಕ್ಷಿಪತಿ ಅಥೇತಿ ॥ ಅಸ್ವತಂತ್ರಂ ಚೇತನೋಽಚೇತನಶ್ಚೇತಿ ದ್ವಿವಿಧಮ್ । ಅಚೇತನೋಽಪಿ ಭಾವೋಽಭಾವಶ್ಚೇತಿ ದ್ವೇಧಾ । ಇತ್ಯಾದಿರೂಪೇಣ ವಿಭಜ್ಯತಾಮ್ । ಕಿಂ ಭಾವತ್ವಾ-ದಿನೇತಿ ಭಾವಃ ॥ ವಿಶೇಷೇತಿ । ಪುರುಷಾರ್ಥೋಪಯೋಗಿತ್ವಾದಿವಿಶೇಷಸ್ಯಾಭಾವಾದಿತ್ಯರ್ಥಃ । ವಿಶೇಷಮಾಶಂಕ್ಯ ಸಾಮ್ಯಮಾಹ ಅಭಾವಸ್ಯೇತಿ ॥ ಏವಂ ಸತೀತಿ । ಭಾವತ್ವಾದಿನಾ ವಿಭಾಗೇ ಕೃತೇ ಸತೀತ್ಯರ್ಥಃ ।

ಅಸ್ಯೇತಿ । ಭಾವತ್ವಾದಿನಾ ವಿಭಾಗಸ್ಯೇತ್ಯರ್ಥಃ ॥ ವಾದೀತಿ । ಭಾವಾಭಾವತ್ವೇ ಅಸ್ತಿ ವಿವಾದಃ ನ ಚೇತನತ್ವಾದೌ ಅತಃ ತನ್ನಿರಾಸಾಯ ಭಾವತ್ವಾದಿವಿಭಾಗಸ್ಯ ಪ್ರಾಧಾನ್ಯಮಿತ್ಯರ್ಥಃ । ಅತ ಏವೇತಿ । ವಿವಾದಾಭಾವಾದೇವ ಕರ್ತವ್ಯತ್ವ-ಪಕ್ಷೋ ನ ಯುಕ್ತ ಇತ್ಯರ್ಥಃ ।

Rarest Archive

ಅಥೇತಿ— ಅಸ್ವತಂತ್ರದಲ್ಲಿ ಚೇತನ, ಅಚೇತನವೆಂದು ಎರಡು ವಿಧಗಳು. ಅಚೇತನದಲ್ಲಿಯೂ ಭಾವ, ಅಭಾವವೆಂದು ಎರಡು ವಿಧಗಳು ಎಂದು ವಿಭಾಗಿಸಿರಿ. ಭಾವ, ಅಭಾವಗಳೆಂದು ಏಕೆ ವಿಭಾಗಿಸುತ್ತೀರಿ ? ಎಂದು ಭಾವ.

ವಿಶೇಷೇತಿ— ನಿಮ್ಮ ರೀತಿಯಲ್ಲಿ ವಿಭಾಗಿಸಿದರೆ ಪುರುಷಾರ್ಥಕ್ಕೆ ಉಪಯೋಗ ಮುಂತಾದ ವಿಶೇಷವಿಲ್ಲ ಎಂದರ್ಥ.

ಅಭಾವಸ್ಯೇತಿ, ಏವಂ ಸತೀತಿ— ವಿಶೇಷವನ್ನು ಶಂಕಿಸಿ ಸಾಮ್ಯವನ್ನು ಹೇಳಿದ್ದಾರೆ. ಭಾವ ಮುಂತಾದ ರೀತಿಯಲ್ಲಿ ವಿಭಾಗಿಸಿದರೆ ಸಾಮ್ಯವುಂಟಾದರೂ ವಿಶೇಷವಿಲ್ಲ ಎಂದರ್ಥ.

ಅಸ್ಯೇತಿ— ಭಾವ ಮುಂತಾದ ರೀತಿಯ ವಿಭಾಗದ ಎಂದರ್ಥ.

ವಾದೀತಿ— ಭಾವ, ಅಭಾವ ಮುಂತಾದ ರೀತಿಯ ವಿಭಾಗದಲ್ಲಿ ವಾದಿಗಳ ವಿವಾದಗಳು ಏರ್ಪಡುತ್ತವೆ. ಅಚೇತನ ಮುಂತಾದ ವಿಭಾಗದಲ್ಲಿ ಅದು ಏರ್ಪಡುವುದಿಲ್ಲ, ವಾದಿಗಳ ವಿವಾದಗಳನ್ನು ನಿರಸನಗೊಳಿಸುವುದು ಇಲ್ಲಿ ಮುಖ್ಯ, ಅದಕ್ಕಾಗಿ ಭಾವ, ಅಭಾವ ಎಂಬ ರೀತಿಯ ವಿಭಾಗವನ್ನು ಮಾಡಲಾಗುತ್ತದೆ ಎಂದರ್ಥ.

ಅತ ಏವೇತಿ— ಚೇತನ, ಅಚೇತನವೆಂಬ ವಿಭಾಗದಲ್ಲಿ ವಾದಿಗಳ ವಿವಾದವಿಲ್ಲದುದರಿಂದಲೇ ಅಂತಹ ವಿಭಾಗವು ಯುಕ್ತವಲ್ಲವೆಂದು ಭಾವ.

ಟೀಕಾ—

ಅಭಾವ ಏವ ನಾಸ್ತೀತಿ ಕೇಚಿತ್ । ತದಸತ್ । ನಾಸ್ತೀತಿ ಪ್ರತೀತೇರ್ದುರಪಹ್ನವತ್ವಾತ್ । ಘಟೋ ನಾಸ್ತೀತಿ ಪ್ರತೀತಿರ್ಭೂತಲಮಾತ್ರವಿಷಯಾ ಇತಿ ಚೇತ್ ಮಾತ್ರೇತಿ ಕಿಂ ಭೂತಲಮೇವೋಚ್ಯತೇ ? ಉತ ಅತಿರಿಕ್ತಂ ಕಿಂಚಿತ್ ? ಆದ್ಯೇ ಘಟವತ್ಯಪಿ ಪ್ರಸಂಗಃ । ಅತಿರಿಕ್ತೋಽಪಿ ಘಟಶ್ಚೇತ್ ಉಕ್ತೋ ದೋಷಃ । ಭಾವಾಂತರಂ ಚೇತ್ ರೂಪವತಿ ಘಟೇ ಗಂಧೋ ನಾಸ್ತೀತಿ ಪ್ರತೀತಿಪ್ರಸಂಗಃ ।

ನನು ಘಟಾಭಾವೋ ಘಟಾಭಾವವತಿ ಭೂತಲೇ ಸಂಬಧ್ಯತೇ ? ಉತ ಘಟವತಿ ? ನಾದ್ಯಃ । ಆತ್ಮಾಶ್ರಯಾದಿದೋಷಪ್ರಸಂಗಾತ್ ।

ನ ದ್ವಿತೀಯಃ । ನಿರೋಧಾತ್ । ಅತೋ ವಕ್ತವ್ಯಂ ಭೂತಲಮಾತ್ರ ಇತಿ । ತಟೇವಾಸ್ತು ನಾಸ್ತೀತಿಪ್ರತೀತಿವಿಷಯಃ ।

ಇತಿ ಚೇತ್, ಪ್ರಶ್ನ ಏವಾಯಂ ವಿವಿಚ್ಯತಾಮ್ । ಯದಿ ಅಭಾವಸಂಬಂಧಾತ್ಪ್ರಾಕ್ ಕೀದೃಶಂ ಭೂತಲಮಿತಿ, ಯದಿ ವಾ ಸಂಬಂಧಸಮಯೇ ಕೀದೃಶಮಿತಿ, ಯದ್ವಾ ಯದಿ ಅಭಾವಾದಿದಂ ವಿವಿಚ್ಯೇತ ತದಾ ಕೀದೃಶಂ ನಾಮ ಸ್ಯಾದಿತಿ । ಆದ್ಯೇ ಸಘಟಮಿತ್ಯೇವೋತ್ತರಮ್ । ದ್ವಿತೀಯೇ ಘಟಾಭಾವವದಿತಿ । ತೃತೀಯೇ ಯದಿ ವಿವೇಕೋಃ ವಸ್ತುಕೃತಃ ತದಾ ಅಭಾವಸ್ಯ ನಷ್ಟತ್ವಾತ್ ಘಟವದಿತಿ । ಯದಿ ಬುದ್ಧಿಕೃತಸ್ತದಾ ಬುದ್ಧ್ಯೈವ ಘಟಪ್ರಸಕ್ತಿಮದಿತಿ । ಅನ್ಯಥಾ ಏವಂ ಭಾವಪ್ರತಿಕ್ಷೇಪೋಽಪಿ ಸ್ಯಾದಿತ್ಯಾಸ್ತಾಂ ವಿಸ್ತರಃ ।

Rarest Archiver

ಅಭಾವದ ಮೇಲಿನ ವಾದಿಗಳ ಆಕ್ಷೇಪ-ಅದರ ಪರಿಹಾರ

ಈಗ ಶ್ರೀಟೀಕಾರಾಯರು ಮೇಲೆ ಹೇಳಿದ ಆಕ್ಷೇಪಗಳು ಯಾವುವೆಂಬುದನ್ನು ವಿವೇಚಿಸುತ್ತಾರೆ.

ಎಲ್ಲ ದಾರ್ಶನಿಕರಿಗೂ ತಿಳಿದು ಬರುವಂತೆ ಅಭಾವವೆಂಬ ಒಂದು ತತ್ತ್ವವಿದೆ. ಅದನ್ನು ಪೂರ್ವ ಮೀಮಾಂಸಕರ ಪೈಕಿ ಒಂದು ಪಂಗಡದವರಾದ ಪ್ರಾಭಾಕರರು ಒಪ್ಪುವುದಿಲ್ಲ. ಅವರನ್ನು ಕುರಿತಾದ ಚರ್ಚೆ ಈಗ ಆರಂಭವಾಗಲಿದೆ.

ಅಭಾವವೆಂಬುದೇ ಇಲ್ಲವೆಂದು ಕೆಲವರು ವಾದಿಸುತ್ತಾರೆ. ಅದು ಸರಿಯಲ್ಲ. ಏಕೆಂದರೆ ನಾಸ್ತಿ ಎಂಬುದರಿಂದ ಸರ್ವರಿಗೂ ಅಭಾವದ ಪ್ರತೀತಿಯು ಸಹಜವಾಗಿಯೆ ಹುಟ್ಟುವುದು. ಅದನ್ನು ಅಲ್ಲವೆಂದು ನಿರಾಕರಿಸಲು ಯಾರಿಗೂ ಸಾಧ್ಯವಿಲ್ಲ. 'ಘಟೋ ನಾಸ್ತಿ' ಮಡಕೆಯಿಲ್ಲ ಎಂಬ ವಾಕ್ಯದಿಂದ ಬರುವ ಪ್ರತೀತಿಗೆ ಭೂತಳವು ಮಾತ್ರ ವಿಷಯವಾಗುತ್ತದೆ ಎನ್ನಲಾಗುವುದಿಲ್ಲ.

ಎಂದರೆ; ಘಟವಿಲ್ಲದಿರುವಿಕೆಯು ಭೂತಳದ ಸ್ವರೂಪವನ್ನು ಸೂಚಿಸುತ್ತದೆಯಾಗಿ ಭೂತಳವೇ ಘಟಾಭಾವದ ಸ್ವರೂಪ, ಎಂಬುದು ಅವರ ಸಿದ್ಧಾಂತ.

ಏಕೆಂದರೆ, ಮಾತ್ರವೆಂಬ ಪದದಿಂದ ಭೂತಳವನ್ನೇ ಹೇಳುತ್ತೀರೊ? ಅಥವಾ ಅದನ್ನು ಬಿಟ್ಟು ಯಾವುದಾದರೂ ಬೇರೆಯದನ್ನು ಹೇಳುತ್ತೀರೋ? ಭೂತಳವನ್ನೇ ಹೇಳುತ್ತೇವೆ ಎನ್ನುವುದಾದರೆ; ಘಟವಿರುವ ಜಾಗದಲ್ಲಿಯೂ ಕೂಡ ಘಟದ ಅಭಾವವಿದೆ ಎನ್ನಬೇಕಾಗುತ್ತದೆ. ಇನ್ನು ಎರಡನೆಯದಾಗಿ ಭೂತಳವಲ್ಲದ್ದು ಘಟವೇ ಆಗಿದೆ ಎನ್ನುವುದಾದರೆ; ಈ ಮೊದಲು ಹೇಳಿದ ದೋಷವೇ ಬರುತ್ತದೆ ಮತ್ತು ಅದೊಂದು ಬೇರೆ ಭಾವ ಪದಾರ್ಥವೇ ಆಗಿದೆ ಎನ್ನುವುದಾದರೆ; ಘಟದಲ್ಲಿ ರೂಪವಿರುವಾಗ ಗಂಧವಿಲ್ಲ ಎಂಬ ಪ್ರತೀತಿ ಹುಟ್ಟಬೇಕಾದೀತು; ಆದುದರಿಂದ ಅಭಾವವನ್ನು ಏನೆಂದು ವಿವರಿಸುವಿರಿ?

ಹೀಗೆಯೆ ಇನ್ನೂ ಕೆಲ ಸಂದೇಹಗಳು ಹುಟ್ಟುತ್ತವೆ. ಹೇಗೆಂದರೆ,

''ಅದು ಸರಿ. ಘಟದ ಅಭಾವವು ಭೂತಳದಲ್ಲಿ ಘಟವಿಲ್ಲದಿರುವಾಗ ಸಂಬಂಧಗೊಳ್ಳುವುದೊ? ಅಥವಾ ಘಟವಿರುವಾಗಲೊ? ಮೊದಲನೆಯದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ; ಆತ್ಮಾಶ್ರಯ ಮುಂತಾದ, ದೋಷಗಳು ಬರುತ್ತವೆ. ಆ ಮುಂತಾದ ದೋಷಗಳು, ಅನ್ಯೋನ್ಯಾಶ್ರಯ, ಚಕ್ರಕ, ಅನವಸ್ಥಾ'' ಇವುಗಳು. ಆತ್ಮಾಶ್ರಯವೆಂದರೆ ತನ್ನ ತಿಳಿವಳಿಕೆಗೆ ತಾನೇ ಕಾರಣವಾಗಿರುವುದು. ಪ್ರಕೃತದಲ್ಲಿ ಅಭಾವದ ತಿಳಿವಳಿಕೆಯನ್ನು ಕುರಿತು ಅಭಾವವೆ ಕಾರಣವಾಗಿದೆ. ಆದುದರಿಂದ ಮೊದಲನೆಯ ಕಲ್ಪವನ್ನು ಒಪ್ಪುವುದಕ್ಕಾಗುವುದಿಲ್ಲ.

ಇನ್ನು ಎರಡನೆಯ ಪ್ರಕಾರವನ್ನೂ ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ; ಭೂತಳದಲ್ಲಿ ಘಟವಿರುವಾಗ ಅದರ ಅಭಾವವಿದೆ ಎಂದು ಹೇಳಿದರೆ ವಿರೋಧವಾಗುತ್ತದೆ. ಆದ್ದರಿಂದ ಭೂತಳ ಮಾತ್ರವೆಂದು ಹೇಳಬೇಕು. ಹಾಗಾದರೆ 'ನಾಸ್ತಿ' ಎಂಬ ಪ್ರತೀತಿಗೆ ಭೂತಳ ಮಾತ್ರವೆ ವಿಷಯವಾಗಲಿ ಎಂದು ಹೇಳುವುದಾದರೆ; ಈ ಪ್ರಶ್ನೆಯನ್ನು ಬಿಡಿಸಿ ಸ್ಪಷ್ಟವಾಗಿ ವಿವರಿಸೋಣವಾಗಲಿ; ನೋಡೋಣ. ಒಂದು ವೇಳೆ ಭೂತಳಕ್ಕೂ ಅಭಾವಕ್ಕೂ ಸಂಬಂಧವೇರ್ಪಡು-ವುದಕ್ಕಿಂತ ಮುಂಚೆ ಆ ಭೂತಳ ಯಾವ ರೂಪವಾಗಿತ್ತು ? ಅಥವಾ ಅವೆರಡರ ಸಂಬಂಧದ ಕಾಲದಲ್ಲಿ ಯಾವ

Rarest Archiver

ರೂಪವಾಗಿತ್ತು ? ಒಂದು ವೇಳೆ ಅಭಾವದ ಮೂಲಕ ಇದನ್ನು ಬಿಡಿಸಿ ವಿವರಿಸುವುದಾದರೆ; ಆಗ ಅದು ತಾನೆ ಯಾವ ರೂಪವಾಗಿದ್ದಿತು ? ಎಂಬುದು ಆ ಪ್ರಶ್ನೆಯನ್ನು ಬಿಡಿಸಿ ವಿವರಿಸಿರುವುದು.

ಈ ಒಂದೊಂದು ಪ್ರಶ್ನೆಯೂ ಸರಿಹೊಂದುವುದಿಲ್ಲ. ಹೇಗೆಂದರೆ, ಮೊದಲನೆಯ ಪ್ರಶ್ನೆಗೆ ಘಟ ಸಹಿತವಾಗಿತ್ತು ಎಂಬುದು ಉತ್ತರ. ಎರಡನೆಯದಕ್ಕೆ ಘಟದ ಅಭಾವವನ್ನು ಪಡೆದದ್ದಾಗಿತ್ತು ಎಂಬುದು ಉತ್ತರ. ಮೂರನೆಯದಕ್ಕೆ ಒಂದು ವೇಳೆ ವಿವೇಕವು ವಾಸ್ತವಿಕವಾಗಿದ್ದರೆ; ಆಗ ಅಭಾವವು ನಷ್ಟವಾಗುವುದರಿಂದ ಭೂತಳವು ಘಟವನ್ನು ಉಳ್ಳದ್ದು ಎಂಬುದೇ ಉತ್ತರ. ಒಂದು ವೇಳೆ ಆ ವಿವೇಕ ವಾಸ್ತವಿಕವಲ್ಲದೆ ಬೌದ್ಧಿಕವಾಗಿದ್ದರೆ; ಆ ಭೂತಳವು ಬುದ್ಧಿಯಲ್ಲಿಯೇ ಘಟದ ಪ್ರಸಕ್ತಿಯನ್ನು ಮಾಡಿಕೊಂಡಿದೆ ಎಂದುತ್ತರ.

ಹೀಗಲ್ಲದಿದ್ದರೆ; ಇದೇ ರೀತಿಯಾಗಿ ಭಾವ ಪದಾರ್ಥವನ್ನೂ ಕೂಡ ಪ್ರತಿಕ್ಷೇಪಮಾಡಿಕೊಂದು ನಿರಾಕರಿಸ-ಬಹುದಾದ ಪ್ರಸಂಗ ಒದಗುವುದು. ಈ ವಿಸ್ತಾರವನ್ನು ಇಲ್ಲಿಗೆ ಸಾಕುಮಾಡೋಣ.

ಈ ಮೇಲೆ ಹೇಳಿದ ಚರ್ಚೆಯ ಪರಿಣಾಮವಾಗಿ ಪ್ರಾಭಾಕರರ ಪ್ರಕಾರವಾಗಿ ಅಭಾವವು ಭೂತಳದ ಸ್ವರೂಪವಲ್ಲ. ಇದು ಭಾವದಿಂದ ಹೊರತಾಗಿ ಇರುವ ತತ್ತ್ವ ಎಂಬುದು ಸಿದ್ಧವಾಯಿತು.

ಭಾವದೀಪ—

ವಿವಾದಂ ಪ್ರದರ್ಶಯನ್ ನಿರಾಹ ಅಭಾವ ಇತಿ । ಕೇಚಿತ್ – ಪ್ರಾಭಾಕರಾಃ ॥ ಭಾವಾಂತರಮಿತಿ । ನಾಸ್ತೀತಿ ಧೀವಿಷಯ ಇತಿ ಯೋಜ್ಯಮ್ ॥ ರೂಪವತೀತಿ । ರೂಪಸ್ಯೈವ ತತ್ರ ಭಾವಾಂತರತ್ವಾದಿತಿ ಭಾವಃ ।

ಆಭಾವವಾದಿನಂ ಪ್ರತಿ ಬಾಧಕೋಪನ್ಯಾಸಮುಖೇನ ಸ್ವೋಕ್ತಪಕ್ಷಂ ಸ್ಥಾಪಯತಿ ಪರವಾದೀ ನನ್ವಿತ್ಯಾದಿನಾ ॥ ಆತ್ಮಾಶ್ರಯಾದೀತಿ । ಅಭಾವಭೇದಾಂಗೀಕಾರೇ ಅನ್ಯೋನ್ಯಾಶ್ರಯಾದಿರಾದಿಪದಾರ್ಥಃ ॥ ಇದಮಿತಿ । ಭೂತಲ-ಮಿತ್ಯರ್ಥಃ ॥ ಅಭಾವಸ್ಯ ನಷ್ಟತ್ವಾದಿತಿ । ತಸ್ಯ ಘಟಸಂಬಂಧಪ್ರಾಗಭಾವರೂಪತ್ವಾದಿತಿ ಭಾವಃ ॥ ಭಾವಪ್ರತಿ-ಕ್ಷೇಪೋಽಪೀತಿ । ಘಟೋಽಪಿ ಕಿಂ ಘಟವತಿ ಭೂತಲೇ ಸಂಬಧ್ಯತೇ ಉತ ಘಟರಹಿತೇ । ನಾದ್ಯಃ । ಆತ್ಮಾಶ್ರಯಾದಿ-ಪ್ರಸಂಗಾತ್ । ನಾಂತ್ಯಃ । ವಿರೋಧಾತ್ । ಅತೋ ಭೂತಲಮಾತ್ರ ಇತಿ ವಕ್ತವ್ಯಮ್ । ಸ ಏವ ಚ ಘಟಾದಿಪ್ರತೀತಿ-ವಿಷಯಃ ಅಸ್ತು ಕಿಂ ಘಟಾದಿನಾ ಇತ್ಯಪಿ ವಕ್ತುಂ ಶಕ್ಯತ್ವಾದಿತಿ ಭಾವಃ ।

ವಿವಾದವನ್ನು ಪ್ರದರ್ಶಿಸುತ್ತ ನಿರಸನಗೊಳಿಸುತ್ತಾರೆ.

ಅಭಾವ ಇತಿ— ಕೇಚಿತ್ = ಪ್ರಾಭಾಕರರು. ಅಭಾವವೇ ಇಲ್ಲವೆಂದು ಹೇಳುತ್ತಾರೆ.

ಭಾವಾತರಮಿತಿ— ಬೇರೆ ಭಾವ ಪದಾರ್ಥವು ನಾಸ್ತಿ ಎಂಬ ಬುದ್ಧಿಗೆ ವಿಷಯವಾಗುವುದನ್ನು ಅಭಾವವೆನ್ನುತ್ತಾರೆ ಎಂದು ಯೋಜಿಸಬೇಕು.

ರೂಪವತೀತಿ— ಗುಧವುಳ್ಳ ಘಟದಲ್ಲಿ ರೂಪವಿಲ್ಲ ಎಂಬ ಪ್ರತೀತಿಯು ಹುಟ್ಟಬೇಕಾದೀತು ? ಎಂಬ ಆಕ್ಷೇಪವಿದೆ. ಇಲ್ಲಿ ರೂಪವೇ ಬೇರೆ ಭಾವ ಪದಾರ್ಥ. ಅದನ್ನು ಇಲ್ಲವೆಂದು ನಿಷೇಧಿಸಲು ಸಾಧ್ಯವೇ ? ಎಂಬ ಭಾವ.

Rarest Archiver

ನನ್ವಿತ್ಯಾದಿನಾ— ಪರವಾದಿಯು ಅಭಾವವಾದಿಯನ್ನು ಕುರಿತು ಬಾಧಕಗಳ ಉಪನ್ಯಾಸ ಮಾಡುತ್ತ ತಾನು ಮಂಡಿಸಿದ ಪಕ್ಷವನ್ನು ಸ್ಥಾಪಿಸುತ್ತಾನೆ.

ಆತ್ಮಾಶ್ರಯಾದೀತಿ— ಇಲ್ಲಿ ಆದಿ ಪದವಿದೆ. ಅಭಾವದಲ್ಲಿ ಭೇದವನ್ನು ಅಂಗೀಕರಿಸಿದರೆ ಆತ್ಮಾಶ್ರಯ, ಅನ್ಯೋನ್ಯಾಶ್ರಯ ಮುಂತಾದ ದೋಷಗಳು ಹತ್ತುತ್ತವೆ. ಇದು ಆದಿ ಪದದ ಅರ್ಥ.

ಇದಮಿತಿ— ಭುತಲವೆಂದರ್ಥ.

ಅಭಾವಸ್ಯ ನಷ್ಟತ್ವಾದಿತಿ— ಅಭಾವವು ನಷ್ಟವಾಗಿರುತ್ತದೆ. ಏಕೆಂದರೆ ಅದು ಘಟಸಂಬಂಧದ ಪ್ರಾಗಭಾವದ ರೂಪವಾಗಿರುತ್ತದೆ, ಎಂದು ಭಾವ.

ಭಾವಪ್ರತಿಕ್ಷೇಪೋಽಪೀತಿ— ಹೀಗೆಯೆ ಭಾವ ಪದಾರ್ಥವನ್ನೂ ಸಹ ಪ್ರತಿಕ್ಷೇಪಗೊಳಿಸುವ ಪ್ರಸಂಗ ಒದಗುವುದು, ಹೇಗೆಂದರೆ, ಘಟವು ಘಟವುಳ್ಳ ಭೂತಲದಲ್ಲಿ ಸಂಬಂಧ ಪಡೆದಿದೆಯೋ ? ಘಟರಹಿತವಾದ ಭೂತಲದಲ್ಲಿಯೋ ? ಆತ್ಮಾಶ್ರಯಾದಿ ದೋಷಗಳು ಹತ್ತುವುದರಿಂದ ಮೊದಲನೆಯ ಪಕ್ಷವನ್ನು ಒಪ್ಪುವುದಕ್ಕಾಗು-ವುದಿಲ್ಲ. ವಿರೋಧ ಬರುವುದರಿಂದ ಎರಡನೆಯ ಕಲ್ಪವನ್ನು ಒಪ್ಪುವುದಕ್ಕಾಗುವುದಿಲ್ಲ. ಆದುದರಿಂದ ಅದು ಭೂತಲ ಮಾತ್ರವೇ ಸರಿ ಎಂದು ಹೇಳಬೇಕು. ಆಗ ಘಟಾದಿ ಪ್ರತೀತಿಗಳಿಗೆ ಆ ಭೂತಲವೇ ವಿಷಯವಾಗಲಿ, ಘಟಾದಿಗಳು ಎಂದು ಏಕೆ ಹೇಳಬೇಕು ? ಇತ್ಯಾದಿಯಾಗಿ ಭಾವಪದಾರ್ಥಗಳನ್ನೂ ಪ್ರತಿಕ್ಷೇಪ ಮಾಡಲೂ ಸಾಧ್ಯವಾಗುತ್ತದೆ ಎಂದು ಭಾವ.

ಟೀಕಾ—

ದ್ವಿಧೇತ್ಯುಕ್ತ್ಯಾ ಭಾವಾಭಾವಯೋರವಾಂತರಭೇದೋಽಸ್ತೀತಿ ಸೂಚಿತಮ್ । ತತ್ರ ಭಾವನಿರೂಪಣಾತ್ ಅಭಾವನಿರೂಪಣಸ್ಯ ಅಲ್ಪತ್ವಾತ್ ಸೂಚೀಕಟಾಹನ್ಯಾಯೇನ ಪಶ್ಚಾದುದ್ದಿಷ್ಟಮಪ್ಯಭಾವಂ ಆದೌ ವಿಭಾಗೇನ ಉದ್ದಿಶತಿ—

''ಪ್ರಾಕ್ಪ್ರಧ್ವಂಸಸದಾತ್ವೇನ ತ್ರಿವಿಧೋಽಭಾವ ಇಷ್ಯತೇ ।''

ಪ್ರಾಕ್ತ್ವೇನ ಪ್ರಧ್ವಂಸತ್ವೇನ ಸದಾತ್ವೇನೋಪಲಕ್ಷಿತೋಽಭಾವಸ್ತ್ರಿವಿಧ ಇಷ್ಟತೇ । ಪ್ರಾಮಾಣಿಕೈರಿತಿ ಶೇಷಃ ।

ಉತ್ತರೈಕಾವಧಿರಬಾವಃ ಪ್ರಾಗಭಾವಃ । ಪ್ರತಿಯೋಗ್ಯುತ್ಪತ್ತೇಃ ಪ್ರಾಗೇವಾಭಾವೋಽಸ್ತಿ ಉತ್ಪನ್ನೇ ತು ತಸ್ಮಿನ್ನಾಸ್ತೀತಿ ಕೃತ್ವಾ ।

ಪೂರ್ವೈಕಾವಧಿರಭಾವಃ ಪ್ರಧ್ವಂಸಾಭಾವಃ । ಪ್ರತಿಯೋಗಿಪ್ರಧ್ವಂಸಾನಂತರಮೇವ ಅಭಾವೋ ನ ತು ಪ್ರಾಗಸ್ತಿ ಇತಿ ।

ನ ಚೈವಂ ಪ್ರಾಗಭಾವಪ್ರಧ್ವಂಸಃ ಪ್ರಧ್ವಂಸಪ್ರಾಗಭಾವ ಇತಿ ಪ್ರವಾಹೌ ಪ್ರಸಜ್ಯೇತೇ, ಪ್ರತಿಯೋಗಿನ ಏವ ಪ್ರಾಗಭಾವಪ್ರಧ್ವಂಸತ್ವೇನ ಪ್ರಧ್ವಂಸಪ್ರಾಗಭಾವತ್ವೇನ ಚಾಂಗೀಕೃತತ್ವಾತ್ । ತರ್ಹಿ ಘಟಪ್ರಧ್ವಂಸೋ ನಾಮ ಪ್ರಾಗಭಾವನಿವೃತ್ತೇರ್ನಿವೃತ್ತಿರಿತಿ ಪ್ರಾಗಭಾವೋನ್ಮಜ್ಜನಪ್ರಸಂಗ ಇತಿ ಚೇನ್ನ । ಘಟವತ್ ಘಟಪ್ರಧ್ವಂಸಸ್ಯಾಪಿ

Rarest Archiver

ತದ್ವಿರೋಧಿತ್ವಾತ್ । ನಿರವಧಿಕೋಽಭಾವಃ ಸದಾಭಾವಃ । ಸದಾಽಭಾವೋಽಸ್ತೀತಿ ಕೃತ್ವಾ । ಅಥ ಅತ್ಯಂತಾಭಾವ ಇತಿ ಪ್ರಸಿದ್ಧಸಂಜ್ಞಾತಿಕ್ರಮೇಣ ಸದಾಽಭಾವ ಇತಿ ಸಂಜ್ಞಾಕರಣಂ ಕಿಮರ್ಥಮ್ ? ಲಕ್ಷಣಸ್ಯಾಪ್ಯುದ್ದೇಶೇನೈವ ಸೂಚನಾರ್ಥಮ್ । ಯಚ್ಚಾನ್ಯೈರತ್ಯಂತಾಭಾವಸ್ವರೂಪಮುಕ್ತಂ ''ಸಂಸರ್ಗಪ್ರತಿಯೋಗಿಕಾಭಾವೋಽತ್ಯಂತಾ-ಭಾವಃ'' ಇತಿ ''ಯತ್ರೈತದ್ಘಟೈತದ್ಭೂತಲಸಂಸರ್ಗಾಭಾವಃ'' ಇತಿ, ತದಪಿ ನಿರಾಕರ್ತುಮೇತತ್ । ತಸ್ಯ ನಿರವ-ಧಿಕತ್ವಾಭಾವಾತ್ ।

ತರ್ಹ್ಯುದಾಹೃತಶ್ಚತುರ್ಥಃ ಸ್ಯಾದಿತಿ ಚೇನ್ನ । ತಸ್ಯಾಪಿ ಯಥಾಸಂಭವಂ ಪ್ರಾಗಭಾವಾದಿಷ್ವಂತರ್ಭಾವಾತ್ । ಏಕೇ ಬ್ರುವತೇ ''ಸಂಸರ್ಗಾಭಾವೋಽನ್ಯೋನ್ಯಾಭಾವಶ್ಚೇತಿ ದ್ವಿವಿಧ ಏವಾಭಾವ'' ಇತಿ । ಅನ್ಯೇ ತು ''ಪ್ರಾಕ್-ಪ್ರಧ್ವಂಸಾತ್ಯಂತಾನ್ಯೋನ್ಯಾಭಾವಾತ್ಮಾ ಚತುರ್ವಿಧ'' ಇತಿ । ತದುಭಯಂ ನಿರಾಕರ್ತುಮಿಷ್ಯತ ಇತ್ಯುಕ್ತಮ್ ।

ಅನ್ಯೋನ್ಯಾಭಾವೋ ಹಿ ಭೇದ ಏವ । ಸ ಚ ಸ್ವರೂಪಮೇವೇತ್ಯನ್ಯತ್ರೋಪಪಾದಿತಮ್ । ಕಾರ್ಯ-ಕಾರಣಯೋಃ ಸಂಸರ್ಗಸ್ಯ ಅನ್ಯತ್ರ ನಿರಾಕೃತತ್ವೇನ ಪ್ರಾಗಭಾವಪ್ರಧ್ವಂಸಾಭಾವಯೋಃ ಸಂಸರ್ಗಾಭಾವತ್ವಾ-ನುಪಪತ್ತೇಶ್ಚೇತಿ ।

ಅಭಾವವನ್ನು ಮೊದಲು ನಿರೂಪಿಸಲು ಏನು ಕಾರಣ ?

ಈ ಮೊದಲು ''ಭಾವಾಭಾವೌ ದ್ವಿಧೇತರತ್'' ಎಂಬಲ್ಲಿ ದ್ವಿಧಾ ಎಂದು ಹೇಳಲಾಗಿದೆ. ಆದರಿಂದ ಭಾವ ಮತ್ತು ಅಭಾವದಲ್ಲಿ ಒಳಪ್ರಭೇದವಿದೆ ಎಂಬುದನ್ನೂ ಸೂಚಿಸಲಾಗಿದೆ. ಅವೆರಡರಲ್ಲಿ ಭಾವ ಪದಾರ್ಥವನ್ನು ನಿರೂಪಿಸುವುದಕ್ಕಿಂತ ಮೊದಲು ಅಭಾವವನ್ನು ನಿರೂಪಿಸುವುದು ಚಿಕ್ಕದಾದುದರಿಂದಲೂ ಅಭಾವವನ್ನು ಅನಂತರ ನಿರ್ದೇಶಮಾಡಿದ್ದಾಗ್ಯೂ ಸೂಚೀಕಟಾಹ ನ್ಯಾಯದಂತೆ ಅದನ್ನೇ ಮೊದಲು ಉದ್ದೇಶಗೊಳಿಸಿ ವಿಭಾಗ ಗೊಳಿಸು-ತ್ತಾರೆ. ಸೂಚೀಕಟಾಹ ನ್ಯಾಯವೆಂದರೆ; ಒಂದು ಸೂಜಿ ಮತ್ತು ಒಂದು ಕಡಾಯ ಒಂದು ಕಡೆ ಇರುತ್ತವೆ. ಅವನ್ನು ಸಾಗಿಸುವಾಗ ಅಲ್ಪವೂ ಹಗುರವೂ ಆದ ಸೂಜಿಯನ್ನು ಮೊದಲು ಎತ್ತಿಟ್ಟು ಆಮೇಲೆ ಕಡಾಯವನ್ನು ಸಾಗಿಸುವಂತೆ ಪ್ರಕೃತದಲ್ಲಿ ಮೊದಲು ಅಭಾವವನ್ನು ನಿರೂಪಿಸುತ್ತಾರೆಂದು ಮನಗಾಣಬೇಕು.

ಅಭಾವಗಳಲ್ಲಿ ಎಷ್ಟು ವಿಧ ?

ಈ ಮೊದಲು ಅಭಾವದ ಲಕ್ಷಣವನ್ನು ಹೇಳಿದ್ದಾಯಿತು. ಇನ್ನು ಅದರಲ್ಲಿ ಎಷ್ಟು ವಿಧಗಳಿವೆ? ಎಂದರೆ; ಪ್ರಾಗಭಾವ, ಪ್ರಧ್ವಂಸಾಭಾವ, ಸದಾಭಾವಗಳೆಂದು ಮೂರು ವಿಧಗಳಿವೆ. ಹೀಗೆ ಉಪಲಕ್ಷಿತವಾದ ಮೂರು ವಿಧ ಅಭಾವಗಳನ್ನು ಪ್ರಾಮಾಣಿಕರು ಒಡಂಬಟ್ಟಿದ್ದಾರೆ. ಇಲ್ಲಿ 'ಇಷ್ಯತೇ' ಎಂಬ ಕ್ರಿಯಾಪದವಿರುವುದರಿಂದ 'ಪ್ರಾಮಾಣಿಕೈಃ' ಎಂಬ ಕರ್ತೃ ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಲಾಗಿದೆ.

ಪ್ರಾಗಭಾವವೆಂದರೇನು ?

ಉತ್ತರೈಕಾವಧಿಃ (ಉತ್ತರ ಕಾಲುವೆ ಮುಖ್ಯ ಅವಧಿಯಾಗಿ ಉಳ್ಳ) ಅಭಾವಃ ಪ್ರಾಗಭಾವಃ (ಅಭಾವಕ್ಕೆ ಪ್ರಾಗಭಾವವೆಂದು ಹೆಸರು.) (ಪ್ರತಿಯೋಗಿ) ಪದಾರ್ಥ ಹುಟ್ಟುವುದಕ್ಕಿಂತ ಮುಂಚೆ ಈ ಅಭಾವವಿರುತ್ತದೆ. ಪದಾರ್ಥವು ಹುಟ್ಟಿದನಂತರ ಈ ಅಭಾವವು ನಾಶವಾಗುತ್ತದೆ. ಆದುದರಿಂದ ಇದಕ್ಕೆ ಪ್ರಾಗಭಾವವೆಂದು ಹೆಸರು.

Rarest Archiver

ಪ್ರಧ್ವಂಸಾಭಾವವೆಂದರೇನು ?

ಪೂರ್ವಕಾಲವೇ ಮುಖ್ಯ ಅವಧಿಯಾಗಿ ಉಳ್ಳ ಅಭಾವವು ಪ್ರಧ್ವಂಸಾಭಾವವೆನಿಸಿದೆ. ಇದು (ಪ್ರತಿಯೋಗಿ) ವಸ್ತುವಿನ ನಾಶವಾದ ನಂತರವೇ ಹುಟ್ಟುವುದರಿಂದ ಇದಕ್ಕೆ ಪ್ರಧ್ವಂಸಾಭಾವವೆಂದು ಹೆಸರು. ಈ ಅಭಾವವು ವಸ್ತುವಿನ ನಾಶವಾಗುವುದಕ್ಕಿಂತ ಮುಂಚೆ ಇರುವುದಿಲ್ಲ. ಆದುದರಿಂದ ಪ್ರಧ್ವಂಸಾಭಾವವೆಂಬುದು ಎರಡನೆಯ ಬಗೆಯ ಅಭಾವ.

ಪ್ರಾಗಭಾವ ಪ್ರಧ್ವಂಸಾಭಾವಗಳ ಲಕ್ಷಣವು ಬೆರಿಕೆಯಾಗುವುದೆ ?

ಹೀಗೆ ಈ ಎರಡು ಅಭಾವಗಳನ್ನು ಹಿಂದು ಮುಂದಾಗಿ ಹೇಳಿದರೆ ಪ್ರಾಗಭಾವದ ಪ್ರಧ್ವಂಸವೆಂತಲೂ, ಪ್ರಧ್ವಂಸದ ಪ್ರಾಗಭಾವವೆಂತಲೂ ಎರಡು ವಿಧ ಪ್ರವಾಹಗಳು ಹರಿಯುವ ಪ್ರಸಂಗ ಒದಗುವುದು.

ಮೇಲಿನ ಹೇಳಿಕೆಯು ಸಾಧುವಲ್ಲ. ಏಕೆಂದರೆ; (ಪ್ರತಿಯೋಗಿ) ವಸ್ತುವನ್ನೇ ಪ್ರಾಗಭಾವದ ಪ್ರಧ್ವಂಸವೆಂತಲೂ, ಪ್ರಧ್ವಂಸದ ಪ್ರಾಗಭಾವವೆಂತಲೂ ಒಪ್ಪಿಕೊಂಡದ್ದಾಗಿದೆ. ಆದ್ದರಿಂದ ಎರಡು ಅಭಾವಗಳ ಲಕ್ಷಣದಲ್ಲಿ ಬೆರಿಕೆಯಿಲ್ಲ.

ಇನ್ನು ಘಟದ ಪ್ರಧ್ವಂಸವು ಪ್ರಾಗಭಾವ ನಾಶವಾಗುವುದರ ಮೂಲಕ ನಿವೃತ್ತಿ ಹೊಂದುವುದು. ಆದುದರಿಂದ ಪ್ರಾಗಭಾವವು ಮೇಲೆ ತೇಲುವ ಪ್ರಸಂಗ ಬರಬೇಕಾದೀತು.

ಈ ಹೇಳಿಕೆಯೂ ಸಾಧುವಲ್ಲ. ಏಕೆಂದರೆ; ಘಟವು ಹೇಗೆ ಪ್ರಾಗಭಾವಕ್ಕೆ ವಿರೋಧಿಯಾಗಿದೆಯೊ, ಹಾಗೆಯೆ, ಘಟ ಪ್ರಧ್ವಂಸವೂ ಸಹ ಪ್ರಾಗಭಾವಕ್ಕೆ ವಿರೋಧಿಯಾಗಿದೆ. ಆದುದರಿಂದ ಪ್ರಾಗಭಾವವು ಮೇಲೆ ತೇಲುವ ಪ್ರಸಂಗಕ್ಕೆ ಅವಕಾಶವಿಲ್ಲ.

ಸದಾಭಾವವೆಂದರೇನು ?

ಅವಧಿರಹಿತವಾದ ಅಭಾವವು ಸದಾಭಾವವೆನಿಸಿದೆ. ಏಕೆಂದರೆ ಅದು ಯಾವಾಗಲೂ ಇರುತ್ತದೆ. ಆದುದರಿಂದ ಸದಾಭಾವವೆಂಬುದು ಮೂರನೆಯ ಪ್ರಕಾರದ ಅಭಾವ.

ಅತ್ಯಂತಾಭಾವದ ಹೆಸರು ಬಿಡಲು ಕಾರಣವೇನು ?

ಇಲ್ಲಿ ಅಭಾವದ ಭೇದ-ಪ್ರಭೇದಗಳನ್ನು ಕುರಿತಾದ ವಾದ, ವಿವಾದಗಳನ್ನು ಚರ್ಚಿಸಿ ಸ್ವಸಿದ್ಧಾಂತವನ್ನು ನಿರೂಪಿಸುತ್ತಾರೆ.

ನೈಯ್ಯಾಯಿಕರು ಸದಾಭಾವಕ್ಕೆ ಅತ್ಯಂತಾಭಾವವೆಂಬ ಪ್ರಸಿದ್ಧವಾದ ಹೆಸರಿಟ್ಟು ವ್ಯವಹರಿಸುತ್ತಾರೆ. ಅದನ್ನು ಬಿಟ್ಟು ಸದಾಭಾವವೆಂದು ಬೇರೆ ಹೆಸರಿಟ್ಟು ಕರೆಯಲು ಕಾರಣವೇನು ? ಎಂದರೆ;

ಒಂದರ ಲಕ್ಷಣವನ್ನು ಹೇಳಬೇಕಾದರೆ ಉದ್ದೇಶದ ಮೂಲಕ ಹೇಳಬೇಕು. ಹೀಗೆ ಅದರ ಉದ್ದೇಶದಿಂದಲೇ ಲಕ್ಷಣವು ಸ್ಪಷ್ಟವಾಗಿ ತಿಳಿಯಲಿ ಎಂಬ ಸೂಚನೆಯೆ ಇದರ ಪ್ರಯೋಜನ.

ಮತ್ತೆ ಕೆಲವರು ಅತ್ಯಂತಾಬಾವದ ಸ್ವರೂಪವನ್ನು ಹೀಗೆ ಹೇಳಿದರು. ''ಸಂಸರ್ಗ ಪ್ರತಿಯೋಗಿಕಾಭಾವಃ ಅತ್ಯಂತಾಭಾವಃ'' ಎಂದು ಇದರ ಲಕ್ಷಣ. ಘಟಕ್ಕೂ ಭೂತಳಕ್ಕೂ ಇರುವ ಸಂಬಂಧವೆ ಸಂಸರ್ಗ. ಅದು ಭೂತಳ-

Rarest Archiver

ದಲ್ಲಿರುವ ಅಧಿಕರಣ (ಆಶ್ರಯ, ಆಧಾರ)ದಿಂದಲೂ, ಘಟದಲ್ಲಿರುವ ಆಧೇಯತೆ (ಆಶ್ರಯಪಡೆದುಕೊಂಡಿರುವಿಕೆ)ಯಿಂದಲೂ ಕಂಡುಬರುತ್ತದೆ. ಇಂತಹ ಸಂಸರ್ಗಕ್ಕೆ ಪ್ರತಿಯೋಗಿಯಾದುದು ಯಾವುದೊ ಎಂದರೆ ಧರ್ಮಿ, ಅದರ ಅಭಾವ, ಎಂದರ್ಥವಾಗುತ್ತದೆ.

ಇದಕ್ಕೆ ಹೀಗೆ ಉದಾಹರಣೆಗಳನ್ನು ಕೊಡುತ್ತಾರೆ. ''ಏತದ್ಘಟೇ ಏತದ್ಭೂತಲಸಂಸರ್ಗಾಭಾವಃ'' ಎಂದರೆ ಈ ಘಟದಲ್ಲಿ ಈ ಭೂತಲಸಂಸರ್ಗದ ಅಭಾವ ಎಂದು.

ಈ ರೀತಿ ಹೇಳಿ ಒಪ್ಪಿರುವುದು ಸರಿಯಲ್ಲವೆಂದು ನಿರಾಕರಣ ಮಾಡುವುದಕ್ಕಾಗಿಯೂ, ಸದಾಭಾವವೆಂದು ಬೇರೆ ನಾಮಕರಣ ಮಾಡಿರುವುದು ಇದಕ್ಕೆ ಪ್ರಯೋಜನ.

ಮೊದಲು ಹೇಳಿದಂತೆ ಅನ್ಯರ ಮತವನ್ನು ಒಪ್ಪುವುದರಲ್ಲಿ ದೋಷವೇನಿದೆ ? ಎಂದರೆ;

ಅತ್ಯಂತಾಭಾವವು ಅವಧಿರಹಿತವಾದ ಅಭಾವವಾಗಿರಬೇಕು. ಈ ಘಟದಲ್ಲಿ ಈ ಭೂತಳದ ಸಂಸರ್ಗಾಭಾವವಿದೆ ಎಂದರೆ ಈ ಘಟದಲ್ಲಿ ಅನ್ಯಭೂತಳದ, ಗತಕಾಲದ, ಅಥವಾ ಭವಿಷ್ಯತ್ಕಾಲದ ಸಂಸರ್ಗವಿದೆ ಎಂದಂತಾಯಿತಲ್ಲವೆ ? ಎಂಬ ಪ್ರಶ್ನೆಗೆ ಅವಕಾಶ ಒದಗುತ್ತದೆ. ಮತ್ತು ಅದು ಅವಧಿರಹಿತವಾಗಿಲ್ಲ. ಆದುದರಿಂದ ಅನ್ಯರ ಈ ಲಕ್ಷಣವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ನಾಲ್ಕನೆಯ ಅಭಾವವಿರುವುದಿಲ್ಲ

ಹಾಗಾದರೆ ಈಗ ಉದಾಹರಿಸಿದ ಅತ್ಯಂತಾಭಾವವನ್ನು ನಾಲ್ಕನೆಯ ಅಭಾವವೆಂದು ಒಪ್ಪಬಹುದಲ್ಲ ಎಂದರೆ ಅದು ಸಾಧ್ಯವಿಲ್ಲ.

ಏಕೆಂದರೆ ಅದನ್ನು ಸಂದರ್ಭಾನುಗುಣವಾಗಿ ಪ್ರಾಗಭಾವಾದಿಗಳಲ್ಲಿಯೆ ಅಡಕಮಾಡಲು ಸಾಧ್ಯವಾಗುವುದು.

ಕೆಲವರ ಅಭಿಪ್ರಾಯ-ನಿರಾಕರಣ

ಮತ್ತೆ ಕೆಲವರು ಈ ವಿಷಯಕ್ಕೆ ಹೀಗೆ ಹೇಳುವರು— ಅಭಾವಗಳಲ್ಲಿ ''ಸಂಸರ್ಗಾಭಾವವೆಂತಲೂ ಅನ್ಯೋನ್ಯಾಭಾವವೆಂತಲೂ ಎರಡೇ ವಿಧಗಳಿವೆ'' ಎನ್ನುವರು. ನೈಯ್ಯಾಯಿಕರಾದರೋ ''ಪ್ರಾಗಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ, ಅನ್ಯೋನ್ಯಾಭಾವಗಳೆಂದು ನಾಲ್ಕು ವಿಧಗಳಿವೆ'' ಎನ್ನುತ್ತಾರೆ. ಈ ಎರಡೂ ಪಕ್ಷಗಳು ಯುಕ್ತವಲ್ಲವೆಂದು ನಿರಾಕರಿಸಲು ಮೂಲದಲ್ಲಿ 'ಇಷ್ಯತೇ' ಎಂಬ ಗಂಭೀರ ಕ್ರಿಯಾಪದವನ್ನು ಹೇಳಿದ್ದಾರೆ.

ಇನ್ನು ''ಅನ್ಯೋನ್ಯಾಭಾವ''ವಾದರೊ ಎರಡು ವಸ್ತುಗಳ ಪರಸ್ಪರ ಭೇದವನ್ನು ತೋರಿಸುತ್ತದೆ. ಆದುದರಿಂದ ಅದು ಆಯಾ ವಸ್ತುಗಳ ಸ್ವರೂಪವೆ ಹೊರತು ಬೇರೆಯಲ್ಲವೆಂಬುದನ್ನು ತತ್ತ್ವವಿವೇಕ ಮುಂತಾದ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾರೆ.

ಅಲ್ಲದೆ ಕಾರಣವಸ್ತು ಮತ್ತು ಕಾರ್ಯವಸ್ತುಗಳಲ್ಲಿರುವ ಸಂಸರ್ಗದ ಸಂಬಂಧವನ್ನು ಅದೇ ಗ್ರಂಥಗಳಲ್ಲಿ ನಿರಾಕರಿಸಿದ್ದಾರೆ. ಇನ್ನು ಪ್ರಾಗಭಾವ, ಮತ್ತು ಪ್ರಧ್ವಂಸಾಭಾವಗಳಿಗೆ ಸಂಸರ್ಗಾಭಾವತ್ವವು ಉಂಟಾಗುತ್ತದೆ ಎಂಬ ವಾದವನ್ನೂ ಸಹ ನಿರಾಕರಿಸಿದ್ದಾರೆ. ಆದುದರಿಂದ ಸಿದ್ಧಾಂತದಲ್ಲಿ ಒಪ್ಪಿಕೊಂಡ ಪ್ರಕಾರವೇ ಸರಿಯಾದುದೆಂದು ಹೇಳಿ ತಮ್ಮ ವಾದವನ್ನೇ ಮಂಡಿಸಿದರು.

Rarest Archiver

ಭಾವದೀಪ—

ಉಪಲಕ್ಷಿತ ಇತಿ । ಸ್ವಸ್ವರೂಪಾನುಪ್ರವಿಷ್ಟೈರೇವ ಇತರಸ್ಮಾತ್ ವ್ಯಾವರ್ತಿತ ಇತ್ಯರ್ಥಃ । ''ಇತ್ಥಂಭೂತಲಕ್ಷಣೇ ತೃತೀಯಾ'' ಇತಿ ಭಾವಃ । ಘಟಾದಿವ್ಯಾವೃತ್ತ್ಯರ್ಥಂ ಉತ್ತರೈಕೇತಿ ಏಕಪದಮ್ । ಏವಮಗ್ರೇಽಪಿ । ಘಟಾದೇಃ ವಕ್ಷ್ಯಮಾಣದಿಶಾ ಪ್ರಧ್ವಂಸಪ್ರಾಗಬಾವರೂಪತ್ವೇಽಪಿ ಉಭಯಾವಧಿಮತ್ತ್ವಾತ್ । ಯದ್ವಾ ಅನಿತ್ಯವಸ್ತುಸ್ವರೂಪಾತ್ಮಕಾನ್ಯೋನ್ಯಾಭಾವಸ್ಯ ಪೂರ್ವೋತ್ತರಾವಧಿಮತ್ತ್ವಾತ್ ತದ್ವ್ಯಾವೃತ್ತ್ಯರ್ಥಂ ಉತ್ತರೈಕೇತಿ ಪೂರ್ವೈಕೇತಿ ಚೈಕಪದಮ್ । ''ಅನಿತ್ಯವಸ್ತುನಿಷ್ಠಭೇದಾಃ ಅನಿತ್ಯಾಃ'' ಇತಿ ಟೀಕೋಕ್ತೇಃ ಘಟಾದಿಸಾಮಗ್ರ್ಯಾಂ ಅನತಿವ್ಯಾಪ್ತಯೇ ಆಭಾವಪದಮ್ । ಏವಂ ಪ್ರಧ್ವಂಸಲಕ್ಷಣೇಽಪಿ ವಿನಾಶಸಾಮಗ್ರ್ಯುತ್ತರಕಾಲೀನ ಅನತಿವ್ಯಾಪ್ತಯೇ ಅಭಾವಪದಮ್ । ಕುತ ಏತದಿತ್ಯತಃ ತತ್ರ ಪ್ರಾಕ್‌ಪದಸೂಚಿತಯುಕ್ತಿಮಾಹ ಪ್ರತಿಯೋಗೀತಿ । ನ ತು ಪ್ರಾಗಸ್ತೀತಿ ಇತಿಶಬ್ದೋ ಹೇತ್ವರ್ಥಃ । ಏತೇನ ಮೂಲೇ ತೃತೀಯಾ ಹೇತಾವಿತ್ಯಪಿ ವ್ಯಾಖ್ಯಾತಂ ಭವತಿ ।

ಪ್ರಾಗಭಾವನಾಶಃ ಪ್ರತಿಯೋಗಿನಃ ಅನ್ಯಃ ಪ್ರಧ್ವಂಸಪ್ರಾಗಭಾವೋಽಪಿ ತಥೇತ್ಯುಪೇತ್ಯ ಶಂಕತೇ ನ ಚೈವಮಿತಿ । ಪ್ರಾಗಭಾವಪ್ರಧ್ವಂಸಯೋರ್ನಾಶಪ್ರಾಗಭಾವಾಂಗೀಕಾರ ಇತ್ಯರ್ಥಃ ।

ಕುತ ಏತತ್ ಇತ್ಯತಃ ತೃತೀಯಾರ್ಥಮಾಹ ಸದಾಭಾವೋಽಸ್ತೀತಿ ಕೃತ್ವೇತಿ ॥ ಯಥಾಸಂಭವಮಿತಿ । ಯದಿ ಘಟಸಂಸರ್ಗೋ ಭಾವೀ ತದಾ ಪ್ರಾಗಭಾವಃ । ಯದಿ ಭೂತಃ ತದಾ ಧ್ವಂಸಃ । ನ ಕದಾಪಿ ಚೇತ್ ತದಾ ಅತ್ಯಂತಾಭಾವ ಇತ್ಯೇವಂ ಯಥಾಸಂಭವಮಿತ್ಯರ್ಥಃ ।

ದ್ವಿವಿಧ ಏವೇತಿ । ಸಂಸರ್ಗಾಭಾವೋಽಪಿ ಪ್ರಾಗಭಾವಾದಿಭೇದೇನ ತ್ರಿವಿಧ ಇತ್ಯಪಿ ಧ್ಯೇಯಮ್ ॥ ಅನ್ಯತ್ರೇಽಪೀತಿ । ತತ್ತ್ವವಿವೇಕಾದೌ ''ಭಾವಾಭಾವಸ್ವರೂಪತ್ವಾನ್ನಾನ್ಯೋನ್ಯಾಭಾವತಾ ಪೃಥಕ್'' ಇತ್ಯಾದಿನೇತಿ ಭಾವಃ । ಪ್ರಾಗಭಾವಾದೇಃ ಸಂಸರ್ಗಾಭಾವತ್ವಂ ವದತಾಂ ಮತಂ ನಿರಾಹ ಕಾರ್ಯೇತಿ । ತಂತುಪಟಯೋಃ ಸಂಸರ್ಗಪ್ರತಿಯೋಗಿಕಃ ಪ್ರಾಚೀನಃ ಪ್ರಾಗಭಾವಃ ಉದೀಚೀನಃ ಪ್ರಧ್ವಂಸಃ ಉಭಾವಪಿ ತಂತ್ವಾದಿಸಮವಾಯಿಕಾರಣನಿಷ್ಠತಯಾ ಪ್ರತಿಯೋಗಿನಾ ಸಮಾನದೇಶೌ ಭಿನ್ನಕಾಲೀನಾವಿತಿ ಮತಮಯುಕ್ತಮ್ । ಉಪಾದಾನೋಪಾದೇಯಯೋರಭೇದಪ್ರತಿಪಾದನೇನ ಸಂಸರ್ಗಸ್ಯಾನ್ಯತ್ರ ತತ್ತ್ವವಿವೇಕಾದೌ ನಿರಸ್ತತ್ವೇನೇತ್ಯರ್ಥಃ ।

ಉಪಲಕ್ಷಿತ ಇತಿ— ಪ್ರಾಕ್ತ್ವ, ಪ್ರಧ್ವಂಸತ್ವ, ಸದಾತ್ವ ಎಂಬ ಮೂರು ವಿಧ ಅಭಾವಗಳು. ತಮ್ಮ ತಮ್ಮ ಸ್ವರೂಪಗಳಿಂದಲೇ ಬುದ್ಧಿಗೆ ಗೋಚರವಾಗುತ್ತಿದ್ದು ಇತರಾಭಾವಗಳಿಗೆ ನಿಷೇಧಕವಾಗಿರುತ್ತವೆ. ಪ್ರಾಕ್ತ್ವೇನ ಇತ್ಯಾದಿಗಳಲ್ಲಿನ ತೃತೀಯಾ ವಿಭಕ್ತಿಯು 'ಇತ್ಥಂ ಭೂತ ಲಕ್ಷಣೇ' ಎಂಬ ಅರ್ಥದಲ್ಲಿದೆ. 'ಇತ್ಥಂ ಭೂತಲಕ್ಷಣೇ' (2-3-21). ಇದು ಪಾಣಿನೀಯ ಸೂತ್ರ. ''ಕಂಚಿತ್ ಪ್ರಕಾರಂ ಪ್ರಾಪ್ತಸ್ಯ ಲಕ್ಷಣೇ ತೃತೀಯಾ ಸ್ಯಾತ್ ! ಜಟಾಭಿಸ್ತಾಪಸಃ !'' ಇದು ಭಟ್ಟೋಜೀ ದೀಕ್ಷಿತರ ಸೂತ್ರವೃತ್ತಿ. ಯಾವುದಾದರೊಂದು ಪ್ರಕಾರದ ಲಕ್ಷಣವನ್ನು ಹೊಂದಿರುವುದು ಎಂಬ ಅರ್ಥದಲ್ಲಿ ತೃತೀಯಾ ವಿಭಕ್ತಿಯನ್ನು ಹೇಳಬೇಕು.

ಉದಾಹರಣೆ— ಜಟೆಗಳನ್ನು ಹೊಂದಿಕೊಂಡಿರುವ ಪ್ರಕಾರದ ಲಕ್ಷಣವುಳ್ಳ ತಾಪಸ ಎಂಬಲ್ಲಿ ಜಟಾಭಿಃ ಎಂದು ತೃತೀಯಾ ವಿಭಕ್ತಿಯನ್ನು ಹೇಳಲಾಗಿದೆ. ಇದರಂತೆ ಪ್ರಕೃತದಲ್ಲಿ ''ಪ್ರಾಕ್ತ್ವೇನ, ಪ್ರಧ್ವಂಸತ್ವೇನ, ಸದಾತ್ವೇನ'' ಎಂಬ ಸ್ಥಳಗಳಲ್ಲಿಯೂ ಇತ್ಥಂಭೂತ ಲಕ್ಷಣಾರ್ಥದ ತೃತೀಯಾ ವಿಭಕ್ತಿಯನ್ನು ಹೇಳಲಾಗಿದೆ ಎಂದು ಭಾವ.

Rarest Archiver

ಅಭಾವ ಲಕ್ಷಣ ಶರೀರದೊಳಗಿನ ವಿಶೇಷಣಗಳಿಗೆ ಪ್ರಯೋಜನವನ್ನು ಹೇಳುವರು. ಉತ್ತರಾವಧಿಯೇ ಮುಖ್ಯವಾಗಿ ಉಳ್ಳ ಅಭಾವವು ಪ್ರಾಗಭಾವವು. ಘಟಾದಿಗಳಲ್ಲಿಯೂ ಉತ್ತರಾವಧಿಯು ಇರುವುದರಿಂದ ಲಕ್ಷಣಕ್ಕೆ ಅತಿವ್ಯಾಪ್ತಿಯು ಬರುತ್ತದೆ. ಅದಕ್ಕಾಗಿ ಏಕ ಎಂಬ ವಿಶೇಷಣವನ್ನು ಕೊಡಲಾಗಿದೆ. ಘಟಾದಿಗಳಲ್ಲಿ ಉತ್ತರಾವಧಿಯು ಇದ್ದಾಗ್ಯೂ ಅದೇ ಮುಖ್ಯವಾಗಿ ಇರುವುದಿಲ್ಲವಾದುದರಿಂದ ಅತಿವ್ಯಾಪ್ತಿಗೆ ಅವಕಾಶವಿಲ್ಲ.

ಪೂರ್ವಾವಧಿಯೇ ಮುಖ್ಯವಾಗಿ ಉಳ್ಳ ಅಭಾವವು ಪ್ರಧ್ವಂಸಾಭಾವವು. ಘಟಾದಿಗಳಲ್ಲಿ ಪೂರ್ವಾವಧಿಯು ಇರುವುದರಿಂದ ಲಕ್ಷಣಕ್ಕೆ ಅತಿವ್ಯಾಪ್ತಿಯು ಬರುತ್ತದೆ. ಅದಕ್ಕಾಗಿ ಇಲ್ಲಿಯೂ ಏಕ ಎಂಬ ವಿಶೇಷಣವನ್ನು ಕೊಡಲಾಗಿದೆ. ಘಟಾದಿಗಳಲ್ಲಿ ಪೂರ್ವಾವಧಿಯು ಇದ್ದಾಗ್ಯೂ ಅದೇ ಮುಖ್ಯವಾಗಿ ಇರುವುದಿಲ್ಲವಾದುದರಿಂದ ಅತಿವ್ಯಾಪ್ತಿಯು ಪರಿಹಾರವಾಯಿತು.

ಮುಂದೆ ಹೇಳಲಿರುವ ರೀತಿಯಲ್ಲಿ ಘಟಾದಿಗಳು ಪ್ರಧ್ವಂಸರೂಪವಾಗಿಯೂ ಪ್ರಾಗಭಾವರೂಪವಾಗಿಯೂ ಇರುತ್ತವೆ. ಅದಾಗ್ಯೂ ಅವುಗಳಿಗೆ ಪೂರ್ವಾವಧಿಯೂ ಉತ್ತರಾವಧಿಯೂ ಇರುವುದು ಕಂಡು ಬಂದಿದೆ. ಏಕತ್ವ ವಿಶೇಷಣವನ್ನು ಹೇಳಿದ್ದುದರಿಂದ ಲಕ್ಷಣದ್ವಯಕ್ಕೂ ಅತಿವ್ಯಾಪ್ತಿದೋಷವಿಲ್ಲ.

ಅಥವಾ ಅನ್ಯೋನ್ಯಾಭಾವದಲ್ಲಿ ಬರುವ ಅತಿವ್ಯಾಪ್ತಿಯ ಪರಿಹಾರಕ್ಕಾಗಿ ಉತ್ತರೈಕವೆಂಬ ಮತ್ತು ಪೂರ್ವೈಕವೆಂಬ ವಿಶೇಷಣಗಳನ್ನು ಕೊಟ್ಟಿದ್ದಾರೆಂದು ತಿಳಿಯಬೇಕು. ಅನ್ಯೋನ್ಯಾಭಾವವು ಅನಿತ್ಯವಸ್ತುವಿನ ಸ್ವರೂಪವಾಗಿರುತ್ತದೆ. ಅದಕ್ಕೆ ಪೂರ್ವಾವಧಿಯೂ ಉತ್ತರಾವಧಿಯೂ ಉಂಟು. ಅದನ್ನು ಪರಿಹರಿಸಲು ಮೇಲಿನಂತೆ ಉಭಯವಿಶೇಷಗಳನ್ನು ಕೊಡಲಾಗಿದೆ.

ಟೀಕೆಯಲ್ಲಿ ''ಅನಿತ್ಯವಸ್ತುನಿಷ್ಠಭೇದಾಃ ಅನಿತ್ಯಾಃ'' ಎಂದು ಹೇಳಲಾಗಿದೆ. ಅನಿತ್ಯವಸ್ತುಗಳಲ್ಲಿರುವ ಭೇದಗಳು ಅನಿತ್ಯವಾದವು ಎಂದರ್ಥ.

ಘಟಾದಿಗಳಿಗೆ ಮಣ್ಣು, ತಿಗರಿ, ಕೋಲು ಮುಂತಾದವು ಸಾಮಗ್ರಿಗಳು. ಅವುಗಳಲ್ಲಿ ಲಕ್ಷಣಕ್ಕೆ ಅತಿವ್ಯಾಪ್ತಿಯು ಬರಬಾರದೆಂದು ಅಭಾವ ಎಂಬ ಪದವನ್ನು ಹೇಳಲಾಗಿದೆ. ಘಟಾದಿಗಳ ವಿನಾಶಕ್ಕೆ ದಂಡಪ್ರಹಾರ ಅಧೋಪಾತ ಮುಂತಾದವು ಸಾಮಗ್ರಿಗಳು, ಪ್ರಧ್ವಂಸ ಲಕ್ಷಣದಲ್ಲಿ ಆ ಸಾಮಗ್ರಿಗಳು ಉತ್ತರ ಕಾಲದಲ್ಲಿರುವುದರಿಂದ ಅತಿ-ವ್ಯಾಪ್ತಿಯು ಬರುತ್ತದೆ. ಅದರ ಪರಿಹಾರಕ್ಕಾಗಿ ಇಲ್ಲಿಯೂ ಅಭಾವ ಎಂಬ ಪದವನ್ನು ಹೇಳಲಾಗಿದೆ.

ಪ್ರತಿಯೋಗೀತಿ— ಇದು ಹೀಗೇಕೆ ? ಎಂಬ ಪ್ರಶ್ನೆ ಹುಟ್ಟಿದರೆ ಅದರ ಪರಿಹಾರಕ್ಕಾಗಿ ಪ್ರಾಕ್‌ಪದದಿಂದ ಸೂಚಿತವಾದ ಯುಕ್ತಿಯನ್ನು ಹೇಳಿದ್ದಾರೆ. ಪ್ರತಿಯೋಗಿಯು ಪ್ರಧ್ವಂಸವಾದ ನಂತರವೇ ಅಭಾವವು ಹುಟ್ಟುವುದೇ ಹೊರತು, ಅದಕ್ಕಿಂತ ಪೂರ್ವದಲ್ಲಿ ಇರುವುದಿಲ್ಲ, ಟೀಕೆಯಲ್ಲಿನ ಇತಿಶಬ್ದಕ್ಕೆ ಕಾರಣ ಎಂದರ್ಥ. ಮೂಲದಲ್ಲಿ ''ತೃತೀಯಾ ಹೇತೌ'' ಎಂದಿರುವ ಮಾತನ್ನು ಸಹ ಇದರಿಂದ ವ್ಯಾಖ್ಯಾನಮಾಡಿದಂತಾಯಿತು.

ನ ಚೈವಮಿತಿ— ಪ್ರಾಗಭಾವದ ನಾಶವು ಪ್ರತಿಯೋಗಿಯಿಂದ ಬೇರೆ, ಪ್ರಧ್ವಂಸದ ಪ್ರಾಗಭಾವವೂ ಸಹ ಪ್ರತಿಯೋಗಿಯಿಂದ ಬೇರೆ ಎಂದು ತಿಳಿದು ಆಶಂಕಿಸಲಾಗಿದೆ.

ಪ್ರಾಗಭಾವಕ್ಕೆ ನಾಶವನ್ನೂ ಪ್ರಧ್ವಂಸಕ್ಕೆ ಪ್ರಾಗಭಾವವನ್ನೂ ಅಂಗೀಕರಿಸಲಾಗಿದೆ ಎಂದರ್ಥ.

Rarest Archiver

ಸದಾಭಾವೋಽಸ್ತೀತಿಕೃತ್ವಾ— ಇದು ಏಕೆ ? ಎಂಬ ಆಕ್ಷೇಪ ಬಂದರೆ ಅದಕ್ಕೆ ಮೂರನೆಯ ಪದಾರ್ಥವನ್ನು ಹೇಳಲಾಗಿದೆ. (ತೃತೀಯಾ ವಿಭಕ್ತಿಯ ಅರ್ಥವನ್ನು ಹೇಳಲಾಗಿದೆ).

ಯಥಾಸಂಭವಮಿತಿ— ನಾಲ್ಕನೆಯ ಅತ್ಯಂತಾಭಾವವು ಇರುವಾಗ ಮೂರೇ ಅಭಾವಗಳೆಂದು ಹೇಳಿದ್ದು ಹೇಗೆ ಸಂಗತವಾಗುತ್ತದೆ ? ಎಂಬ ಆಕ್ಷೇಪ ಬಂದರೆ ಅದನ್ನು ಸಂದರ್ಭಾನುಗುಣವಾಗಿ ಮೂರು ಅಭಾವಗಳಲ್ಲಿಯೇ ಅಂತರ್ಭಾವಗೊಳಿಸುತ್ತೇವೆ. ಹೇಗೆಂದರೆ, ಘಟದ ಸಂಸರ್ಗವು ಮುಂದೆ ಆಗುವುದಾದರೆ ಆಗ ಅದಕ್ಕೆ ಪ್ರಾಗಭಾವ-ವೆಂದು ಹೆಸರು. ಸಂಸರ್ಗವು ಆಗಿದೆ ಎನ್ನುವುದಾದರೆ ಅದಕ್ಕೆ ಪ್ರಧ್ವಂಸಾಭಾವವೆಂದು ಹೆಸರು. ಯಾವಾಗಲೂ ಘಟದ ಸಂಸರ್ಗವು ಆಗುವುದೇ ಇಲ್ಲವೆನ್ನುವುದಾದರೆ ಆಗ ಅದಕ್ಕೆ ಅತ್ಯಂತಾಭಾವವೆಂದು ಹೆಸರು. ಹೀಗೆ ಅಭಾವಗಳು ಮೂರೇ ಹೊರತು ನಾಲ್ಕು ಇಲ್ಲ ಎಂದು ಅಂತರ್ಭಾವಗೊಳಿಸಲಾಗಿದೆ ಎಂದರ್ಥ.

ದ್ವಿವಿಧ ಏವೇತಿ— ಅಭಾವಗಳಲ್ಲಿ ಎರಡು ವಿಧ. ಸಂಸರ್ಗಾಭಾವ, ಅನ್ಯೋನ್ಯಾಭಾವಗಳೆಂದು ಕೆಲವರು ಹೇಳುತ್ತಾರೆ. ಆ ಸಂಸರ್ಗಾಭಾವದಲ್ಲಿಯೂ ಸಹ ಪ್ರಾಗಭಾವಾದಿಗಳೆಂಬ ರೀತಿಯಿಂದ ಮೂರು ವಿಧಗಳುಂಟು ಎಂದು ಮನಗಾಣಬೇಕು.

ಅನ್ಯತ್ರೇತಿ— ''ಭಾವಾಭಾವಸ್ವರೂಪತ್ವಾನ್ನಾನ್ಯೋನ್ಯಾಭಾವತಾ ಪೃಥಗಿತ್ಯಾದಿನಾ'' ಭಾವವಲ್ಲದ್ದು ಅಭಾವದ ಸ್ವರೂಪವಾಗಿಯೂ ಅಭಾವವಲ್ಲದ್ದು ಭಾವದ ಸ್ವರೂಪವಾಗಿಯೂ ಕಂಡುಬರುವುದರಿಂದ ಅನ್ಯೋನ್ಯಾಭಾವ-ವೆಂಬುದು ಪ್ರತ್ಯೇಕವಾಗಿಲ್ಲ. ಈ ಅಭಿಪ್ರಾಯವನ್ನು ತತ್ತ್ವವಿವೇಕ ಮುಂತಾದ ಗ್ರಂಥಗಳಲ್ಲಿ ಸ್ಪಷ್ಟಪಡಿಸಲಾಗಿದೆ ಎಂದು ಭಾವ.

ಕಾರ್ಯೇತಿ— ಪ್ರಾಗಭಾವ ಮುಂತಾದವು ಸಂಸರ್ಗಾಭಾವಗಳಾಗುತ್ತವೆ ಎಂಬ ವಾದಿಗಳ ಮತವನ್ನು ನಿರಾ-ಕರಿಸುತ್ತಾರೆ.

ಇಲ್ಲಿ ನೈಯ್ಯಾಯಿಕರು ಪ್ರಾಗಭಾವ, ಪ್ರಧ್ವಂಸಾಭಾವಗಳು ಪ್ರತಿಯೋಗಿಯ ಸಮಾನದೇಶದಲ್ಲಿ ಇರುತ್ತವೆ ಎಂದು ಒಪ್ಪಿದ್ದಾರೆ. ಅದನ್ನು ನಿರಾಕರಿಸಲಾಗಿದೆ.

ತಂತುಗಳು ಪಟಕ್ಕೆ ಕಾರಣ. ಅವುಗಳ ಸಂಸರ್ಗವು ಏರ್ಪಟ್ಟು ಪಟವೆಂಬ ವ್ಯವಹಾರವಾಗಿದೆ. ತಂತುಗಳ ಸಂಸರ್ಗಕ್ಕೂ ಸಂಸರ್ಗಪ್ರತಿಯೋಗಿಯ ಅಭಾವಕ್ಕೂ ತಂತುಗಳೇ ಪ್ರತಿಯೋಗಿಯಾಗಿವೆ. ಹಾಗೆಯೇ ಪಟ-ಸಂಸರ್ಗಕ್ಕೂ ಪಟಸಂಸರ್ಗಪ್ರತಿಯೋಗಿಯ ಆಭಾವಕ್ಕೂ ಪಟವೇ ಪ್ರತಿಯೋಗಿಯಾಗಿದೆ.

ಹೀಗಿರುವಾಗ ತಂತು-ಪಟಗಳ ಸಂಸರ್ಗದ ಪ್ರತಿಯೋಗಿಯ ಪ್ರಾಚೀನವಾದ ಪ್ರಾಗಭಾವವೂ, ಮುಂದೆ ಏರ್ಪಡಲಿರುವ ಪ್ರಧ್ವಂಸಾಭಾವವೂ, ಇವೆರಡೂ ಪ್ರತಿಯೋಗಿಯಾದ ತಂತು ಮತ್ತು ಪಟಗಳಿರುವ ಸ್ಥಳದಲ್ಲಿಯೇ ಇರುತ್ತವೆ. ತಂತುಗಳು ಪಟಕ್ಕೆ ಸಮವಾಯಕಾರಣವಾದುದರಿಂದ ಅವುಗಳಲ್ಲಿ ತಂತುಸಂಸರ್ಗಪ್ರಾಗಭಾವವೂ ಮತ್ತು ಪ್ರಧ್ವಂಸಾಭಾವವೂ ತಂತುಪಟಗಳಿರುವ ಸಮಾನ ಸ್ಥಳದಲ್ಲಿಯೇ ಇರುತ್ತವೆ. ಆದರೆ ಭಿನ್ನಕಾಲದಲ್ಲಿ ಇರುತ್ತವೆ.

ಒಟ್ಟಿನಲ್ಲಿ ಪ್ರತಿಯೋಗಿಯು ಇರುವ ಸ್ಥಳದಲ್ಲಿ ಅದರ ಅಭಾವವೂ ಇರುತ್ತದೆ ಎಂದು ಹೇಳಿದಂತಾಯಿತು. ಇದು ನೈಯ್ಯಾಯಿಕರ ಮತ.

Rarest Archiver

ಇದು ಯುಕ್ತವಲ್ಲ. ಏಕೆಂದರೆ ಉಪಾದಾನ-ಉಪಾದೇಯಗಳಿಗೆ ಅತ್ಯಂತ ಅಭೇದವನ್ನು ಒಪ್ಪಲಾಗಿದೆ. ಭಿನ್ನ ವಸ್ತುಗಳಿಗೆ ಸಂಸರ್ಗವು ಏರ್ಪಡುತ್ತದೆಯೆ ಹೊರತು ಅತ್ಯಂತ ಅಭಿನ್ನ ವಸ್ತುಗಳಿಗೆ ಸಂಸರ್ಗವು ಏರ್ಪಡುವುದಿಲ್ಲ. ಮತ್ತು ಸಂಸರ್ಗವೆಂಬ ಸಂಬಂಧವೇ ಇಲ್ಲವೆಂದು ತತ್ತ್ವವಿವೇಕ ಮುಂತಾದ ಗ್ರಂಥಗಳಲ್ಲಿ ನಿರಾಕರಿಸಲಾಗಿದೆ. ಆದುದರಿಂದ ನೈಯ್ಯಾಯಕರ ಈ ಅಭಿಪ್ರಾಯವು ಯುಕ್ತವಲ್ಲ.

ಟೀಕಾ—

ಭಾವಂ ವಿಭಜ್ಯ ದರ್ಶಯತಿ—

"ಚೇತನಾಚೇತನತ್ವೇನ ಭಾವೋಽಪಿ ದ್ವಿವಿಧೋ ಮತಃ ।"

ನ ಕೇವಲಮಭಾವೋ ಭೇದವಾನ್ ಕಿಂ ತು ಭಾವೋಽಪೀತ್ಯಪಿಶಬ್ದಃ ।

ಚೇತಯತೀತಿ ಚೇತನಃ । ಅನೇವಂವಿಧೋಽಚೇತನಃ । ತೇನ ವಿಷ್ಣೋಃ ಚೇತನತ್ವಮಭಾವಸ್ಯಾಚೇತನತ್ವಂ ಚ ಜ್ಞಾತವ್ಯಮ್ । ಸರ್ವಮಚೇತನಂ ಚೇತನಾರ್ಥಮಿತಿ ಚೇತನಸ್ಯ ಪ್ರಾಧಾನ್ಯಾತ್ಪೂರ್ವಮುದ್ದೇಶಃ । ಮೃದಬ್ರವೀತ್ ಇತ್ಯಾದಿ ವಚನಾತ್ ಸರ್ವಂ ಚೇತನಮೇವೇತಿ ಮತನಿರಾಸಾಯ ಮತ ಇತ್ಯುಕ್ತಮ್ । ತಚ್ಚಾಭಿಮಾನ್ಯಧಿಕರಣೇ ನಿರಸ್ತಮ್ ।

ಚೇತನಾಚೇತನವಿಭಾಗಸ್ಯ ನಿತ್ಯಾದಿವಿಭಾಗಾದಭ್ಯರ್ಹಿತತ್ವಾತ್ ಸ ಏವಾದಾವುದಾಹೃತಃ ।

ಭಾವ ವಸ್ತುಗಳ ಭೇದ-ಪ್ರಭೇದಗಳು

ಇದುವರೆಗೂ ಅಭಾವದ ಸ್ವರೂಪ, ಲಕ್ಷಣ, ಪ್ರಭೇದಗಳು, ಪರಕೀಯರ ವಾದ-ವಿವಾದಗಳು, ಸಿದ್ಧಾಂತ-ರೀತ್ಯಾ ಒಪ್ಪಿಕೊಂಡದ್ದು ಮುಂತಾದುವನ್ನು ನಿರೂಪಿಸಿ ಈಗ ಭಾವವಸ್ತುವಿನ ಪ್ರಭೇದಗಳನ್ನು ತಿಳಿಸುತ್ತಾರೆ.

ಭಾವವಸ್ತುವಿನಲ್ಲಿ ಚೇತನವೆಂತಲೂ ಅಚೇತನವೆಂತಲೂ ಎರಡು ವಿಧಗಳಿವೆ ಎಂಬುದನ್ನು ಪ್ರಾಮಾಣಿಕರು ಒಪ್ಪಿದ್ದಾರೆ. ಅಭಾವ ವಸ್ತುವಿಗೆ ಮಾತ್ರವೆ ಪ್ರಭೇದಗಳಿವೆ ಎಂದು ತಿಳಿಯಬಾರದು. ಆದರೆ ಭಾವ ವಸ್ತುವಿಗೂ ಕೂಡ ಭೇದ ಪ್ರಭೇದಗಳಿವೆ ಎಂಬುದನ್ನು ಮನಗಾಣಬೇಕು. ಇದನ್ನು ತಿಳಿಸಲು ಮೂಲದಲ್ಲಿ 'ಅಪಿ' ಶಬ್ದವನ್ನು ಪ್ರಯೋಗಿಸಿದ್ದಾರೆ.

ಚೇತನ ಎಂದರೇನು ?

ಚೇತಯತಿ ಎಂದರೆ ತಿಳಿವಳಿಕೆಯುಂಟು ಮಾಡುವುದು ಎಂದರ್ಥ. ಯಾವುದು ತಿಳಿವಳಿಕೆಯುಂಟು ಮಾಡು-ವುದೊ ಅದಕ್ಕೆ ಚೇತನ ಎಂದು ಹೆಸರು.

ಅಚೇತನ ಎಂದರೇನು?

ತಿಳಿವಳಿಕೆಯುಂಟು ಮಾಡದಿರುವುದು ಯಾವುದೊ ಅದಕ್ಕೆ ಅಚೇತನವೆಂದು ಹೆಸರು.

ಹೀಗೆ ಹೇಳಿದುದರಿಂದ ವಿಷ್ಣುವು ಚೇತನನೆಂತಲೂ ಅಭಾವವು ಅಚೇತನವೆಂತಲೂ ತಿಳಿದುಕೊಳ್ಳತಕ್ಕದ್ದು.

Rarest Archiver

ಜಗತ್ತಿನಲ್ಲಿ ಸರ್ವ ಅಚೇತನ ವಸ್ತುಗಳೂ ಚೇತನ ವಸ್ತುವಿನ ಪ್ರಯೋಜನಕ್ಕಾಗಿಯೇ ಇರುವುವು. ಇದನ್ನು ಸೂಚಿಸಲು ಚೇತನ ವಸ್ತುವನ್ನು ಮೊದಲು ಉದ್ದೇಶಗೊಳಿಸಿದ್ದಾರೆ. ಇದರಿಂದ ಚೇತನವಸ್ತುವೇ ಪ್ರಧಾನವಾಗಿದೆ ಎಂಬುದು ತಿಳಿದು ಬರುತ್ತದೆ.

ಸರ್ವವೂ ಚೇತನ ವಸ್ತುಗಳೇ ?

'ಮೃದಬ್ರವೀತ್' ಎಂದರೆ ಮಣ್ಣು ಮಾತಾಡಿತು ಎಂಬ ಶ್ರುತಿವಾಕ್ಯದಿಂದ ಸರ್ವವೂ ಚೇತನವಸ್ತುಗಳೇ ಆಗಿವೆ ಎಂಬುದೊಂದು ಮತವಿದೆ. ಅದನ್ನು ನಿರಾಕರಿಸಲು ಮೂಲದಲ್ಲಿ 'ಮತಂ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಪ್ರಾಮಾಣಿಕರು ಒಪ್ಪಿಕೊಂಡಿರುವುದರಿಂದ ಸರ್ವ ಚೇತನತ್ವವಾದಿಗಳ ಮತವು ಸರಿಯಲ್ಲವೆಂಬುದು ಇದರಿಂದ ಸೂಚಿತವಾಗಿದೆ. ಬ್ರಹ್ಮಮೀಮಾಂಸಾ ಶಾಸ್ತ್ರದ ಎರಡನೆಯ ಅಧ್ಯಾಯದಲ್ಲಿನ ಅಭಿಮಾನ್ಯಧಿಕರಣದಲ್ಲಿ ಸರ್ವ-ಚೇತನತ್ವವಾದಿಗಳ ಮತವನ್ನು ನಿರಾಕರಿಸಲಾಗಿದೆ.

ಚೇತನವನ್ನು ಏಕೆ ಮೊದಲು ಹೇಳಿದರು ?

ನಿತ್ಯ, ಅನಿತ್ಯಗಳೆಂದು ಇದನ್ನು ವಿಭಾಗಮಾಡಲು ಬರುತ್ತಿರುವಾಗ ಚೇತನ, ಅಚೇತನಗಳೆಂದು ಏಕೆ ವಿಭಾಗ ಮಾಡಬೇಕಾಗಿತ್ತು ? ಎಂದರೆ;

ಇದು ಅಭ್ಯರ್ಹಿತವಾದುದರಿಂದ ಹಾಗೆ ವಿಭಾಗ ಮಾಡಲಾಗಿದೆ. ಅಭ್ಯರ್ಹಿತವೆಂದರೇನೆಂಬುದನ್ನು ಶ್ರೀ ಮಂತ್ರಾಲಯ ಸ್ವಾಮಿಗಳವರು ತಮ್ಮ ಟಿಪ್ಪಣಿಯಲ್ಲಿ ತಿಳಿಸುವರು. ಆದ್ದರಿಂದಲೆ ಇದನ್ನು ಮೊದಲ ವಿಭಾಗದಲ್ಲಿ ಉದಾಹರಿಸಿದ್ದಾರೆ.

ಉದ್ದೇಶಗೊಳಿಸಿದ ಪ್ರಕಾರವಾಗಿ ಚೇತನ ವಸ್ತುವಿನ ವಿಭಾಗವನ್ನು ತಿಳಿಸುತ್ತಾರೆ.

ಭಾವದೀಪ—

ಚೇತಯತೀತಿ । ಸ್ವಾರ್ಥೇ ಣಿಚ್ । ಚಿತೀ ಸಂಜ್ಞಾನೇ । ಚೇತತೇ ಸಮ್ಯಕ್ ಜಾನಾತೀತಿ ಬಹುಲಗ್ರಹಣಾತ್ ಕರ್ತರಿ ಲ್ಯುಟ್ । ಯದ್ವಾ ಹೇತುಮತ್ಯೇವ ಣಿಚ್ । ಪರಾನ್ ಬೋಧಯತೀತ್ಯರ್ಥಃ । ಚಿತೀ ಸಂಜ್ಞಾನ ಇತ್ಯತೋ ಣ್ಯಂತಾತ್ ಸ್ತ್ರಿಯಾಂ ಯುಚ್ಪ್ರತ್ಯಯೇ ಅನಾದೇಶೇ ಣೇರನಿಟೀತಿ ಣಿಲೋಪೇ ಚೇತನೇತಿ ರೂಪಮ್ । ಅರ್ಶ ಆದ್ಯಚ್‌ಪ್ರತ್ಯಯೇ ಚೇತನಾ ಸಂಜ್ಞಾ ತದ್ವಾನ್ ಚೇತನ ಇತಿ ರೂಪಮಿತಿ ಭಾವಃ । ಅನೇವಂವಿಧೋ ಜ್ಞಾನಹೀನ ಇತ್ಯರ್ಥಃ ॥ ತೇನೇತಿ । ಏವಂ ನಿರ್ವಚನೇನೇತ್ಯರ್ಥಃ ।

ಚೇತನಾರ್ಥಮಿತಿ । ತದದೃಷ್ಟಜತ್ವಾದಿತಿ ಭಾವಃ । ''ಅಥಾತೋ ವಿಭೂತಯೋಽಸ್ಯ ಪುರುಷಸ್ಯ'' ಇತ್ಯುಕ್ತದಿಶಾ ಭಗವದ್ಭೋಗಾರ್ಥತ್ವಾದ್ವೇತಿ ಭಾವಃ ॥ ಅಭಿಮಾನ್ಯಧಿಕರಣ ಇತಿ । ''ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿ-ಭ್ಯಾಮ್'' ಇತಿ ಯುಕ್ತಿಪಾದೀಯತೃತೀಯಾಧಿಕರಣೇ ''ಮೃದಬ್ರವೀತ್, ಆಪೋಽಬ್ರುವನ್, ತತ್ತೇಜ ಐಕ್ಷತ, ಓಷಧಯಃ ಸಂವದಂತಿ'' ಇತ್ಯಾದಿವಾಕ್ಯಮಪ್ರಮಾಣಮ್ । ಮೃದಾದಿಕಂ ನ ವಕ್ತೃತ್ವಾದಿಮತ್ ಜಡತ್ವಾತ್ ಮೃತ್ವಾತ್ ಇತಿ ಯುಕ್ತಿ-ವಿರುದ್ಧತ್ವಾತ್ ಇತಿ ಪ್ರಾಪ್ತೇ ನಿರ್ದೋಷವೇದವಾಕ್ಯಸ್ಯ ನಿರವಕಾಶಯುಕ್ತೇಶ್ಚ ಅಪ್ರಾಮಾಣ್ಯಾಯೋಗಾತ್ ಪ್ರಮಾಣ-ಭೂತೋಭಯಾನ್ಯಥಾನುಪಪತ್ತ್ಯಾ ಮೃದಾದಿಶಬ್ದಾನಾಂ ತದಭಿಮಾನಿಚೇತನಪರತ್ವಸ್ಯಾವಶ್ಯಂ ಕಲ್ಪ್ಯತ್ವಾದಿತ್ಯುಕ್ತತ್ವಾನ್ನ

Rarest Archiver

ಮೃದಾದಿಜಡಸ್ಯೈವ ವಕ್ತೃತ್ವಾದಿನಾ ಚೇತನತ್ವಂ ಕಲ್ಪ್ಯಮಿತಿ ನಿರಸ್ತಮಿತ್ಯರ್ಥಃ ॥ ಅಭ್ಯರ್ಹಿತತ್ವಾದಿತಿ । ನಿತ್ಯಾನಿತ್ಯ-ವಿಭಾಗೇನೇತಿ ವಕ್ಷ್ಯಮಾಣವಿಭಾಗಸ್ಯ ಅಚೇತನವಿಷಯತ್ವಾತ್ ಚೇತನಸ್ಯೋಕ್ತದಿಶಾ ಪ್ರಾಧಾನ್ಯಾದ್ವಾ ಮೋಕ್ಷೋಪ-ಯೋಗಿತ್ವಾದ್ವಾ ಅಭ್ಯರ್ಹಿತತ್ವಮಿತಿ ಭಾವಃ ।

ಚೇತಯತೀತಿ— ಇದು ''ಚಿತೀ ಸಂಜ್ಞಾನೇ'' ಎಂಬ ಧಾತುವಿನಿಂದ ನಿಷ್ಪನ್ನವಾದ ಶಬ್ದ. ಚೇತತೇ ಚೇತಯತಿ ಇತಿ ಚೇತನಃ ಎಂಬುದು ಇದರ ವ್ಯುತ್ಪತ್ತಿ. ಇಲ್ಲಿ ಬಹುಲ ಗ್ರಹಣ ಮಾಡಿರುವುದರಿಂದ ಕರ್ತ್ರರ್ಥದಲ್ಲಿ ಲ್ಯುಟ್-ಪ್ರತ್ಯಯವು ಬಂದಿದೆ. ಚೇತತೇ ಎಂದರೆ ಚೆನ್ನಾಗಿ ತಿಳಿಯುತ್ತದೆ ಎಂದರ್ಥ. ಅಥವಾ ಹೇತುಮತಿ ಎಂಬ ಅರ್ಥ-ದಲ್ಲಿಯೇ ಣಿಚ್‌ಪ್ರತ್ಯಯವು ಬಂದಿದೆ. ಮೊದಲು ಸ್ವಾರ್ಥದಲ್ಲಿ ಣಿಚ್ ಪ್ರತ್ಯಯವನ್ನು ವಿಧಾನ ಮಾಡಲಾಗಿತ್ತು. ಚೇತಯತಿ ಎಂದರೆ ಮತ್ತೊಬ್ಬರಿಗೆ ತಿಳಿಸುತ್ತಾನೆ ಎಂದರ್ಥ.

ಚೇತನಾ – ಇದರ ಸಮಗ್ರವಾದ ರೂಪನಿಷ್ಪತ್ತಿಯ ಪ್ರಕ್ರಿಯೇ— ''ಚಿತೀ ಸಂಜ್ಞಾನೇ'' ಎಂಬ ಧಾತುವಿಗೆ, ಇದು ಣ್ಯಂತವಾದುದರಿಂದ ''ಣ್ಯಾಸಶ್ರಂಥೋಯುಚ್'' ಎಂಬುದರಿಂದ ಣ್ಯಂತವಾದುದರಿಂದ ''ಸ್ತ್ರಿಯಾಂ ಯುಚ್'' ಎಂಬುದರಿಂದ ಸ್ತ್ರೀಲಿಂಗದಲ್ಲಿ ಯುಚ್‌ಪ್ರತ್ಯಯವನ್ನು ವಿಧಾನಿಸಲು ಅನಾದೇಶವಾದ 'ಣಿ' ಪ್ರತ್ಯಯಕ್ಕೆ 'ಅನಿಟ್' ಎಂಬುದರಿಂದ 'ಣಿ' ಲೋಪವಾಗಿ ''ಚೇತನಾ'' ಎಂದು ರೂಪವಾಗಿದೆ. ಇದು ಅರ್ಶ ಆದಿಯಾದುದ-ರಿಂದ ಅಚ್‌ಪ್ರತ್ಯಯವು ಬದಲಾಗಿ ಚೇತನಾ = ಸಂಜ್ಞೆ, ತದ್ವಾನ್= ಅದು ಉಳ್ಳವನಾದುದರಿಂದ ಚೇತನಃ ಎಂದು ರೂಪವಾಗಿದೆ. ಈ ರೀತಿ ಅಲ್ಲದ್ದು ಜ್ಞಾನಹೀನ, ಅಚೇತನ ಎಂದರ್ಥ.

ತೇನೇತಿ— ಈ ರೀತಿ ನಿರ್ವಚನ ಮಾಡಿದುದರಿಂದ ಎಂದರ್ಥ.

ಚೇತನಾರ್ಥಮಿತಿ— ಅದು ಅದೃಷ್ಟದಿಂದ ಜನಿಸಿರುವುದಾಗಿ ಚೇತನದ ಉಪಯೋಗಕ್ಕಾಗಿಯೇ ಇರುತ್ತದೆ ಎಂದು ಭಾವ.

''ಅಥಾತೋ ವಿಭೂತಯೋಽಸ್ಯ ಪುರುಷಸ್ಯ'' ಇವೆಲ್ಲವೂ ಪರಮಪುರುಷನಾದ ವಿಷ್ಣುವಿನ ಸಂಪತ್ತುಗಳು ಎಂಬ ವಚನಾನುಸಾರ ಇವೆಲ್ಲವೂ ಭಗವಂತನ ಭೋಗಕ್ಕಾಗಿಯೇ ಇರುವುವು ಎಂದು ಭಾವ.

ಅಭಿಮಾನ್ಯಧಿಕರಣ ಇತಿ— ''ಓಂ ಅಭಿಮಾನ್ಯಧಿಕರಣಸ್ತು ವಿಶೇಷಾನುಗತಿಭ್ಯಾಮ್ ಓಂ'' ಎಂಬುದು ಬ್ರಹ್ಮಸೂತ್ರ. ಇದು ಯುಕ್ತಿಪಾದದ ತೃತೀಯಾಧಿಕರಣದಲ್ಲಿ ಹೇಳಲ್ಪಟ್ಟಿದೆ. ''ಮಣ್ಣು ಮಾತಾಡಿತು, ನೀರು ಹೇಳಿದವು, ಅದು ತೇಜಸ್ಸನ್ನು ಕಂಡಿತು, ಗಿಡಮರಬಳ್ಳಿಗಳು ಮಾತಾಡಿದವು'' ಎಂಬರ್ಥದ ಶ್ರುತಿವಾಕ್ಯಗಳ ಅರ್ಥವನ್ನು ನಿರ್ಣಯಿಸಲು ಈ ಅಧಿಕರಣವು ಪ್ರವೃತ್ತವಾಗಿದೆ. ಅಲ್ಲಿನ ಪೂರ್ವಪಕ್ಷ: ಮಣ್ಣು ಮುಂತಾದವು ಜಡವಾದುದರಿಂದ ಅವುಗಳಿಗೆ ಮಾತಾಡುವ ಶಕ್ತಿ ಇರುವುದಿಲ್ಲ ಎಂಬುದು ಯುಕ್ತಿ. ಈ ಯುಕ್ತಿಯಿಂದ ವಿರುದ್ಧವಾಗಿ ಪೂರ್ವೋಕ್ತ ವೇದವಾಕ್ಯಗಳಿಗೆ ಅಪ್ರಾಮಾಣ್ಯ ದೋಷವು ಹತ್ತುತ್ತದೆ. ಇದು ಪೂರ್ವಪಕ್ಷ.

ವೇದವಾಕ್ಯಗಳು ನಿರ್ದೋಷ, ಯುಕ್ತಿಗಳು ನಿರವಕಾಶ. ಇವುಗಳಿಗೆ ಅಪ್ರಾಮಾಣ್ಯವು ಸಂಭವಿಸುವುದಿಲ್ಲ. ವೇದಗಳೂ, ಯುಕ್ತಿಗಳೂ ಪರಮ ಪ್ರಮಾಣವಾದುದರಿಂದ ಮಣ್ಣು ಮುಂತಾದ ಶಬ್ದಗಳಿಗೆ ಅವುಗಳ ಅಭಿಮಾನಿ ದೇವತಾಪರವಾಗಿ ಅರ್ಥವನ್ನು ಅವಶ್ಯವಾಗಿ ಕಲ್ಪಿಸಲೇಬೇಕು. ಆದುದರಿಂದ ಮೃತ್ತು ಮುಂತಾದವುಗಳು ಜಡವಾದು-ದರಿಂದ ಅವು ಮಾತನಾಡಿದವು ಎಂದು ಕಲ್ಪಿಸುವುದು ಸರಿಯಲ್ಲ ಎಂದು ಸಿದ್ಧಾಂತಪಡಿಸಲಾಗಿದೆ. ಹೀಗೆ ಅಭಿಮಾ-ನ್ಯಧಿಕರಣದಲ್ಲಿ ನಿರಾಸಗೊಳಿಸಿದ್ದಾರೆ ಎಂದರ್ಥ.

Rarest Archiver

ಅಭ್ಯರ್ಹಿತತ್ವಾದಿತಿ— ಮುಂದೆ ನಿತ್ಯವೆಂತಲೂ ಅನಿತ್ಯವೆಂತಲೂ ಪದಾರ್ಥಗಳನ್ನು ವಿಭಾಗಗೊಳಿಸುವರು. ಅದು ಅಚೇತನದ ಪರವಾಗಿದೆ. ಚೇತನ, ಅಚೇತನಗಳ ಪೈಕಿ ಚೇತನವು ಪ್ರಧಾನವಾದುದರಿಂದಲೂ, ಅದು ಮೋಕ್ಷೋಪಯೋಗಿಯಾದುದರಿಂದಲೂ ಅಭ್ಯರ್ಹಿತವೆಂದಾಗಿದೆ ಎಂದು ಭಾವ.

ಟೀಕಾ—

ಯಥೋದ್ದೇಶಂ ಚೇತನವಿಭಾಗಮಾಹ—

''ದುಃಖಸ್ಪೃಷ್ಟಂ ತದಸ್ಪೃಷ್ಟಮಿತಿ ದ್ವೇಧೈವ ಚೇತನಮ್ ।''

ಕದಾಚಿದ್ದುಃಖಸಂಬದ್ಧಮೇವ ದುಃಖಸ್ಪೃಷ್ಟಮ್ । ಕದಾऽಪಿ ದುಃಖಾಸಂಬದ್ಧಂ ತದಸ್ಪೃಷ್ಟಮ್ । ಕಲ್ಪಿತತ್ವಾದ್ದುಃಖಾದೀನಾಂ ನ ಕಿಂಚಿದ್ದುಃಖಸ್ಪೃಷ್ಟಮಿತ್ಯೇಕೇ । ಈಶ್ವರಾತಿರಿಕ್ತಂ ಸರ್ವಮಪಿ ದುಃಖಸ್ಪೃಷ್ಟಮೇವೇತ್ಯನ್ಯೇ । ತದುಭಯಾನಿರಾಸಾಯೈವಕಾರಃ । ಆದ್ಯಸ್ಯ ಪ್ರತ್ಯಕ್ಷವಿರುದ್ಧತ್ವಾತ್ । ದ್ವಿತೀಯಸ್ಯ ಆಗಮವಿರುದ್ಧತ್ವಾತ್ । ಪರಮೇಶ್ವರಸ್ಯ ದುಃಖಾಸ್ಪೃಷ್ಟತ್ವಂ ಸ್ವಾತಂತ್ರ್ಯೇಣೈವ ಸಿದ್ಧಮ್ ।

ಯದ್ಯಪ್ಯನಯೋರ್ದುಃಖಾಸ್ಪೃಷ್ಟಂ ಚೇತನಂ ಪ್ರಧಾನಮ್ । ತಥಾಪ್ಯಭಾವಸ್ಯ ಭಾವನಿರೂಪ್ಯತ್ವಾತ್ ದುಃಖಸ್ಪೃಷ್ಟಸ್ಯ ಪ್ರಥಮಮುದ್ದೇಶಃ । ತಥಾऽಪಿ ಪ್ರಾಧಾನ್ಯಕ್ರಮಸ್ಯ ಮುಖ್ಯತ್ವಾತ್ ತದನುಸಾರೇಣ ದ್ವೇ ಅಪಿ ನಿರ್ದಿಶತಿ—

''ನಿತ್ಯಾದುಃಖಾ ರಮಾऽನ್ಯೇ ತು ಸ್ಪೃಷ್ಟದುಃಖಾಃ ಸಮಸ್ತಶಃ ।''

ಅನ್ಯೇ ಚೇತನಾಃ । ಏಕೇ ತು ವ್ಯಷ್ಟಿಸಮುಷ್ಟಿಭೇದೇನ ಜೀವಾನ್ ಪರಿಕಲ್ಪ್ಯ ಗರುಡಾನಂತವಿಷ್ವಕ್ಸೇನಾದೀನ್ ಸಮುಷ್ಟಿಜೀವಾನಪಿ ನಿತ್ಯಾದುಃಖಾನಾಚಕ್ಷತೇ । ತನ್ನಿರಾಸಾಯ ಸಮಸ್ತಶ ಇತ್ಯುಕ್ತಮ್ । ಅತ್ರಾಗಮಾನಾಂ ಪ್ರಾಮಾಣ್ಯಮ್ । ಅತ ಏವ ದುಃಖಾಸ್ಪೃಷ್ಟೇ ಪ್ರಭೇದಾಭಾವಾತ್ ದುಃಖಸ್ಪೃಷ್ಟಾಪೇಕ್ಷಯೈವ ಧಾಪ್ರತ್ಯಯಃ ।

ಚೇತನರಲ್ಲಿ ಎಷ್ಟು ವಿಧ ?

ಚೇತನ ವಸ್ತುಗಳಲ್ಲಿ ದುಃಖ ಸಂಬಂಧವುಳ್ಳದ್ದು, ದುಃಖ ಸಂಬಂಧ ರಹಿತವಾದದ್ದು ಎಂದು ಎರಡೇ ವಿಧಗಳಿವೆ. ದುಃಖ ಸಂಬಂಧವುಳ್ಳದ್ದು ಎಂದರೆ; ಯಾವಾಗಲಾದರೊಮ್ಮೆ ದುಃಖದ ಸಂಬಂಧ ಹೊಂದುವುದು ಎಂದರ್ಥ. ಯಾವಾಗಲೂ ದುಃಖವಿರಲೇ ಬೇಕೆಂಬ ನಿಯಮವಿಲ್ಲವೆಂದು ತಾತ್ಪರ್ಯ. ದುಃಖಸಂಬಂಧರಹಿತವಾದದ್ದು ಎಂದರೆ; ಯಾವಾಗಲಾದರೊಮ್ಮೆಯೂ ಕೂಡ ದುಃಖದ ಸಂಬಂಧವೇ ಆಗದಿರುವುದು, ಎಂದರ್ಥ.

ದುಃಖ ಮುಂತಾದವು ಕಲ್ಪಿತವಲ್ಲ - ಕೆಲವರು ಹೀಗೆ ಹೇಳುತ್ತಾರೆ

''ದುಃಖ ಮುಂತಾದವು ಕಲ್ಪಿತ, ಎಂದರೆ ಮಿಥ್ಯೆ. ಆದ್ದರಿಂದ ಯಾವ ವಸ್ತುವೂ ದುಃಖಕ್ಕೆ ಗುರಿಯಾಗುವುದಿಲ್ಲವಾದುದರಿಂದ ಯಾವುದೂ ದುಃಖಸ್ಪೃಷ್ಟವಲ್ಲ.'' ಮತ್ತೆ ಕೆಲವರು,

Rarest Archiver

''ಈಶ್ವರನನ್ನು ಬಿಟ್ಟರೆ ಇರುವ ವಸ್ತುಗಳೆಲ್ಲ ದುಃಖ ಸಂಬಂಧವುಳ್ಳದ್ದೇ ಆಗಿವೆ.'' ಎನ್ನುತ್ತಾರೆ. ಅವೆರಡು ಮತಗಳನ್ನೂ ನಿರಾಕರಿಸಲು ಮೂಲದಲ್ಲಿ ಏವಕಾರವನ್ನು ಪ್ರಯೋಗಿಸಿದ್ದಾರೆ. ಇದರಿಂದ ತಮ್ಮ ಮತವೆ ಪ್ರಾಮಾಣಿಕ. ಅವೆರಡೂ ಸರಿಯಲ್ಲವೆಂಬುದು ಸೂಚಿತವಾಗುತ್ತದೆ. ಹೇಗೆಂದರೆ, ''ದುಃಖವುಂಟಾಗುವುದು ಮಿಥ್ಯೆ'' ಎಂಬ ವಾದವು ಪ್ರತ್ಯಕ್ಷ ಪ್ರಮಾಣಕ್ಕೆ ವಿರುದ್ಧವಾಗಿದೆ. ದುಃಖಾನುಭವವು ಜೀವರಿಗೆ ಉಂಟಾಗುವುದರಿಂದ. ಇನ್ನು ಎರಡನೆಯ ಈಶ್ವರಾತಿರಿಕ್ತವಾದ ಸರ್ವಕ್ಕೂ ದುಃಖಸಂಬಂಧವುಂಟು, ಎಂಬ ವಾದವು ವೇದಾಗಮಶಾಸ್ತ್ರಗಳಿಗೆ ವಿರುದ್ಧವಾಗಿದೆ. ಪರಮೇಶ್ವರನಿಗೆ ದುಃಖಸಂಬಂಧವಿಲ್ಲವೆಂಬುದು ಅವನಲ್ಲಿರುವ ಸ್ವಾತಂತ್ರ್ಯವೆಂಬ ಗುಣದಿಂದಲೇ ಸಿದ್ಧವಾಗುತ್ತದೆ.

ಹೀಗೆ ದುಃಖಸಂಬಂಧವುಳ್ಳದ್ದು, ಅದರಿಂದ ರಹಿತವಾದದ್ದು ಎಂಬ ಎರಡು ವಸ್ತುಗಳಲ್ಲಿ ದುಃಖಸಂಬಂಧ ರಹಿತವಾದ ಚೇತನವೇ ಪ್ರಧಾನವಾಗಿದ್ದಾಗ್ಯೂ ಅಭಾವವಸ್ತುವನ್ನು ನಿರೂಪಿಸಬೇಕಾದರೆ ಭಾವವಸ್ತುವಿನ ಮೂಲಕವಾಗಿಯೇ ಸಾಧ್ಯವಾದುದರಿಂದ ದುಃಖಸಂಬಂಧವುಳ್ಳ ಚೇತನವನ್ನೆ ಮೊದಲು ಉದ್ದೇಶಗೊಳಿಸಿದ್ದಾರೆ. ಹಾಗಿದ್ದಾಗ್ಯೂ ನಿರ್ದೇಶ ಕ್ರಮಕ್ಕಿಂತಲೂ ಪ್ರಾಧಾನ್ಯಕ್ರಮವೇ ಅತಿ ಮುಖ್ಯವಾದುದರಿಂದ ಅದರ ಪ್ರಕಾರವಾಗಿ ''ದುಃಖಸ್ಪೃಷ್ಟ ತದಸ್ಪೃಷ್ಟ''ಗಳೆಂಬ ಎರಡು ತತ್ತ್ವಗಳನ್ನೂ ಸಮಕಾಲದಲ್ಲಿಯೆ ನಿರ್ದೇಶಗೊಳಿಸಿದ್ದಾರೆ.

ನಿತ್ಯದುಃಖರಹಿತರು ಯಾರು ?

ಶ್ರೀ ರಮಾದೇವಿಯರು ನಿತ್ಯವಾಗಿಯೂ ದುಃಖಸಂಬಂದದಿಂದ ರಹಿತರು. ಎಂದರೆ ಅವರಿಗೆ ಯಾವಾಗಲೂ ದುಃಖದ ಸಂಬಂಧವೇ ಇರದು. ರಮಾನಾರಾಯಣರಿಂದ ಭಿನ್ನರಾದ ಸಮಸ್ತ ಜೀವರೂ ದುಃಖಸಂಬಂಧವುಳ್ಳವರು 'ಅನ್ಯೇ' ಎಂದರೆ ಇತರ ಚೇತನರು.

ಕೆಲವರಮತ-ನಿರಾಕರಣ

ಕೆಲವರು ಬ್ರಹ್ಮಾದಿ ದೇವತೆಗಳಲ್ಲಿ ಪ್ರತ್ಯೇಕವಾಗಿ ವ್ಯಷ್ಟಿಯೆಂತಲೂ ಸಮಷ್ಟಿಯೆಂತಲೂ ಭೇದಗಳನ್ನು ಪರಿಕಲ್ಪಿಸಿ ಗರುಡ, ಅನಂತ, ವಿಷ್ವಕ್ಸೇನ ಮುಂತಾದ ದೇವತೆಗಳನ್ನು ಸಮಷ್ಟಿಯಲ್ಲಿ ಸೇರಿಸಿ ಇವರು ನಿತ್ಯವಾಗಿಯೂ ದುಃಖಸಂಬಂಧರಹಿತರು ಎಂದು ವಾದಿಸುತ್ತಾರೆ. (ವ್ಯಷ್ಟಿ = ಗುಂಪಿನಿಂದ ಬೇರೆಯಾದ ಒಂದು ವ್ಯಕ್ತಿ. ಸಮಷ್ಟಿ = ವ್ಯಕ್ತಿಗಳ ಒಟ್ಟಾಗಿರುವಿಕೆ) ಅದನ್ನು ನಿರಾಸಗೊಳಿಸಲು ಮೂಲದಲ್ಲಿ 'ಸಮಸ್ತಶಃ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಈ ವಿಷಯದಲ್ಲಿ ವೇದಾಗಮಗಳೆ ಪ್ರಮಾಣ. ಆದ್ದರಿಂದ ದುಃಖಸ್ಪರ್ಶದಿಂದ ರಹಿತರಾದವರಲ್ಲಿ ಒಳ ಪ್ರಭೇದಗಳಿಲ್ಲವಾದುದರಿಂದಲೆ ದುಃಖಸಂಬಂಧವುಳ್ಳ ಜೀವರಿಗಿಂತಲೂ ವಿಶೇಷ ಪ್ರದರ್ಶನ ಮಾಡುವುದರಸಲುವಾಗಿಯೇ ಮೂಲದಲ್ಲಿ 'ಧಾ' ಪ್ರತ್ಯಯವನ್ನು ಪ್ರಯೋಗಿಸಿದ್ದಾರೆ. ಇದರ ಬಗ್ಗೆ ಪೂರ್ವದಲ್ಲಿ ಪ್ರಯೋಗಿಸಿರುವುದನ್ನು ಗಮನಿಸಬೇಕು. ಅಲ್ಲಿ 'ದ್ವಿವಿಧಂ' ಎಂಬುದಕ್ಕೂ 'ಧಾ ಪ್ರತ್ಯಯಕ್ಕೂ ಇರುವ ಅರ್ಥವ್ಯತ್ಯಾಸವನ್ನು ವಿವೇಚಿಸಿದ್ದಾರೆ. ಅದರಿಂದ ತತ್ವಗಳಲ್ಲಿ ಎರಡೇ ವಿಭಾಗಗಳಿವೆಯೆ ಹೊರತು ಈ ಸಂಖ್ಯೆಯಲ್ಲಿ ಕಡಿಮೆಯಾಗಲಿ, ಹೆಚ್ಚಾಗಲಿ, ಇರುವುದಿಲ್ಲವೆಂಬುದು ಸೂಚಿತವಾಗಿದೆ. ಇದರಿಂದ 'ದುಃಖಸ್ಪೃಷ್ಟ' ವಸ್ತುವಿಗಿಂತಲೂ 'ದುಃಖಾಸ್ಪೃಷ್ಟ' ವಸ್ತುವಿನಲ್ಲಿ ವೈಶಿಷ್ಟ್ಯವಿದೆ ಎಂಬುದು ಸೂಚಿತವಾಗುತ್ತದೆ. ಆದುದರಿಂದಲೇ ಇದರಲ್ಲಿ ಎರಡು ವಿಧಗಳಿವೆಯೆಂದು ಹೇಳಿದರು.

Rarest Archiver

ಭಾವದೀಪ—

ಆಗಮೇತಿ । ತತ್ತ್ವವಿವೇಕರೂಪಾಗಮೇತ್ಯರ್ಥಃ । ''ನಿತ್ಯಾನಂದಜ್ಞಾನಬಲಾ ದೇವಾಃ ನೈವಂ ತು ದಾನವಾಃ'' ಇತ್ಯಾದ್ಯಾಗಮೇತಿ ವಾರ್ಥಃ । ಯದ್ವಾ ''ದ್ವೌ ವಾವ ಸೃತ್ಯನುಪಕ್ರಮೌ ಪ್ರಕೃತಿಶ್ಚ ಪರಮಶ್ಚ ದ್ವಾವೇತೌ ನಿತ್ಯಮುಕ್ತೌ'' ಇತ್ಯಾದ್ಯಾಗಮೇತ್ಯರ್ಥಃ ।

ಅತ್ರ ಚೇತಿ । ಶ್ರೀಶ್ರೀಪತಿಭ್ಯಾಂ ಅನ್ಯೇ ಜೀವಾಃ ಸ್ಪೃಷ್ಟದುಃಖಾ ಇತ್ಯತ್ರ ''ಅತೋಽನ್ಯದಾರ್ತಂ'', ''ಜೀವಾ ಏವ ತು ದುಃಖಿನಃ'' ಇತ್ಯಾದ್ಯಾಗಮಾನಾಂ ಪ್ರಾಮಾಣ್ಯಂ ಧ್ಯೇಯಮಿತ್ಯರ್ಥಃ । ಅತ ಏವೇತ್ಯಸ್ಯ ವಿವರಣಂ ದುಃಖಾಸ್ಪೃಷ್ಟೇ ಪ್ರಭೇದಾಭಾವಾದಿತಿ । ಸರ್ವಸ್ಯ ಸ್ಪೃಷ್ಟದುಃಖತ್ವಾದೇವೇತಿ ವಾರ್ಥಃ । ಸಂಖ್ಯಾಯಾಃ ವಿಧಾರ್ಥೇ ಧಾ ಇತ್ಯುಕ್ತ ಧಾ ಪ್ರತ್ಯಯಸ್ಯ ದುಃಖಸ್ಪೃಷ್ಟಂ ತದಸ್ಪೃಷ್ಟಮಿತಿ ದ್ವೇಧೈವ ಚೇತನಮಿತ್ಯತ್ರೋಕ್ತೇರಿತಿ ಭಾವಃ ॥ ಅತ ಏವೇತಿ । ಧಾ ಪ್ರತ್ಯಯೇ ಅವಾಂತರಭೇದಸ್ಯ ಸೂಚನಾದೇವೇತ್ಯರ್ಥಃ ।

ಆಗಮೇತಿ— ಆಗಮಗಳಿಗೆ ವಿರೋಧ ಬರುತ್ತದೆ ಎಂದು ಹೇಳಲಾಗಿದೆ. ಅವು ಯಾವುವೆಂಬುದನ್ನು ತಿಳಿಸುತ್ತಾರೆ. ತತ್ತ್ವವಿವೇಕ ರೂಪದ ಆಗಮ, ನಿತ್ಯ ಆನಂದ ಜ್ಞಾನ ಬಲವಂತರು ಧೇವತೆಗಳು, ದಾನವರು ಇಂಥವರಲ್ಲ. ಮುಂತಾದ ಆಗಮಗಳು, ಎಂದರ್ಥ. ಅಥವಾ ಪ್ರಕೃತಿ, ಪರಮ ಎಂದು ಸೃಷ್ಟಿಯ ಉಪಕ್ರಮವು ಎರಡುವಿಧ. ಇವರಿಬ್ಬರೂ ನಿತ್ಯಮುಕ್ತರು ಇತ್ಯಾದಿ ಆಗಮಗಳು ಎಂದರ್ಥ.

ಅತ್ರ ಚೇತಿ— ಲಕ್ಷ್ಮೀದೇವಿ, ಲಕ್ಷ್ಮೀಪತಿ ಇವರಿಂದ ಅನ್ಯರಾದ ಜೀವರು ದುಃಖಸಂಬಂಧವುಳ್ಳವರು ಎಂಬ ವಿಷಯದಲ್ಲಿ ''ಅತೋಽನ್ಯದಾರ್ತಂ, ಜೀವಾ ಏವ ತು ದುಃಖಿನಃ'' = ''ಪರಮಾತ್ಮನಿಂದ ಅನ್ಯರು ದುಃಖವುಳ್ಳವರು, ಜೀವರೇ ದುಃಖಸಂಬಂಧವುಳ್ಳವರು'' ಇತ್ಯಾದಿ ಆಗಮಗಳಿಗೆ ಪ್ರಾಮಾಣ್ಯವಿದೆ ಎಂದು ಮನಗಾಣಬೇಕು. ದುಃಖಸಂಬಂಧವಿಲ್ಲದವರಲ್ಲಿ ಪ್ರಭೇದಗಳಿಲ್ಲ ಎಂಬುದು ''ಅತ ಏವ'' ಎಂಬುದರ ವಿವರಣೆ. ಅಥವಾ ಸರ್ವವೂ ದುಃಖಸಂಬಂಧವುಳ್ಳದ್ದಾದ್ದರಿಂದಲೇ ದುಃಖಾಸ್ಪೃಷ್ಟರಲ್ಲಿ ಪ್ರಭೇದಗಳಿಲ್ಲವೆಂದರ್ಥ. ಸಂಖ್ಯೆಯ ವಿಧ ಎಂಬರ್ಥದಲ್ಲಿ ಧಾ ಪ್ರತ್ಯಯವನ್ನು ವಿಧಾನಿಸಲಾಗಿದೆ. ಚೇತನರಲ್ಲಿ ದುಃಖಸ್ಪೃಷ್ಟರೆಂತಲೂ ದುಃಖಾಸ್ಪೃಷ್ಟರೆತಲೂ ಎರಡೇ ವಿಧಗಳು ಎಂಬಲ್ಲಿ ಧಾ ಪ್ರತ್ಯಯಾಂತ ದ್ವೇಧಾ ಎಂಬ ಪದವನ್ನು ಪ್ರಯೋಗಿಸಿದ್ದಾರೆಂದು ಭಾವ.

ಅತ ಏವೇತಿ— ಧಾ ಪ್ರತ್ಯಯವು ಅವಾಂತರಭೇದವನ್ನು ಸೂಚಿಸುತ್ತಿರುವುದರಿಂದಲೇ ಚೇತನರ ವಿಭಾಗವನ್ನು ತಿಳಿಸಿದರು ಎಂಬರ್ಥ.

ಟೀಕಾ—

ಅತ ಏವ ತದ್ವಿಭಾಗಮಾಹ—

''ಸ್ಪೃಷ್ಟದುಃಖಾ ವಿಮುಕ್ತಾಶ್ಚ ದುಃಖಸಂಸ್ಥಾ ಇತಿ ದ್ವಿಧಾ ।''

ವಿಮುಕ್ತಾಃ ದುಃಖಾತ್ । ದುಃಖಸಂಸ್ಥಾ ಇತ್ಯತಃ ಪರಂ ಯೋಜ್ಯಃ । ಅತ್ರ ಪ್ರಾಧಾನ್ಯಕ್ರಮೇಣೋದ್ದೇಶಃ ।

ದುಃಖಸಂಸ್ಥಾನಾಂ ಪ್ರಭೇದಮಾಹ—

Rarest Archiver

''ದುಃಖಸಂಸ್ಥಾ ಮುಕ್ತಿಯೋಗ್ಯಾ ಅಯೋಗ್ಯಾ ಇತಿ ಚ ದ್ವಿಧಾ ।''

ಅಯೋಗ್ಯಾ ಮುಕ್ತೇಃ । ಅಯೋಗ್ಯಾ ಇತ್ಯತಃ ಪರಂ ಚಶಬ್ದೋ ಜ್ಞಾತವ್ಯಃ । ಅತ್ರಾಪಿ ತದೇವೋದ್ದೇಶಕ್ರಮೋ ನಿಮಿತ್ತಮ್ ।

ನನು ಚ ಪ್ರಾಧಾನ್ಯಾದ್ವಿಮುಕ್ತಭೇದಃ ಪ್ರಥಮಂ ವಕ್ತವ್ಯಃ । ಸತ್ಯಂ, ಯೋಗ್ಯಾಯೋಗ್ಯಭೇದಸ್ಯ ದುಃಖಸಂಸ್ಥೇಷ್ವೇವ ಭಾವಾತ್, ತದಭಿಧಾನಾನಂತರಂ ಮುಕ್ತಿಯೋಗ್ಯಭೇದಕಥನಸ್ಯ ಸೌಕರ್ಯಾತ್ ಕ್ರಮೋಲ್ಲಂಘನಮ್ ।

ಇದಾನೀಂ ಮುಕ್ತಾನಾಂ ಪ್ರಭೇದಮಾಹ—

''ದೇವರ್ಷಿಪಿತೃಪನರಾ ಇತಿ ಮುಕ್ತಾಸ್ತು ಪಂಚಧಾ ।''

ಪಾಂತೀತಿ ಪಾಃ ಚಕ್ರವರ್ತಿನಃ । ನರಾ ಮನುಷ್ಯೋತ್ತಮಾಃ । ತುಶಬ್ದೋಽವಧಾರಣೇ । ತೇನ ಯೇ ಮೋಕ್ಷೇ ತಾರತಮ್ಯಂ ನ ಮನ್ಯಂತೇ ತನ್ಮತಂ ನಿರಾಚಷ್ಟೇ । ಗಂಧರ್ವಾದೀನಾಂ ಕೇಷಾಂಚಿದೇಷ್ವೇವಾಂತರ್ಭಾವಾತ್ ಕೇಷಾಂಚಿದವಿವಕ್ಷಿತತ್ವಾತ್ ನ ಗ್ರಂಥಾಂತರವಿರೋಧಃ ।

ದುಃಖಸಂಸ್ಥಾ ಮುಕ್ತಿಯೋಗ್ಯಾಯೋಗ್ಯಭೇದಾತ್ ದ್ವಿಧೇತ್ಯುಕ್ತಮ್ । ತತ್ರ ಮುಕ್ತಪ್ರಭೇದಂ ಯೋಗ್ಯೇಷ್ವತಿದಿಶತಿ—

''ಏವಂ ವಿಮುಕ್ತಿಯೋಗ್ಯಾಶ್ಚ .... ।''

ದೇವರ್ಷ್ಯಾದಿಭೇದೇನ ಪಂಚಧಾ ಇತ್ಯಸ್ಯ ಅನುಕರ್ಷಣಾರ್ಥಶ್ಚಕಾರಃ । ಮುಕ್ತ್ಯಯೋಗ್ಯವಿಭಾಗಮಾಹ—

''........................... ತಮೋಗಾಃ ಸೃತಿಸಂಸ್ಥಿತಾಃ ।
ಇತಿ ದ್ವಿಧಾ ಮುಕ್ತ್ಯಯೋಗ್ಯಾಃ .... ।''

ತಮೋಗಾಃ ತಮೋಯೋಗ್ಯಾಃ । ನ ತು ಪ್ರಾಪ್ತತಮಸಃ । ವಕ್ಷ್ಯಮಾಣವಿಭಾಗವಿರೋಧಾತ್ । ಸೃತಿಸಂಸ್ಥಿತಾಃ ನಿತ್ಯಸಂಸಾರಿಣಃ । ಅಯೋಗ್ಯತಾತಿಶಯಾನುಸಾರೇಣೋದ್ದೇಶಃ ।

ದುಃಖ ಸಂಬಂಧವುಳ್ಳವರಲ್ಲಿ ಪ್ರಭೇದ

ದುಃಖಸಂಬಂಧವುಳ್ಳ ಜೀವರಲ್ಲಿ ವಿಮುಕ್ತರೆಂತಲೂ ದುಃಖಪಡುವಸ್ಥಿತಿಯಲ್ಲಿರುವವರೆಂತಲೂ ಎರಡು ವಿಧ. ಮುಕ್ತರೂ ಎಂದರೆ ಬಿಡುಗಡೆ ಹೊಂದಿದವರು. ಯಾವುದರಿಂದ ? ದುಃಖದಿಂದ. ದುಃಖಸಂಸ್ಥರು ಎಂದರೆ; ದುಃಖದಲ್ಲಿ ವರ್ತಮಾನರಾದವರು. ಮೂಲದಲ್ಲಿನ 'ಚ' ಶಬ್ದವನ್ನು 'ದುಃಖಸಂಸ್ಥಾಃ' ಎಂಬುದರ ಪರದಲ್ಲಿ ಅನ್ವಯಿಸಬೇಕು. ಹಾಗೆ ಮಾಡದೆ ಯಥಾಶ್ರುತವಾಗಿ ಅನ್ವಯಿಸಿಕೊಂಡರೆ ''ಸ್ಪೃಷ್ಟದುಃಖರೆಂತಲೂ, ವಿಮುಕ್ತ-

Rarest Archive

ರೆಂತಲೂ ದುಃಖಸಂಸ್ಥರಲ್ಲಿ ಎರಡು ವಿಧಗಳಿವೆ'' ಎಂಬ ಅನಿಶ್ಚಿತಾರ್ಥವುಂಟಾಗುತ್ತದೆ. ಆದುದರಿಂದ ಚಕಾರವನ್ನು ಪೂರ್ವೋಕ್ತರೀತ್ಯಾ ಅನ್ವಯಿಸಿಕೊಳ್ಳಬೇಕು. ಇಲ್ಲಿ ಪ್ರಾಧಾನ್ಯಕ್ರಮವನ್ನು ಅನುಸರಿಸಿ ಉದ್ದೇಶಗೊಳಿಸಲಾಗಿದೆ.

ದುಃಖದಲ್ಲಿ ಪ್ರವರ್ತಿಸುವವರ (ದುಃಖಸಂಸ್ಥ) ಪ್ರಭೇದಗಳನ್ನು ಹೇಳುವರು.

ದುಃಖಸಂಸ್ಥರಲ್ಲಿ ಎಷ್ಟು ವಿಧ ?

ದುಃಖಸಂಸ್ಥರಲ್ಲಿ (ದುಃಖದಲ್ಲಿ ಪ್ರವರ್ತಿಸುವವರು) ಮುಕ್ತಿಗೆ ಯೋಗ್ಯರೆಂತಲೂ, ಅಯೋಗ್ಯರೆಂತಲೂ ಎರಡು ವಿಧ. ಅಯೋಗ್ಯರೆಂದರೆ ಮುಕ್ತಿಗೆ (ದುಃಖದಿಂದ ಬಿಡುಗಡೆ) ಆಯೋಗ್ಯರು ಎಂದರ್ಥ. 'ಅಯೋಗ್ಯಾಃ' ಎಂಬುದರ ಪರದಲ್ಲಿ 'ಚ' ಶಬ್ದವನ್ನು ಅನ್ವಯಿಸಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಪೂರ್ವದಂತೆ ಅನೀಪ್ಸಿತವಾದ ಅರ್ಥ ಉಂಟಾಗುವುದು. ಇಲ್ಲಿಯೂ ಸಹ ಪ್ರಾಧಾನ್ಯ ಕ್ರಮವನ್ನು ಅನುಸರಿಸಿಯೇ ಉದ್ದೇಶಗೊಳಿಸಲಾಗಿದೆ. ಹಾಗೆ ಪ್ರಾಧಾನ್ಯ ಕ್ರಮವನ್ನು ಅನುಸರಿಸಿರುವುದಾಗಿದ್ದರೆ ವಿಮುಕ್ತರ ಪ್ರಭೇದವನ್ನು ಮೊದಲು ಹೇಳಬೇಕಾಗಿತ್ತು. ಹಾಗೇಕೆ ಮಾಡಲಿಲ್ಲ ?

ಎಂದರೆ; ನಿಜ, ದುಃಖಸಂಸ್ಥರಲ್ಲಿಯೆ ಯೋಗ್ಯರೆಂತಲೂ, ಅಯೋಗ್ಯರೆಂತಲೂ ಎರಡು ಭೇದಗಳಿರುವು- ದರಿಂದ ಅದನ್ನು ಹೇಳಿದ ನಂತರವೇ ಮುಕ್ತಿಯೋಗ್ಯರ ಭೇದ ಹೇಳುವುದು ಸೌಕರ್ಯವಾಗುವುದರಿಂದ ಕ್ರಮೋಲ್ಲಂಘನ ಮಾಡಿ ಹೇಳಿರುವರೆಂದು ಗಮನಿಸಬೇಕು.

ಮುಕ್ತರಲ್ಲಿ ಎಷ್ಟು ವಿಧ ?

ದೇವತೆಗಳು, ಋಷಿಗಳು, ಪಿತೃಗಳು, ಚಕ್ರವರ್ತಿಗಳು, ಮನುಷ್ಯೋತ್ತಮರು ಎಂಬುದಾಗಿ ಮುಕ್ತರಲ್ಲಿ ಐದು ವಿಧದವರಿದ್ದಾರೆ. 'ಪಾಂತೀತಿ ಪಾಃ' ಎಂದರೆ ರಕ್ಷಿಸುವವರೆಂದು ಚಕ್ರವರ್ತಿಗಳಿಗೆ ಹೆಸರು. 'ನರಾಃ' ಎಂದರೆ ಮನುಷ್ಯೋತ್ತಮರು (ಮಾನವರಲ್ಲಿ ಶ್ರೇಷ್ಠರು) ಮೂಲದಲ್ಲಿನ 'ತು' ಶಬ್ದಕ್ಕೆ ಅವಧಾರಣ ಎಂದರ್ಥ. ದೃಢಪಡಿಸುವಿಕೆ ಸಿದ್ಧಾಂತಾಭಿಪ್ರಾಯವನ್ನು ದೃಢಪಡಿಸಿ ಅನ್ಯಾಭಿಪ್ರಾಯವನ್ನು ನಿರಸನಗೊಳಿಸುವಿಕೆ ಎಂಬರ್ಥದಲ್ಲಿಯೂ ಇದೆ.

ಇದರಿಂದ ಯಾವ ದಾರ್ಶನಿಕರು ಮೋಕ್ಷದಲ್ಲಿ ತಾರತಮ್ಯವನ್ನು ಒಪ್ಪುವುದಿಲ್ಲವೊ ಅವರ ಮತವನ್ನು ನಿರಾಕರಿಸಿದ ಸೂಚನೆ ಕಂಡು ಬರುತ್ತದೆ. ದೇವತೆಗಳ ಗುಂಪಿಗೆ ಸೇರುವ ಕೆಲವು ಗಂಧರ್ವರೂ ಮತ್ತಿತರ ದೇವತೆಗಳೂ ಇವರಲ್ಲಿಯೆ ಸೇರ್ಪಡೆ ಹೊಂದಿರುವುದರಿಂದಲೂ, ಮತ್ತೆ ಕೆಲವರು ವಿವಕ್ಷಿತರಲ್ಲದಿರುವುದರಿಂದಲೂ ಇತರ ಗ್ರಂಥಗಳಿಂದ ಬರತಕ್ಕ ವಿರೋಧವು ಇದಕ್ಕೆ ಹತ್ತುವುದಿಲ್ಲ.

ದುಃಖಸಂಸ್ಥರಲ್ಲಿ ಮುಕ್ತಿಯೋಗ್ಯರೆಂತಲೂ, ಅಯೋಗ್ಯರೆಂತಲೂ ಎರಡು ವಿಧಗಳಿವೆ ಎಂದು ಹೇಳಲಾಗಿತ್ತು. ಅದರಲ್ಲಿ ಮುಕ್ತರ ಪ್ರಬೇದಗಳನ್ನು ಮುಕ್ತಿಯೋಗ್ಯರಲ್ಲಿ ಅತಿದೇಶ ಮಾಡುತ್ತಾರೆ. ಅತಿದೇಶವೆಂದರೆ; ಸ್ಥಳಾಂತರ- ಗೊಳಿಸುವುದು ಎಂದರ್ಥ. ಅಥವಾ ಬೇರೆ ಕಡೆಗೆ ಅನ್ವಯಿಸುವುದು ಹೇಗೆಂದರೆ; ಮುಕ್ತಿಯೋಗ್ಯರು, ಅಯೋಗ್ಯರು, ಎಂದು ಹೇಳಿದಾಗ ವಿಮುಕ್ತರ ಲಕ್ಷಣವನ್ನು ಸೂಚಿಸಿದರೆ ಯೋಗ್ಯಾಯೋಗ್ಯರಿಬ್ಬರಿಗೂ ಅದು ಅನ್ವಯಿಸುತ್ತದೆ. ಅದನ್ನು ಪರಿಹರಿಸಿ ಮುಕ್ತಿಯೋಗ್ಯರಲ್ಲಿ ಮಾತ್ರವೇ ವಿಮುಕ್ತರ ಪ್ರಭೇದವನ್ನು ಅನ್ವಯಿಸುವಂತೆ ಹೇಳುವುದು ಎಂದರ್ಥ.

Rarest Archiver

ಮುಕ್ತಿಗೆ ಅಯೋಗ್ಯರಲ್ಲಿ ಎಷ್ಟು ವಿಧ ?

ಈ ಪ್ರಕಾರ ಮುಕ್ತಿಯೋಗ್ಯರ ವಿಷಯವನ್ನು ಹೇಳಿದ್ದಾಯಿತು. ಇನ್ನು ಮುಕ್ತಿಗೆ ಅಯೋಗ್ಯರ ವಿಷಯವನ್ನು ಹೇಳಲಾಗುತ್ತದೆ. ಮುಕ್ತಿಗೆ ಅಯೋಗ್ಯರಲ್ಲಿ ತಮಸ್ಸಿಗೆ ಹೋಗುವವರು, ಸಂಸಾರದಲ್ಲಿರುವವರು ಎಂದು ಎರಡು ವಿಧದವರಿದ್ದಾರೆ.

ಭಾವದೀಪ—

ಅತ್ರಾಪಿ ತದೇವೇತಿ । ಪ್ರಾಧಾನ್ಯಮೇವೇತ್ಯರ್ಥಃ । ದುಃಖಸಂಸ್ಥೇಷ್ವೇವೇತಿ । ನ ತು ಮುಕ್ತೇಷ್ವಿತಿ ಭಾವಃ । ಯೋಗ್ಯತಾಯಾಃ ಸ್ವಭಾವತ್ವೇನ ಮುಕ್ತೇಷ್ವಪಿ ಮುಕ್ತಿಯೋಗ್ಯತಾಯಾಃ ಸತ್ವಾತ್ ಮುಕ್ತಿಯೋಗ್ಯಭೇದಕಥನಸ್ಯೇತ್ಯುಕ್ತೌ ಅವಿರೋಧಃ । ಯದ್ವಾ ಏವಂ ವಿಮುಕ್ತಿಯೋಗ್ಯಾ ಇತ್ಯೇತದಭಿಪ್ರಾಯಮಿದಮ್ ।

ಪಾಂತೀತಿ ಪಾ ಇತಿ । ಪಾ ರಕ್ಷಣೇ ಪಚಾದ್ಯಚ್ ಆತೋ ಲೋಪ ಇಟಿ ಚೇತ್ಯಕಾರಲೋಪಃ ॥ ಕೇಷಾಂಚಿದಿತಿ । ದೇವಗಂಧರ್ವಾಣಾಂ ಕರ್ಮಜಾಜಾನಜದೇವಾನಾಂ ಚೇತ್ಯರ್ಥಃ । ಕೇಷಾಂಚಿದಿತಿ । ಮನುಷ್ಯಗಂಧರ್ವಾ-(ದೀನಾಮಿ)ಣಾಮಿತ್ಯರ್ಥಃ ॥ ಗ್ರಂಥಾಂತರೇತಿ । ತೈತ್ತಿರೀಯಾದಿಗ್ರಂಥಾಂತರೇತ್ಯರ್ಥಃ ।

ವಕ್ಷ್ಯಮಾಣೇತಿ । ದೈತ್ಯೇತ್ಯಾದಿವಕ್ಷ್ಯಮಾಣೇತ್ಯರ್ಥಃ ॥ ಅಯೋಗ್ಯತೇತಿ । ಮುಕ್ತಿತತ್ಸಾಧನಾದಾವಯೋಗ್ಯತಾತಿಶಯೇತ್ಯರ್ಥಃ ॥ ಸ ಚಾನ್ಯತ್ರೋದಾಹೃತ ಇತಿ । ''ಪ್ರಜಾ ಹಿ ತಿಸ್ರೋ ಅತ್ಯಾಯಮೀಯುಃ'' ಇತ್ಯೈತರೇಯಭಾಷ್ಯೇ । ತಥಾ ತೃತೀಯಸ್ಕಂಧೇ ಏಕಾದಶತಾತ್ಪರ್ಯೇ ಚ । ''ಜಾತಾತಿಕೃಷ್ಣಾ ತದ್ದೇಹಾದ್ದೈತ್ಯರಕ್ಷಃಪಿಶಾಚಕಾಃ'' ಇತ್ಯುದಾಹೃತ ಇತ್ಯರ್ಥಃ ।

ಅತ್ರಾಪಿ ತದೇವೇತಿ— ಇಲ್ಲಿಯೂ ಪ್ರಾಧಾನ್ಯಕ್ರಮವನ್ನೇ ಅನುಸರಿಸಲಾಗಿದೆ ಎಂದರ್ಥ.

ದುಃಖಸಂಸ್ಥೇಷ್ವೇವೇತಿ— ಯೋಗ್ಯಾಯೋಗ್ಯಭೇದವು ದುಃಖಸಂಸ್ಥರಲ್ಲಿ ಮಾತ್ರವೇ ಇರುತ್ತದೆ, ಮುಕ್ತರಲ್ಲಿ ಇರುವುದಿಲ್ಲ ಎಂದು ಭಾವ. ಯೋಗ್ಯತೆಯೆಂಬುದು ಚೇತನರ ಸ್ವಭಾವ. ಅದು ಮುಕ್ತಿಯೋಗ್ಯರಲ್ಲಿ ಇರುವಂತೆ ಮುಕ್ತರಲ್ಲಿಯೂ ಇರುತ್ತದೆ. ಆದುದರಿಂದ ಮುಕ್ತಿಯೋಗ್ಯರ ಪ್ರಭೇದವನ್ನು ಹೇಳುತ್ತಾರೆ ಎಂಬ ಮಾತಿಗೆ ವಿರೋಧವಿಲ್ಲ. ಅಥವಾ ಹೀಗೆ ಇವರು ಮುಕ್ತಿಯೋಗ್ಯರು ಎಂಬುದು ಈ ಮಾತಿನ ಅಭಿಪ್ರಾಯ.

ಪಾಂತೀತಿ ಪಾ ಇತಿ— ''ಪಾ ರಕ್ಷಣೇ'' ಎಂಬುದು ಧಾತು. ಅದು ಪಚಾದಿಗಣದಲ್ಲಿ ಪಠಿತವಾದುದರಿಂದ ಅಚ್ ಪ್ರತ್ಯಯವು ಬಂದಿದೆ. ''ಆತೋ ಲೋಪಃ, ಇಟಿ ಚ'' ಎಂಬುದರಿಂದ ಧಾತುವಿನ ಆಕಾರ ಲೋಪವಾಗಿ ''ಪಾಃ'' ಎಂದಾಗಿದೆ.

ಕೇಷಾಂಚಿದಿತಿ— ದೇವತೆಗಳ, ಗಂಧರ್ವರ, ಕರ್ಮಜ, ಆಜಾನಜ ದೇವತೆಗಳ ಎಂದರ್ಥ.

ಕೇಷಾಂಚಿದಿತಿ— ಮನುಷ್ಯ ಗಂಧರ್ವಾದಿಗಳು ಎಂದರ್ಥ.

ಗ್ರಂಥಾಂತರೇತಿ— ತೈತ್ತಿರೀಯೋಪನಿಷತ್ತು ಮುಂತಾದ ಬೇರೆ ಬೇರೆ ಗ್ರಂಥಗಳಲ್ಲಿ ಹೇಳಲಾಗಿದೆ ಎಂದರ್ಥ.

ವಕ್ಷ್ಯಮಾಣೇತಿ— ದೈತ್ಯ, ರಾಕ್ಷಸ, ಇತ್ಯಾದಿಯಾಗಿ ಮುಂದೆ ಹೇಳಲಿರುವ ರೀತಿಯಲ್ಲಿ ಎಂದರ್ಥ.

Rarest Archive

ಅಯೋಗ್ಯತೇತಿ— ಮುಕ್ತಿಯಲ್ಲಿಯೂ ಮುಕ್ತಿಸಾಧನದಲ್ಲಿಯೂ ಅವರವರ ಅಯೋಗ್ಯತೆಯ ಅತಿಶಯದ ಪ್ರಕಾರವಾಗಿ ಉದ್ದೇಶಗೊಳಿಸಲಾಗಿದೆ ಎಂದರ್ಥ.

ಸ ಚಾನ್ಯತ್ರೋದಾಹೃತ ಇತಿ— ಐತರೇಯೋಪನಿಷತ್ತಿನ ಭಾಷ್ಯದಲ್ಲಿ ''ಪ್ರಜಾ ಹ ಸಿಸ್ರೋ ಅತ್ಯಾಯ-ಮೀಯುಃ'' ದೈತ್ಯ, ರಾಕ್ಷಸ, ಪಿಶಾಚರೆಂಬ ಮೂರುವಿಧ ಪ್ರಜೆಗಳು ಎಂದಿದೆ. ಹಾಗೂ ತೃತೀಯಸ್ಕಂಧ ಭಾಗವತ-ದಲ್ಲಿ, ಏಕಾದಶಸ್ಕಂಧದ ತಾತ್ಪರ್ಯದಲ್ಲಿ ''ಅತಿಕಪ್ಪಾದ ಆ ದೇಹದಿಂದ ದೈತ್ಯರು, ರಾಕ್ಷಸರು, ಪಿಶಾಚರು, ಹುಟ್ಟಿದರು'' ಎಂದು ಉದಾಹರಿಸಲ್ಪಟ್ಟಿದೆ ಎಂದರ್ಥ.

ಟೀಕಾ—

ತಮೋಯೋಗ್ಯಾನಾಂ ಪ್ರಭೇದಮಾಹ—

''................................ ದೈತ್ಯರಕ್ಷಃಪಿಶಾಚಕಾಃ ।
ಮರ್ತ್ಯಾಧಮಾಶ್ಚತುರ್ಧೈವ ತಮೋಯೋಗ್ಯಾಃ ಪ್ರಕೀರ್ತಿತಾಃ ।''

ಮರ್ತ್ಯಾಧಮಾ ಇತ್ಯತಃಪರಂ ಇತಿಶಬ್ದೋಽಧ್ಯಾಹಾರ್ಯಃ । ಅಪ್ರಸಿದ್ಧತ್ವಾದಸ್ಯ ಭೇದಸ್ಯ ಅಶ್ರದ್ಧೇಯತ್ವಂ ನಿವಾರಯಿತುಮೇವಶಬ್ದಃ ।

'ಪ್ರಕೀರ್ತಿತಾ' ಇತಿ ಅತ್ರಾಗಮಸಮ್ಮತಿಮಾಚಷ್ಟೇ । ಸ ಚಾನ್ಯತ್ರೋದಾಹೃತೋ ದ್ರಷ್ಟವ್ಯಃ ।

ಚತುರ್ವಿಧಾ ಅಪ್ಯೇತೇ ಪ್ರತ್ಯೇಕಂ ದ್ವಿಧಾ ಇತ್ಯಾಹ—

''ತೇ ಚ ಪ್ರಾಪ್ತಾಂಧತಮಸಃ ಸೃತಿಸಂಸ್ಥಾ ಇತಿ ದ್ವಿಧಾ ।''

ತೇ ಚ ಚತುರ್ವಿಧಾ ಅಪಿ । ಸೃತಿಸಂಸ್ಥಾಃ ಸಂಸಾರೇ ವರ್ತಮಾನಾಃ ನಾಧುನಾಽಪಿ ತಮಃಪ್ರಾಪ್ತಾಃ । ಯೋಗ್ಯತಾಯಾಶ್ಚೈತನ್ಯಸ್ವಭಾವತ್ವೇನ ತಮೋಯೋಗ್ಯಾನಾಮಯಂ ವಿಭಾಗೋ ನಾನುಪಪನ್ನಃ ।

ತಮೋಯೋಗ್ಯರಲ್ಲಿ ಎಷ್ಟು ವಿಧ ?

ತಮೋಯೋಗ್ಯರಲ್ಲಿ ದೈತ್ಯರು, ರಾಕ್ಷಸರು, ಪಿಶಾಚರು ಮತ್ತು ಮಾನವಾಧಮರು ಎಂದು ನಾಲ್ಕು ವಿಧದವರಿದ್ದಾರೆ. ಇದನ್ನು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಮೂಲದಲ್ಲಿನ ಚಕಾರವನ್ನು ದೇವ, ಋಷಿ ಮುಂತಾದ ಭೇದದಿಂದ ಐದು ಪ್ರಕಾರವಾಗಿ ಮುಕ್ತಿ ಯೋಗ್ಯರಿದ್ದಾರೆ ಎಂದು ಹೇಳಿದ ಸ್ಥಳದಲ್ಲಿ ಅನುಕರ್ಷಣ ಮಾಡಿಕೊಳ್ಳಬೇಕು. ಮುಕ್ತಿಗೆ ಯಾರು ಯೋಗ್ಯರಲ್ಲವೊ ಅವರಲ್ಲಿ ಎಷ್ಟು ವಿಧ ಎಂಬುದನ್ನು 'ತಮೊಗಾಃ' ಎಂಬುದರಿಂದ ತಿಳಿಸಿದ್ದಾರೆ. 'ತಮೋಗಾಃ' ಎಂದರೆ ತಮೋಯೋಗ್ಯರು ಎಂದರ್ಥ. ತಮಸ್ಸನ್ನು ಹೊಂದಿದವರು ಎಂದು ತಿಳಿಯಬಾರದು. ಏಕೆಂದರೆ; ಇವರಲ್ಲಿ ಎಷ್ಟು ವಿಧದವರಿದ್ದಾರೆ ಎಂದು ಹೇಳಲಿರುವ ಮುಂದಿನ ವಿಭಾಗಕ್ಕೆ ವಿರೋಧ ಬರುವುದು. ಸೃತಿಸಂಸ್ಥಿತಾಃ ಎಂದರೆ; ನಿತ್ಯಸಂಸಾರಿಗಳು ಎಂದರ್ಥ. ಇವರು ಸದಾ ಜನನ-ಮರಣ-ರೂಪದ ಪ್ರವಾಹಕ್ಕೆ ಸಿಲುಕಿರುವರು. ಮುಕ್ತಿಗೆ ಅಯೋಗ್ಯತೆಯು ಯಾರಲ್ಲಿ ಎಷ್ಟೆಷ್ಟು

Rarest Archiver

ಹೆಚ್ಚಾಗಿರುವುದೊ ಆ ಕ್ರಮವನ್ನು ಅನುಸರಿಸಿ ಇಲ್ಲಿ ಮುಕ್ತ್ಯಯೋಗ್ಯರನ್ನು ಉದ್ದೇಶಗೊಳಿಸಲಾಗಿದೆ. ತಮೋ-ಯೋಗ್ಯರಲ್ಲಿ ಎಷ್ಟು ಪ್ರಭೇದಗಳಿವೆ ಎಂಬುದನ್ನು 'ದೈತ್ಯರಕ್ಷಃ' ಎಂಬುದರಿಂದ ತಿಳಿಸಿದ್ದಾರೆ. ಇಲ್ಲಿ 'ಮರ್ತ್ಯಾಧಮಾಃ' ಎಂಬುದರ ಪರದಲ್ಲಿ ಇತಿಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಹೀಗೆ ಹೇಳಿದ ಭೇದ-ಪ್ರಭೇದಗಳು ಅಪ್ರಸಿದ್ಧವಾದುದರಿಂದ ಒಪ್ಪಿಕೊಳ್ಳತಕ್ಕದ್ದಲ್ಲ ಎಂಬ ಹೇಳಿಕೆಯನ್ನು ನಿವಾರಿಸಲು ಮೂಲದಲ್ಲಿ 'ಏವ'ಶಬ್ದವನ್ನು ಪ್ರಯೋಗಿಸಲಾಗಿದೆ. 'ಪ್ರಕೀರ್ತಿತಾಃ' ಎಂಬಲ್ಲಿ ಆಗಮ ಸಮ್ಮತಿಯನ್ನು ತಿಳಿಸಿದ್ದಾರೆ. ಅದನ್ನು ಬೇರೆ ಗ್ರಂಥಗಳಲ್ಲಿ ಉದಾಹರಿಸಿದ್ದಾರೆ ಎಂದು ಮನಗಾಣಬೇಕು.

ತಮೋಯೋಗ್ಯರಲ್ಲಿ ನಾಲ್ಕು ವಿಧಗಳಿದ್ದಾಗ್ಯೂ ಅವರು ಪ್ರತ್ಯೇಕವಾಗಿ ಮತ್ತು ಎರಡು ವಿಧದವರಿದ್ದಾರೆ ಎಂಬುದನ್ನು ತಿಳಿಸುತ್ತಾರೆ.

ತಮೋಯೋಗ್ಯರಲ್ಲಿ ತಮಸ್ಸನ್ನು ಹೊಂದಿದವರು, ಸಂಸಾರದಲ್ಲಿ ಇರುವವರು ಎಂದು ಎರಡು ವಿಧ. ತಮೋ-ಯೋಗ್ಯರಲ್ಲಿ ನಾಲ್ಕು ವಿಧದವರಿದ್ದಾಗ್ಯೂ ಸೃತಿಸಂಸ್ಥರು ಎಂದರೆ ಸಂಸಾರದಲ್ಲಿ ಇರುವವರು. ಇದುವರೆಗೂ ಸಹ ತಮಸ್ಸನ್ನು ಹೊಂದದವರು ಎಂದರ್ಥ. ಯೋಗ್ಯತೆಯೆಂಬುದು ಚೈತನ್ಯದ ಸ್ವಭಾವವಾದುದರಿಂದ ತಮೋಯೋಗ್ಯರ ಬಗ್ಗೆ ಮಾಡಿದ ಈ ವಿಭಾಗವು ಸರಿಹೊಂದುವುದಿಲ್ಲ.

ಹೀಗೆ ಚೇತನರ ವಿಭಾಗವನ್ನು ವಿಸ್ತಾರವಾಗಿ ಹೇಳಿ, ಅಚೇತನ ವಿಭಾಗವು ಅವಸರ ಸಂಗತಿಯ ಮೂಲಕ ಪ್ರಾಪ್ತವಾದುದರಿಂದ ಈಗ ಅದನ್ನು ಹೇಳಲಾಗುವುದು.

ಭಾವದೀಪ—

ನನು ಯೋಗ್ಯವಿಭಾಗತ್ವಂ ಪ್ರಾಪ್ತತಮಸ್ಕಾನಾಮಯುಕ್ತಮ್ । ಫಲಪ್ರಾಪ್ತೌ ಯೋಗ್ಯತಾಯಾಃ ವಿನಾಶಾದಿತ್ಯತ ಆಹ ಯೋಗ್ಯತಾಯಾ ಇತಿ ।

ತಮೋಯೋಗ್ಯರು ತಮಸ್ಸನ್ನು ಹೊಂದಿದ ನಂತರ ಅವರ ಯೋಗ್ಯತೆಯು ನಾಶವಾಗುವುದರಿಂದ ಅಂಧ-ತಮಸ್ಸನ್ನು ಪಡೆದವರೊಡನೆ ತಮೋಯೋಗ್ಯರ ಪ್ರಭೇದವನ್ನು ತಿಳಿಸಿದುದು ಯುಕ್ತವಲ್ಲ ಎಂಬುದು ಆಕ್ಷೇಪ. ಅದನ್ನು ಪರಿಹರಿಸಲು ''ಯೋಗ್ಯತಾಯಾಃ'' ಎಂದು ವಿವರಿಸಿದ್ದಾರೆ. ಯೋಗ್ಯತೆಯು ಚೇತನರ ಸ್ವಭಾವವಾದುದರಿಂದ, ಅದಕ್ಕೆ ನಾಶವಿಲ್ಲದುದರಿಂದ ತಮೋಯೋಗ್ಯರ ಈ ಬಗೆಯ ವಿಭಾಗಕ್ಕೆ ಯಾವ ಬಾಧಕವೂ ಬಾರದು, ಎಂಬುದು ಸಮಾಧಾನ.

ಟೀಕಾ—

ಏವಂ ಚೇತನವಿಭಾಗಂ ವಿಸ್ತರೇಣಾಭಿಧಾಯ ಅವಸರಪ್ರಾಪ್ತಮಚೇತನವಿಭಾಗಮಾಹ—

''ನಿತ್ಯಾನಿತ್ಯವಿಭಾಗೇನ ತ್ರಿಧೈವಾಚೇತನಂ ಮತಮ್ ।''

ಅತ್ರಾಪ್ಯಚೇತನಮೇವ ಏವಂ ವಿಭಾಗವತ್ ಇತ್ಯರ್ಥಾನಭ್ಯುಪಗಮಾತ್ ಪೂರ್ವೋಕ್ತತತ್ತ್ವಾನಾಮಪಿ ಪ್ರಮಾಣಾಂತರೇಣ ನಿತ್ಯತ್ವಾದಿಗ್ರಹಣಂ ನ ವಿರುದ್ಧಮ್ । ನಿತ್ಯಾನಿತ್ಯವಿಭಾಗೇನ ಇತ್ಯಸ್ಯ ನಿತ್ಯಾನಿತ್ಯತ್ವೇನ ತದ್ವಿಭಾಗೇನ ಚೇತ್ಯರ್ಥಃ । ತಥಾ ಚ ನಿತ್ಯಾನಿತ್ಯಂ ನಿತ್ಯಮನಿತ್ಯಂ ಚೇತ್ಯಚೇತನಂ ತ್ರಿವಿಧಮಿತ್ಯುಕ್ತಂ ಭವತಿ ।

Rarest Archiver

ಕೇಚಿತ್ ಸರ್ವಂ ಕ್ಷಣಿಕಂ ಮನ್ಯಮಾನಾ ನಿತ್ಯಂ ನ ಮನ್ಯಂತೇ । ಅಪರೇ ತು ಸತ್ಕಾರ್ಯವಾದಿನೋಽನಿತ್ಯಂ ನಾಂಗೀಕುರ್ವಂತಿ । ಸರ್ವೇಽಪಿ ನಿತ್ಯಾನಿತ್ಯಂ ವಿರೋಧಾನ್ನಾಭ್ಯುಪಗಚ್ಛಂತಿ । ತನ್ನಿರಾಸಾಯೈವಕಾರಃ । ನ ಪ್ರತಿಜ್ಞಾ-ಮಾತ್ರೇಣ ಅರ್ಥಸಿದ್ಧಿರಿತಿ ಪ್ರಾಮಾಣಿಕತ್ವಂ ಉಕ್ತವಿಭಾಗಸ್ಯ ಸೂಚಯತಿ ಮತಮಿತಿ । ತಚ್ಚ ಲೇಶತೋ ದರ್ಶಯಿಷ್ಯಾಮಃ । ಯದ್ಯಪಿ ನಿತ್ಯಂ ನಿತ್ಯಾನಿತ್ಯಂ ಅನಿತ್ಯಮಿತ್ಯುದ್ದೇಶಃ ಕಾರ್ಯಃ ಪ್ರಾಧಾನ್ಯಾತ್ । ತಥಾಽಪಿ ಉಕ್ತಿಲಾಘವಾಯ ಕ್ರಮೋಲ್ಲಂಘನಮ್ ।

ಅಚೇತನದಲ್ಲಿ ಎಷ್ಟು ವಿಧ ?

ಅಚೇತನದಲ್ಲಿ ನಿತ್ಯಾನಿತ್ಯವೆಂತಲೂ, ನಿತ್ಯವೆಂತಲೂ, ಅನಿತ್ಯವೆಂತಲೂ ಮೂರು ವಿಧಗಳಿವೆ ಎಂಬುದನ್ನು ಪ್ರಾಮಾಣಿಕರು ಒಪ್ಪಿಕೊಂಡಿದ್ದಾರೆ.

ಇಲ್ಲಿಯೂ ಸಹ ಅಚೇತನದಲ್ಲಿಯೇ ಈ ರೀತಿಯಾದ ವಿಭಾಗವು ಕಂಡು ಬಂದಿದೆ ಎಂಬ ವಿಷಯವನ್ನು ಒಪ್ಪಿಕೊಳ್ಳದಿರುವುದರಿಂದ ಬೇರೆ ಪ್ರಮಾಣಗಳ ಮೂಲಕ ನಿತ್ಯತ್ವಾದಿಗಳನ್ನು ತಿಳಿಯುವುದು ವಿರುದ್ಧವಾಗಲಾರದು.

''ನಿತ್ಯಾನಿತ್ಯವಿಭಾಗೇನ'' ಎಂಬುದಕ್ಕೆ ಅರ್ಥವೇನೆಂದರೆ, ನಿತ್ಯಾನಿತ್ಯತ್ವವೆಂತಲೂ ಅವೆರಡರೊಳಗಿನ ಪ್ರಭೇದ-ವೆಂತಲೂ ತಿಳಿಯಬೇಕು. ಹಾಗೆ ತಿಳಿದ ಮೇಲೆ ನಿತ್ಯಾನಿತ್ಯವೆಂತಲೂ, ನಿತ್ಯವೆಂತಲೂ, ಅನಿತ್ಯವೆಂತಲೂ ಸಹ ಅಚೇತನದಲ್ಲಿ ಮೂರು ವಿಧಗಳಿವೆ ಎಂದು ಹೇಳಿದಂತಾಯಿತು.

ಕೆಲವರು ಸರ್ವವೂ ಕ್ಷಣಿಕವೆಂದು ತಿಳಿದವರಾಗಿ ನಿತ್ಯತ್ವವನ್ನು ಒಡಂಬಡುವುದಿಲ್ಲ. ಸತ್ಕಾರ್ಯವಾದಿಗಳಾದ ಮತ್ತೆ ಕೆಲವರು ಅನಿತ್ಯವನ್ನು ಒಪ್ಪುವುದಿಲ್ಲ.

ಸತ್ಕಾರ್ಯವಾದವೆಂದರೇನು ?

ಸತ್ಕಾರ್ಯವಾದವೆಂದರೆ;

ಮುಂದೆ ಹುಟ್ಟಲಿರುವ ಕಾರ್ಯವು ತನಗೆ ಕಾರಣವಾದ ವಸ್ತುವಿನಲ್ಲಿ ಮೊದಲೆ ಇದ್ದು ಸಹಕಾರಿಕಾರಣಗಳ ಸಂಯೋಗವಾದ ನಂತರ ಅದು ಅಭಿವ್ಯಕ್ತಿಗೊಳ್ಳುವುದು. ಹೀಗಾಗುವುದಕ್ಕೆ ಸತ್ಕಾರ್ಯವಾದವೆಂದು ಹೆಸರು. ಹೇಗೆಂದರೆ;

ಒಂದು ಮಡಕೆಯು ಹುಟ್ಟಬೇಕಾದರೆ ಅದಕ್ಕೆ ಕಾರಣವಾದ ಮಣ್ಣಿನುಂಡೆಯಲ್ಲಿ ಮೊದಲಿದ್ದು ಕುಂಬಾರನ ಕೈಗೋಲಿನ ಮೂಲಕ ತಿರುಗಿಸಲ್ಪಟ್ಟು ಅನಂತರ ಮಡಕೆಯ ರೂಪದಲ್ಲಿ ಅಭಿವ್ಯಕ್ತಿಗೊಳ್ಳುವುದು. ಹೀಗೆಯೇ ಸರ್ವಕಾರ್ಯಗಳೂ ಸೂಕ್ಷ್ಮರೂಪದಲ್ಲಿ ತಮ್ಮ ಕಾರಣವಸ್ತುಗಳಲ್ಲಿ ಅಡಕವಾಗಿರುತ್ತವೆ ಎಂದು ಸತ್ಕಾರ್ಯವಾದಿಗಳು ಹೇಳುವುದರಿಂದ ಅವರಿಗೆ ಅನಿತ್ಯವೆಂಬುದೇ ಇಲ್ಲ.

ನಿತ್ಯವಿದ್ದಲ್ಲಿ ಅನಿತ್ಯವಿಲ್ಲ. ಅನಿತ್ಯವಿದ್ದಲ್ಲಿ ನಿತ್ಯವಿಲ್ಲ. ಅವೆರಡೂ ಪರಸ್ಪರ ವಿರೋಧಿಗಳಾದುದರಿಂದ ಸರ್ವರೂ ನಿತ್ಯಾನಿತ್ಯವನ್ನು ಒಡಂಬಡುವುದಿಲ್ಲ.

ಈ ಮೂರು ಅಭಿಪ್ರಾಯಗಳನ್ನೂ ಪರಿಹರಿಸಲು ಮೂಲದಲ್ಲಿ 'ಏವ'ಕಾರವನ್ನು ಹೇಳಿದ್ದಾರೆ.

Rarest Archiver

''ಪ್ರತಿಜ್ಞೆ ಮಾಡುವ ಮಾತ್ರದಿಂದ ಪ್ರಯೋಜನ ಸಿದ್ಧಿಸಲಾರದು'' ಎಂಬ ನ್ಯಾಯದಿಂದ ಮೊದಲು ಹೇಳಿದ ವಿಭಾಗಕ್ಕೆ ಪ್ರಾಮಾಣಿಕರ ಅಂಗೀಕಾರ ದೊರೆತಿದೆ ಎಂಬುದನ್ನು ಸೂಚಿಸಲು ಮೂಲದಲ್ಲಿ 'ಮತಂ' ಎಂದು ಹೇಳ-ಲಾಗಿದೆ. ಪ್ರಾಮಾಣಿಕರ ಆ ಒಡಂಬಡಿಕೆಯನ್ನು ಇಲ್ಲಿ ಲೇಶತಃ ಪ್ರದರ್ಶಿಸುತ್ತೇವೆ.

ಪ್ರಧಾನವಾದುದರಿಂದ ನಿತ್ಯವೆಂತಲೂ, ನಿತ್ಯಾನಿತ್ಯವೆಂತಲೂ, ಅನಿತ್ಯವೆಂತಲೂ ವಿಭಾಗಗೊಳಿಸುವ ಉದ್ದೇಶ-ವನ್ನು ಸೂಚಿಸಬೇಕಾಗಿತ್ತು. ಹಾಗೇಕೆ ಮಾಡಲಿಲ್ಲವೆಂದರೆ;

ಸುಲಭದರಲ್ಲಿ ಹೇಳುವ ಸೌಕರ್ಯವೊದಗುವುದೆಂದು ಇಲ್ಲಿ ಕ್ರಮವನ್ನು ಮೀರಲಾಗಿದೆ ಎಂದು ಮನಗಾಣ-ಬೇಕು.

ಭಾವದೀಪ—

ಪೂರ್ವೋಕ್ತೇತಿ । ಚೇತನಾನಾಂ ನಿತ್ಯತ್ವಂ ಅತ್ಯಂತಾಭಾವಧ್ವಂಸಯೋಃ ನಿತ್ಯತ್ವಂ ಪ್ರಾಗಭಾವಸ್ಯ ಅನಿತ್ಯತ್ವಂ ಅನ್ಯೋನ್ಯಾಬಾವಸ್ಯ ಚ ಯಥಾಧಿಕರಣಂ ನಿತ್ಯತ್ವಂ ಅನಿತ್ಯತ್ವಂ ಚೇತ್ಯಾದಿ ಧ್ಯೇಯಮಿತ್ಯರ್ಥಃ ॥ ಸತ್ಕಾರ್ಯೇತಿ । ಕಾರಣಂ ಸದೇವ ಕಾರ್ಯಂ ಕುಲಾಲಾದಿವ್ಯಾಪಾರೇಣ ವ್ಯಜ್ಯತೇ ತತ್ರೈವ ಲೀಯತ ಇತಿ ಸತ್ಕಾರ್ಯವಾದಿನೋ ಅನಿತ್ಯಂ ನೇತಿ ಮನ್ಯತ ಇತ್ಯರ್ಥಃ ॥ ಸರ್ವೇಽಪೀತಿ । ವಾದಿನ ಇತ್ಯರ್ಥಃ ॥ ದರ್ಶಯಿಷ್ಯಾಮ ಇತಿ । ನಿತ್ಯಾದಿವಸ್ತುನಿರ್ದೇಶ-ಪ್ರಸ್ತಾವ ಇತಿ ಭಾವಃ ।

ಪೂರ್ವೋಕ್ತೇರಿತಿ— ಚೇತನರು ನಿತ್ಯ, ಅತ್ಯಂತಾಭಾವ ಮತ್ತು ಧ್ವಂಸ ಇವು ನಿತ್ಯ, ಪ್ರಾಗಭಾವವು ಅನಿತ್ಯ, ಅನ್ಯೋನ್ಯಾಭಾವವು ಆಶ್ರಯಿಸಿದ ಅಧಿಕರಣ ಪ್ರಕಾರ ನಿತ್ಯವೂ, ಅನಿತ್ಯವೂ ಆಗಿದೆ ಎಂಬ ಪ್ರಮೇಯವು ಪೂರ್ವದಲ್ಲಿ ಹೇಳಲ್ಪಟ್ಟಿದೆ ಎಂಬುದನ್ನು ಗಮನಿಸಬೇಕು.

ಸತ್ಕಾರ್ಯೇತಿ— ಸತ್ಕಾರ್ಯವಾದಿಗಳು ಹೀಗೆ ಹೇಳುತ್ತಾರೆ— ''ಕಾರ್ಯವು ತನ್ನ ಕಾರಣಸಾಮಗ್ರಿಯಲ್ಲಿ ಮೊದಲೇ ಇರುತ್ತದೆ. ಹೇಗೆಂದರೆ ಮಡಕೆಯು ಮಣ್ಣಿನ ಮುದ್ದೆಯಲ್ಲಿ ಅವ್ಯಕ್ತವಾಗಿ ಮೊದಲೇ ಇರುತ್ತದೆ. ಅದು ಕುಂಬಾರನ ತಿಗರಿ, ಕೋಲು, ತಿರುವು ಮುಂತಾದ ವ್ಯಾಪಾರದಿಂದ ತಿರುಗಿಸಲ್ಪಟ್ಟು ಮಡಕೆಯ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ನಾಶಾನಂತರ ಅದರಲ್ಲಿಯೇ ಲೀನ ಹೊಂದುತ್ತದೆ. ಆದುದರಿಂದ ಯಾವ ಪದಾರ್ಥವೂ ಅನಿತ್ಯವಲ್ಲ'' ಎಂದು ಅವರು ತಿಳಿಯುತ್ತಾರೆ ಎಂದರ್ಥ.

ಸರ್ವೇಽಪೀತಿ— ನಿತ್ಯಾನಿತ್ಯವು ವಿರೋಧವಾದುದರಿಂದ ಸರ್ವವಾದಿಗಳೂ ಸಹ ಅದನ್ನು ಒಪ್ಪುವುದಿಲ್ಲ ಎಂದರ್ಥ.

ದರ್ಶಯಿಷ್ಯಾಮ ಇತಿ— ನಿತ್ಯಾದಿ ವಸ್ತುಗಳನ್ನು ನಿರ್ದೇಶಗೊಳಿಸುವ ಪ್ರಸ್ತಾವನೆಯಲ್ಲಿ ಉಕ್ತ ವಿಭಾಗವು ಪ್ರಾಮಾಣಿಕ ಎಂಬುದನ್ನು ತೋರಿಸುತ್ತೇವೆ ಎಂದಿದ್ದಾರೆ.

ಟೀಕಾ—

ಕ್ರಮೇಣ ತ್ರಯಂ ದರ್ಶಯನ್ ನಿತ್ಯಂ ತಾವದ್ದರ್ಶಯತಿ—

''ನಿತ್ಯಾ ವೇದಾಃ .... ।''

Rarest Archiver

ಅತ್ರ ನಿತ್ಯತ್ವಂ ನಾಮ ಕೂಟಸ್ಥತಯಾ ಆದ್ಯಂತಶೂನ್ಯತ್ವಮ್ । ತಚ್ಚ ವೇದಾನಾಂ ''ನಿತ್ಯಾ ವೇದಾಃ ಸಮಸ್ತಾಶ್ಚ'' ಇತ್ಯಾದಿಪ್ರಮಾಣಸಿದ್ಧಮ್ । ಅತ್ರ ವೇದಾ ಇತ್ಯುಪಲಕ್ಷಣಮ್ । ಪಂಚಾಶದ್ವರ್ಣಾನಾಮವ್ಯಾಕೃತಾಕಾಶಸ್ಯ ಚ ತಥಾ ಭಾವಾತ್ ।

ನಿತ್ಯಾನಿತ್ಯಂ ವಿಭಾಗೇನಾಹ—

''............ ಪುರಾಣಾದ್ಯಾಃ ಕಾಲಃ ಪ್ರಕೃತಿರೇವ ಚ ।
ನಿತ್ಯಾನಿತ್ಯಂ ತ್ರಿಧಾ ಪ್ರೋಕ್ತಂ .... ।''

ಪುರಾಣಾದ್ಯಾಃ ಪೌರುಷೇಯಗ್ರಂಥಾ ಏಕಾ ವಿಧಾ । ಕಾಲೋಽಪರಾ । ಪ್ರಕೃತಿರನ್ಯಾ । ನನು ಚ ತ್ರಿಧೇತಿ ಪ್ರಕಾರತ್ರೈವಿಧ್ಯಮುಕ್ತಮ್ । ನ ಚಾತ್ರ ಕಶ್ಚಿತ್ ಪ್ರಕಾರೋ ದರ್ಶಿತಃ । ಕಿಂ ತು ವಸ್ತುನಿರ್ದೇಶ ಏವ ಕೃತಃ । ನೈಷ ದೋಷಃ । ಯನ್ನ ಸರ್ವಥಾ ಕೂಟಸ್ಥಮ್ । ನಾಪ್ಯನಿತ್ಯಮೇವ ತದುಚ್ಯತೇ ನಿತ್ಯಾನಿತ್ಯಮ್ । ತಸ್ಯ ತಿಸ್ರೋ ವಿಧಾಃ ಸಂಭವಂತಿ । ಉತ್ಪತ್ತಿಮತ್ತ್ವೇ ಸತಿ ವಿನಾಶಾಭಾವಃ । ಏಕದೇಶೇ ಉತ್ಪತ್ತಿವಿನಾಶಾವೇಕದೇಶಿನಃ ತದಭಾವಃ । ಸ್ವರೂಪೇಣೋತ್ಪತ್ತ್ಯಭಾವೇಽಪ್ಯವಸ್ಥಾಗಮಾಪಾಯವತ್ತ್ವಂ ಚೇತಿ । ತದೇತದ್ವಿಧಾತ್ರಯಮುಕ್ತವಸ್ತುತ್ರಯೋಽಸ್ತೀತಿ ತಸ್ಯೈವ ಗ್ರಹಣಂ ಕೃತಮ್ ।

ನನ್ವೇವಂ ಸತ್ಯವಾಂತರಭೇದೈರ್ವಿಧಾಂತರಮಪ್ಯುತ್ಪ್ರೇಕ್ಷಿತುಂ ಶಕ್ಯಮಿತ್ಯತ ಏವೇತ್ಯುಕ್ತಮ್ ।

ತತ್ರೋಪಪಾದಕಾಕಾಂಕ್ಷಾಯಾಂ ಪ್ರೋಕ್ತಮಿತ್ಯಾಹ । ಶಾಸ್ತ್ರೀಯವಿಧಾನಾಮತ್ರೈವಾಂತರ್ಭಾವೋಽನ್ಯಾಸಾಮನಾದರಣೀಯತ್ವಂ ಚೇತಿ ।

ಅಥವಾ ''ಪುರಾಣಾನಿ ತದರ್ಥಾನಿ'', ''ಸರ್ವೇ ನಿಮೇಷಾ ಜಜ್ಞಿರೇ'', ''ವಿಕಾರೋಽವ್ಯಕ್ತಜನ್ಮ ಹಿ'' ಇತ್ಯಾದ್ಯಾಗಮಪರಿಗ್ರಹಾರ್ಥಂ ಪ್ರೋಕ್ತಮಿತ್ಯುಕ್ತಮ್ । ಅತ ಏವ ವಿರೋಧೋಽಪಿ ಪರಿಹೃತಃ ।

ನನ್ವತ್ರ ಯಸ್ಯೋತ್ಪತ್ತ್ಯಾದಿಕಂ ತದನಿತ್ಯಮೇವ । ಯಸ್ಯ ತು ನಾಸ್ತಿ ತನ್ನಿತ್ಯಮೇವ । ನಿತ್ಯಾನಿತ್ಯಂ ಕ್ವಾಸ್ತೀತಿ । ಮೈವಮ್ । ಸ್ಯಾದೇತದೇವಂ ಯದ್ಯಂಶಾಂಶಿನೋರ್ವಿಕಾರವಿಕಾರಿಣೋರ್ವಾ ಅತ್ಯಂತಭೇದಃ ಸ್ಯಾತ್ । ನ ಚೈವಮಿತ್ಯನ್ಯತ್ರೋಪಪಾದಿತಮಿತಿ ।

ನಿತ್ಯ, ನಿತ್ಯಾನಿತ್ಯ, ಅನಿತ್ಯ ಪದಾರ್ಥಗಳು ಯಾವುವು ?

ವೇದಗಳು ನಿತ್ಯ. ಇಲ್ಲಿ ನಿತ್ಯತ್ವವೆಂದರೆ ಸಮೂಹದಲ್ಲಿರುವುದು ಎಂಬ ರೀತಿಯಿಂದ ಆದಿಯೂ, ಅಂತ್ಯವೂ ಇಲ್ಲದಿರುವುದು ಎಂದರ್ಥ. ಈ ಲಕ್ಷಣವು ವೇದಗಳಲ್ಲಿ ''ನಿತ್ಯಾ ವೇದಾಃ ಸಮಸ್ತಾಶ್ಚ'' ಎಂದರೆ ಸಮಸ್ತವಾದ ವೇದಗಳೂ ಸಹ ನಿತ್ಯವಾಗಿವೆ. ಎಂಬ ಪ್ರಮಾಣಾನುಸಾರ ಸಿದ್ಧವಾಗಿದೆ. ಇಲ್ಲಿ ವೇದಗಳು ಎಂಬುದು ಉಪಲಕ್ಷಣ. ಇದರಿಂದ ಅಕಾರಾದಿ ಐವತ್ತು ವರ್ಣಗಳೂ, ಅವ್ಯಾಕೃತಾಕಾಶವೂ ನಿತ್ಯವೆಂಬುದು ಫಲಿಸುತ್ತದೆ. ಉಪಲಕ್ಷಣವೆಂದರೇನೆಂಬುದನ್ನು ಶ್ರೀಮಂತ್ರಾಲಯ ಶ್ರೀಪಾದಂಗಳವರ ಟಿಪ್ಪಣಿಯಲ್ಲಿ ಹೇಳಲಾಗುತ್ತದೆ.

ನಿತ್ಯಾನಿತ್ಯ ವಸ್ತುಗಳು ಯಾವುವೆಂಬುದನ್ನು ವಿಭಾಗಗೊಳಿಸಿ ಹೇಳುವರು.

Rarest Archiver

ಪುರಾಣಾದಿಗಳು ಕಾಲ ಮತ್ತು ಪ್ರಕೃತಿ ನಿತ್ಯಾನಿತ್ಯ ವಸ್ತುಗಳು. ಈ ನಿತ್ಯಾನಿತ್ಯ ವಸ್ತುಗಳಲ್ಲಿ ಮೂರು ವಿಧಗಳಿವೆ ಎಂಬುದನ್ನು ಹೇಳಲಾಗಿದೆ.

ಪುರಾಣಗಳೇ ಮುಂತಾದ ಪುರುಷರಚಿತ ಗ್ರಂಥಗಳು ಒಂದು ರೀತಿಯದಾಗಿವೆ. ಕಾಲ ಮತ್ತೊಂದು ರೀತಿ-ಯದು. ಪ್ರಕೃತಿ ಇನ್ನೊಂದು ರೀತಿಯದು. ಹೀಗೆ ಈ ಮೂರು ವಸ್ತುಗಳಿಗೆ ಮೂರು ಪ್ರಕಾರಗಳನ್ನು ಹೇಳಿದ್ದಾರೆ.

ಸರಿ, ಇಲ್ಲಿ 'ತ್ರಿಧಾ' ಎಂಬುದರಿಂದ ಪ್ರಕಾರದಲ್ಲಿ ಮೂರು ಬಗೆಗಳನ್ನು ಹೇಳಿದ್ದಾರೆಯೆ ಹೊರತು ಅವುಗಳಲ್ಲಿನ ಯಾವುದೊಂದರ ಪ್ರಕಾರವನ್ನೂ ಪ್ರದರ್ಶಿಸಿಲ್ಲ. ಆದರೆ ಅವುಗಳ ಹೆಸರನ್ನು ತಿಳಿಸುತ್ತಾ ನಿರ್ದೇಶನಗೊಳಿಸಿದ್ದಾರೆ. ಆದುದರಿಂದ ಇದೇನೂ ದೋಷವಾಗುವುದಿಲ್ಲ.

ನಿತ್ಯಾನಿತ್ಯವೆಂದರೇನು?

ಯಾವುದು ಸರ್ವಥಾ ಕೂಟಸ್ಥವಲ್ಲವೊ ಮತ್ತು ಅನಿತ್ಯವೂ ಅಲ್ಲವೊ ಅದನ್ನು ನಿತ್ಯಾನಿತ್ಯವೆನ್ನುವರು. ಅದರಲ್ಲಿ ಮೂರು ವಿಧಗಳು ಸಂಭವಿಸುತ್ತವೆ.

ಯಾವುದು ಉತ್ಪತ್ತಿಯನ್ನು ಹೊಂದುತ್ತಿದ್ದು ವಿನಾಶವನ್ನು ಹೊಂದಲಾರದೊ ಅಂತಹುದು ಒಂದು ವಿಧ.

ಒಂದು ವಸ್ತುವಿನ ಕೆಲವು ಭಾಗದಲ್ಲಿ ಉತ್ಪತ್ತಿ-ವಿನಾಶಗಳಾಗುತ್ತಿದ್ದು ಮಿಕ್ಕ ಕೆಲವು ಭಾಗದಲ್ಲಿ ಆಗದಿರುವುದು ಯಾವುದೊ ಅಂತಹುದು ಎರಡನೆಯ ವಿಧ.

ಒಂದು ವಸ್ತುವಿಗೆ ಸ್ವರೂಪತಃ ಉತ್ಪತ್ತಿ ವಿನಾಶಗಳು ಆಗದಿದ್ದಾಗ್ಯೂ ಬೇರೆ ಅವಸ್ಥೆಗಳು ಬರುವುದೂ ಹೋಗುವುದೂ ಯಾವುದೊ, ಅಂತಹುದು ಮೂರನೆಯ ವಿಧ.

ಹೀಗೆ ವಿವರಿಸಿದ ಮೂರು ವಿಧಗಳು ಇಲ್ಲಿ ಹೇಳಿದ ಮೂರು ವಸ್ತುಗಳಿಗೆ ಇರುವುದರಿಂದ ಇವನ್ನು ಇಲ್ಲಿ ಹಿಡಿದಿದ್ದಾರೆ.

ಅದು ಸರಿ, ಹೀಗೆ ಇದರಲ್ಲಿ ಭೇದ ಒಳಪ್ರಭೇದಗಳಿರುವಾಗ ಅವುಗಳಿಂದ ಇನ್ನೂ ಬೇರೆ ಬೇರೆ ವಿಧಗಳನ್ನು ಊಹಿಸಿಕೊಳ್ಳಲು ಸಾಧ್ಯವಾಗಬಹುದಲ್ಲ ?

ಎಂದರೆ, ಅದಕ್ಕಾಗಿಯೇ ಮೂಲದಲ್ಲಿ 'ಏವ' ಪದವನ್ನು ಹೇಳಿದ್ದಾರೆ. ಇದರಿಂದ ಬೇರೆ ವಿಧಗಳನ್ನು ಊಹಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂಬುದು ತಿಳಿದುಬರುತ್ತದೆ. ಅದರಲ್ಲಿ ಅಂತಹ ವಿಧಗಳನ್ನು ಉಪಪಾದನೆ ಮಾಡಬೇಕು ಎಂಬ ಆಕಾಂಕ್ಷೆಯುಂಟಾದಾಗ ಹೇಳಲಾಗಿದೆ ಎಂದಿದ್ದಾರೆ. ಶಾಸ್ತ್ರೀಯ ವಿಧಗಳನ್ನು ಇದರಲ್ಲಿಯೇ ಅಂತರ್ಭಾವಗೊಳಿಸಬಹುದು. ಅನ್ಯವಿಧಗಳಿಗೆ ಆದರಣೆ ದೊರೆತಿಲ್ಲವೆಂಬುದನ್ನೂ ತಿಳಿಸಿದ್ದಾರೆ.

ಅಥವಾ, ''ಪುರಾಣಗಳು, ಅವುಗಳ ಅರ್ಥಗಳು, ಸರ್ವನಿಮೇಷಗಳು ಎಂದರೆ ಕಣ್ಣು ರೆಪ್ಪೆ ಹಾಕುವಷ್ಟು ಹಿಡಿಯುವ ಕಾಲಗಳು ಹುಟ್ಟಿವೆ. ವಿಕಾರವು ವ್ಯಕ್ತವಾಗದ ಜನ್ಮವೆಂಬುದು ಪ್ರಸಿದ್ಧ'' ಎಂಬ ಅರ್ಥವನ್ನು ತಿಳಿಸುವ ಆಗಮಗಳನ್ನು ಪರಿಗ್ರಹಿಸಲು ಈ ವಿಧಗಳನ್ನು ಹೇಳಿದ್ದಾರೆಂದು ಮನಗಾಣಬೇಕು. ಆದ್ದರಿಂದಲೆ ಇದರ ಮೇಲಿನ ವಿರೋಧಗಳೆಲ್ಲವೂ ಪರಿಹೃತವಾದವು.

Rarest Archiver

ನಿತ್ಯಾನಿತ್ಯ ವಸ್ತುವಿನ ಬಗ್ಗೆ ಚರ್ಚೆ

ಅದು ಸರಿ. ಇಲ್ಲೀಗ ಯಾವುದಕ್ಕೆ ಉತ್ಪತ್ತಿ ವಿನಾಶಗಳಿವೆಯೊ ಅದನ್ನು ಅನಿತ್ಯವೆನ್ನುವರು. ಯಾವುದಕ್ಕೆ ಅವಿಲ್ಲವೊ ಅದನ್ನು ನಿತ್ಯವೆನ್ನುವರು. ನಿತ್ಯಾನಿತ್ಯವೆಂಬುದು ಎಲ್ಲಿದೆ ?

ಮೇಲಿನ ಹೇಳಿಕೆಯು ಸಾಧುವಲ್ಲ. ಏಕೆಂದರೆ, ಒಂದು ವೇಳೆ ಅಂಶ, ಅಂಶಿಗಳಿಗೂ, ವಿಕಾರ, ವಿಕಾರಿಗಳಿಗೂ ಸಾರ್ವತ್ರಿಕ ಹಾಗೂ ತ್ರೈ ಕಾಲಿಕ ಭೇದವಿರುತ್ತಿದ್ದರೆ ನಿಮ್ಮ ಹೇಳಿಕೆಯು ಸಮಂಜಸವಾಗುತ್ತಿತ್ತು. ಅದು ಹೀಗಿಲ್ಲ. ಎಂಬ ಈ ಆಕ್ಷೇಪಣೆಗೆ ಬೇರೆ ಗ್ರಂಥಗಳಲ್ಲಿ ಶ್ರೀಮದಾಚಾರ್ಯರು ವಿವರಿಸಿ ಸಮಾಧಾನ ಹೇಳಿದ್ದಾರೆ.

ಭಾವದೀಪ—

ಕ್ರಮೇತಿ । ನಿತ್ಯಾನಿತ್ಯಂ ನಿತ್ಯಂ ಅನಿತ್ಯಂ ಚೇತ್ಯೇವಂ ಕ್ರಮೋಲ್ಲಂಘನಮಿತ್ಯರ್ಥಃ ॥ ಕೂಟಸ್ಥತಯಾ ಆದ್ಯಂತ-ಶೂನ್ಯತ್ವಮಿತಿ । ಕೂಟವದಾಕಾಶವತ್ ನಿರ್ವಿಕಾರತಯಾ ಸ್ಥಿತತಯೇತ್ಯರ್ಥಃ । ಯದ್ಯಪ್ಯಾನುಪೂರ್ವ್ಯಾಃ ಕೃತ್ರಿಮತ್ವೇನ ಸಜಾತೀಯಾನುಪೂರ್ವೀಕತ್ವಮಾತ್ರೇಣ ಪ್ರವಾಹತೋ ಅನಾದಿತ್ವಮೇವ ನ ಕೂಟಸ್ಥತ್ವಮ್ । ತಥೈವ ತತ್ತ್ವನಿರ್ಣಯ-ಟೀಕೋಕ್ತೇಃ । ತಥಾಪಿ ಅಧ್ಯಾಪಕಾದ್ಯುಚ್ಚರಿತವೇದಸ್ಯ ತಥಾತ್ವೇಽಪಿ ಈಶ್ವರಬುದ್ಧಿಸ್ಥಕ್ರಮಾಪೇಕ್ಷಯೈತದುಕ್ತಿಃ । ಉಕ್ತಂ ಹಿ ತತ್ತ್ವನಿರ್ಣಯೇ । "ಸರ್ವಜ್ಞತ್ವಾದೀಶ್ವರಸ್ಯ ತದ್ಬುದ್ಧೌ ಸರ್ವದಾ ಪ್ರತೀಯಮಾನತ್ವಾತ್" ಇತಿ । ತಥಾ ತತ್ತ್ವನಿರ್ಣ-ಯೋಕ್ತಪ್ರಮಾಣಶೇಷೇ "ನಿತ್ಯಾ ವೇದಾಃ ಸಮಸ್ತಾಶ್ಚ ಶಾಶ್ವತಾ ವಿಷ್ಣುಬುದ್ಧಿಗಾಃ" ಇತಿ ವಿಷ್ಣುಬುದ್ಧಿಗತತ್ವಮುಕ್ತಮ್ ।

ಅಪರೇತ್ಯಾದೌ ವಿಧೇತ್ಯನುಷಂಗಃ ॥ ಅನಿತ್ಯಮೇವೇತಿ । ಘಟಾದಿವದಿತಿ ಭಾವಃ ॥ ವಿನಾಶಾಭಾವ ಇತಿ । ಪುರಾಣಾದಿಪೌರುಷೇಯಗ್ರಂಥಸ್ಯ ಪುರುಷೈರುತ್ಪದ್ಯಮಾನಕ್ರಮವತ್ವೇಽಪಿ ತಸ್ಯ ಕ್ರಮಸ್ಯೇಶ್ವರಬುದ್ಧೌ ವೇದಕ್ರಮಸ್ಯೇವ ಉತ್ತರಾವಧಿಶೂನ್ಯತಯಾ ಪ್ರತೀಯಮಾನತ್ವೇನ ವಿನಾಶಾಭಾವ ಇತ್ಯರ್ಥಃ । ಕ್ಷಣಲವಾದ್ಯೇಕದೇಶೈರುತ್ಪತ್ತಿವಿನಾಶವತ್ವೇ-ಽಪ್ಯೇಕದೇಶವತೋಂಽಶಿನಃ ಕಾಲಸ್ಯ ಪ್ರವಾಹತ ಆದ್ಯಂತಶೂನ್ಯತ್ವೇನೋತ್ಪತ್ತಿವಿನಾಶಯೋರಭಾವ ಇತ್ಯರ್ಥಃ । ಜಡೋ-ಪಾದಾನಪ್ರಕೃತೇಶ್ಚ ಸ್ವರೂಪತ ಉತ್ಪತ್ತಿವಿನಾಶಯೋರಭಾವೇಽಪಿ ಮಹದಾದ್ಯಾತ್ಮಕತ್ವಾವಸ್ಥಾವಿಶೇಷೇಣ ತೌ ಸ್ತ ಇತಿ । ತದೇತದ್ವಿಧಾತ್ರಯಮುಕ್ತವಸ್ತುತ್ರಯೇಽಸ್ತೀತ್ಯುಕ್ತಮ್ ॥ ತಸ್ಯೈವೇತಿ । ವಸ್ತುತ್ರಯಸ್ಯೈವೇತ್ಯರ್ಥಃ ।

ಅವಾಂತರಭೇದೈರಿತಿ । ವರ್ಣಾತ್ಮನಾಽವಿಕಾರಿತ್ವೇಽಪಿ ಕ್ರಮರೂಪೇಣ ತಥಾತ್ವೇನಾವಿಕಾರಿವಿಕಾರರೂಪೈಕವಿಧಾ । ಅಂಶೈರಾಶುವಿನಾಶಾದಿಮತ್ವೇಽಪ್ಯಂಶಿನಸ್ತದಭಾವ ಇತ್ಯಾಶುವಿನಾಶಾದಿತದಭಾವಾದಿರೂಪಾಂಶಾಂಶಿರೂಪಾ ವಾ ಅಪರಾ ವಿಧಾ । ಕಾರಣಾತ್ಮನಾ ಸತ್ತ್ವೇಽಪಿ ಕಾರ್ಯಾತ್ಮನಾ ಅಸತ್ತ್ವೇನ ಸದಸತ್ಕಾರಣಕಾರ್ಯರೂಪಾ ಅನ್ಯವಿಧೇತ್ಯಾದಿರೂಪೇಣ ನಿತ್ಯಾನಿತ್ಯವಿಧಾತೋ ವಿಧಾಂತರಮಿತ್ಯರ್ಥಃ । ಪುರಾಣಾನಾಮುತ್ಪತ್ತಿಮತ್ವೇ ಮಾನಮ್ । ಪುರಾಣಾನಿ ತದರ್ಥಾನಿ ಸರ್ಗೇ ಸರ್ಗೇಽನ್ಯಥೈವ ತು । ಕ್ರಿಯಂತ ಇತಿ । ಕಾಲೈಕದೇಶೋತ್ಪತ್ತೌ ಮಾನಂ ಸರ್ವ ಇತಿ । ಪ್ರಕೃತೇಃ ಸ್ವರೂಪತೋ ಜನ್ಮಾದ್ಯಭಾವೇಽಪಿ ಮಹದಾದ್ಯಾತ್ಮನಾ ವಿಕಾರೋ ಅವ್ಯಕ್ತಸ್ಯ ಪ್ರಕೃತೇರ್ಜನ್ಮೇತ್ಯತ್ರ ವಿಕಾರ ಇತ್ಯೇತತ್ ಮಾನಮ್ । ಸರ್ವೇಽಪಿ ವಾದಿನೋ ವಿರೋಧಾತ್ ನಿತ್ಯಾನಿತ್ಯಂ ನ ಮನ್ಯಂತ ಇತಿ ಪಕ್ಷಂ ನಿರಾಹ ಅತ ಏವೇತಿ । ಆಗಮಸಿದ್ಧ-ತ್ವಾದೇವೇತ್ಯರ್ಥಃ ।

ಕ್ರಮೇತಿ— ನಿತ್ಯಾನಿತ್ಯ, ನಿತ್ಯ, ಅನಿತ್ಯ ಎಂಬುದು ವಿಭಾಗದಲ್ಲಿನ ಕ್ರಮ, ಅದನ್ನು ಉಲ್ಲಂಘಿಸಲು ಕಾರಣ-ವೇನು ? ಎಂದರ್ಥ. ಸುಲಭವಾಗಿ ಹೇಳುವ ಸೌಕರ್ಯಕ್ಕಾಗಿ ಅದನ್ನು ಉಲ್ಲಂಘಿಸಲಾಗಿದೆ ಎಂದು ಸಮಾಧಾನ.

Rarest Archive

ಕೂಟಸ್ಥತಯಾ ಆದ್ಯಂತಶೂನ್ಯತ್ವಮಿತಿ— ಕೂಟವೆಂದರೆ ಗುಂಪು, ಅದರಲ್ಲಿ ಸೇರಿರುವುದರಿಂದಲೂ, ಆಕಾಶ-ದಂತೆಯೂ, ವಿಕಾರವಿಲ್ಲದುದರಿಂದಲೂ ವೇದಗಳು ನಿತ್ಯ ಎಂದರ್ಥ.

ಆನುಪೂರ್ವಿ ಎಂದರೆ ವೇದಗಳಲ್ಲಿ ಸೇರಿದ ವರ್ಣಗಳ ಉಚ್ಚಾರಣಕ್ರಮ ಎಂದರ್ಥ. ಅದರಲ್ಲಿ ಸಜಾತೀಯ, ವಿಜಾತೀಯಗಳೆಂದು ಎರಡುವಿಧ. ಇಲ್ಲಿ ಒಪ್ಪಿರುವ ವೇದಗಳ ಆನುಪೂರ್ವಿಗೆ ಸಜಾತೀಯವೆಂತಲೂ, ತದನುಸಾರಿ ಸ್ಮೃತಿ, ಪುರಾಣ, ವಚನಗಳ ಆನುಪೂರ್ವಿಯು ಕೃತ್ರಿಮವಾದುದರಿಂದ ಅದು ಕೂಟಸ್ಥತಯಾ ನಿತ್ಯವಲ್ಲ. ಆದರೆ ವೇದಾನುಸಾರಿಯಾದುದರಿಂದ ಜಲಪ್ರವಾಹದಂತೆ ಅನಾದಿ ಎಂದು ಒಪ್ಪಲಾಗಿದೆ. ಇದನ್ನೇ ತತ್ತ್ವನಿರ್ಣಯ-ಟೀಕೆಯಲ್ಲಿ ಹೇಳಿದ್ದಾರೆ. ಹಾಗಿದ್ದಾಗ್ಯೂ ಅಧ್ಯಾಪಕ ಮುಂತಾದವರು ಉಚ್ಚರಿಸಿದ ವೇದಗಳ ಆನುಪೂರ್ವಿಯು ಕೃತ್ರಿಮವೆಂದಾಗಿದ್ದರೂ ಈಶ್ವರಬುದ್ಧಿಸ್ಥವಾದ ವೇದಗಳ ಆನುಪೂರ್ವಿಯು ಕೃತ್ರಿಮವಲ್ಲವೆಂದು ನಿರ್ಣಯಿಸಲಾಗಿದೆ. ಇದನ್ನು ತತ್ತ್ವನಿರ್ಣಯದಲ್ಲಿಯೂ ತತ್ತ್ವನಿರ್ಣಯ ಪ್ರಮಾಣಶೇಷದಲ್ಲಿಯೂ ಹೇಳಿದ್ದಾರೆ. ''ಸಮಸ್ತ ವೇದಗಳು ನಿತ್ಯ ಮತ್ತು ಶಾಶ್ವತ. ಅವು ಸರ್ವಜ್ಞನಾದ ಪರಮಾತ್ಮನ ಬುದ್ಧಿಯಲ್ಲಿ ಸದಾ ಹೊಳೆಯುತ್ತ ಗೋಚರಿಸುತ್ತವೆ''. ಇದರಿಂದ ವೇದಗಳಿಗೆ ನಿತ್ಯತ್ವವು ಸಿದ್ಧಿಸಿದೆ.

ಪೂರ್ವವಾಕ್ಯದ ಪದವನ್ನು ಅನಂತರವಾಕ್ಯದ ಅರ್ಥಕ್ಕೆ ಹೊಂದಿಕೆಯಾಗುವಂತೆ ಅನ್ವಯಿಸಿಕೊಳ್ಳುವುದಕ್ಕೆ ಅನುಷಂಗವೆಂದು ಹೆಸರು. ಅಪರೇತ್ಯಾದಿ ವಾಕ್ಯಕ್ಕೆ ವಿಧಾ ಎಂಬ ಪದದೊಡನೆ ಅನ್ವಯಿಸಿ ಅರ್ಥ ಹೇಳಬೇಕು.

ಅನಿತ್ಯಮೇವೇತಿ— ಘಟಪಟಾದಿ ಜಡವಸ್ತುಗಳಂತೆ ಅನಿತ್ಯವಾದದ್ದು ಎಂದು ಬಾವ.

ವಿನಾಶಾಭಾವಃ ಇತಿ— ಪುರಾಣಾದಿ ಗ್ರಂಥಗಳನ್ನು ಪುರುಷರು ರಚಿಸಿರುವುದರಿಂದ ಅವಕ್ಕೆ ಪೌರುಷೇಯ-ಗ್ರಂಥಗಳೆಂದು ಹೆಸರು. ಅವುಗಳಲ್ಲಿ ಪುರುಷರಿಂದ ಏರ್ಪಡಿಸಲಾಗುವ ಒಂದು ಕ್ರಮವಿರುವುದು ಪ್ರಸಿದ್ಧ. ವೇದಗಳು ಈಶ್ವರಬುದ್ಧಿಯಲ್ಲಿ ನೆಲೆಗೊಂಡಿದೆ. ಅವುಗಳಲ್ಲಿ ಈಶ್ವರನ ಬುದ್ಧಿಯು ಅನುಸಾರವಾಗಿ ಒಂದು ಕ್ರಮವುಂಟು. ಆ ಕ್ರಮವು ಉತ್ತರಾವಧಿರಹಿತವಾಗಿ ಎಲ್ಲಿಯೂ ಕೊನೆಗಾಣದೆ ಸದಾ ಸ್ಫೂರ್ತಿಗೊಳ್ಳುತ್ತ ಮುಂದುವರಿಯುವುದರಿಂದ ವಿನಾಶರಹಿತವಾಗಿದೆ. ಅಖಂಡ ಕಾಲದಲ್ಲಿ ಕ್ಷಣ, ಲವ ಮುಂತಾಗಿ ಅನೇಕ ಒಳ ಪ್ರಭೇದಗಳಿಂದ ಉತ್ಪತ್ತಿ, ವಿನಾಶಗಳಿವೆ ಎಂದು ತೋರುತ್ತಿದ್ದಾಗ್ಯೂ ಕ್ಷಣ-ಲವಗಳ ವ್ಯವಹಾರಕ್ಕೆ ಕಾರಣವಾಗದ, ಯಾವುದೋ ಒಂದು ಕಡೆಯ ಅಂಶಿ ಎನಿಸಿದ ಕಾಲದ ಪ್ರವಾಹರೂಪವಾಗಿಯೂ ಆದ್ಯಂತಗಳಿಲ್ಲದೆ ಉತ್ಪತ್ತಿ-ವಿನಾಶಗಳನ್ನು ಹೊಂದದೆ ಅಖಂಡವಾಗಿರುತ್ತದೆ. ಆದುದರಿಂದ ಅದು ವಿನಾಶರಹಿತವೆಂದು ಸಿದ್ಧವಾಯಿತು. ಜಡವಸ್ತುಗಳಿಗೆ ಉಪಾದಾನಕಾರಣವಾದ ಪ್ರಕೃತಿಯಲ್ಲಿ ಸ್ವರೂಪದಿಂದ ಉತ್ಪತ್ತಿ-ವಿನಾಶಗಳು ಕಾಣಸಿಗದಿದ್ದರೂ ಮಹದಾದಿರೂಪಗಳ ಅವಸ್ಥಾವಿಶೇಷಗಳಿಂದ ಅವೆರಡೂ ಎಂದರೆ ಉತ್ಪತ್ತಿ-ವಿನಾಶಗಳು ಇವೆಯೆದು ತಿಳಿಯಬೇಕು. ಆದುದರಿಂದ ನಿತ್ಯ, ಅನಿತ್ಯ, ನಿತ್ಯಾನಿತ್ಯಗಳೆಂಬ ಮೂರು ವಿಧಗಳೂ ಪೂರ್ವೋಕ್ತ ವಸ್ತುಗಳಲ್ಲಿ ಇವೆ ಎಂದು ಹೇಳಲಾಯಿತು.

ತಸ್ಯೈವೇತಿ— ಆ ಮೂರು ವಸ್ತುಗಳ ಎಂದರ್ಥ.

ಅವಾಂತರಭೇದೈರಿತಿ— ಕೆಲವರು ನಿತ್ಯ, ಅನಿತ್ಯ ಭೇದಗಳನ್ನು ಬಿಟ್ಟರೆ ನಿತ್ಯಾನಿತ್ಯವೆಂಬ ಭೇದವಿಲ್ಲವೆಂದು ವಾದಿಸುತ್ತಾರೆ. ಅವರನ್ನು ಒಪ್ಪಿಸಲು ಇಲ್ಲಿ ಅಪರವಿದ್ಯೆ ಮುಂತಾದವುಗಳಲ್ಲಿನ ನಿತ್ಯಾನಿತ್ಯ ಭೇದದ ಕ್ರಮವನ್ನು ವಿವರಿಸಿದ್ದಾರೆ. ಅದು ಹೀಗಿದೆ— ''ಅಪರವಿದ್ಯೆಯು ವರ್ಣರೂಪದಿಂದ ವಿಕಾರಿ. ಕ್ರಮರೂಪದಿಂದ ಅವಿಕಾರಿ.

Rarest Archiver

ಹೀಗೆ ಅದರಲ್ಲಿ ವಿಕಾರಿ-ಅವಿಕಾರಿರೂಪದ ಒಂದು ವಿಧವಿದೆ. ಕಾಲವು ಅಂಶಗಳ ಮೂಲಕ ಆಶುವಿನಾಶಿ. ಆದರೆ ಅಂಶಿರೂಪದಿಂದ ಆಶುವಿನಾಶಿಯಲ್ಲ. ಹೀಗೆ ಅದರಲ್ಲಿ ಆಶುವಿನಾಶ ತದಭಾವವೆಂಬ ನಿತ್ಯಾನಿತ್ಯಭೇದವಿದೆ. ಇನ್ನು ಕೆಲವು ವಸ್ತುಗಳ ಸೂಕ್ಷ್ಮರೂಪದಿಂದ ಕಾರಣವಸ್ತುವಿನಲ್ಲಿ ಇರುವಿಕೆಯನ್ನು ಹೊಂದಿ ಕಾರ್ಯರೂಪದಿಂದ ಇರುವಿಕೆಯನ್ನು ಪಡೆದಿರುವುದಿಲ್ಲ. ಅಂತಹ ವಸ್ತುಗಳು ಸದಸತ್ಕಾರಣ ಕಾರ್ಯರೂಪವೆನಿಸಿ ನಿತ್ಯಾನಿತ್ಯವೆಂಬ ಮೂರನೆಯ ವಿಧವನ್ನು ಹೊಂದಿರುತ್ತವೆ. ಆದುದರಿಂದ ನಿತ್ಯ, ಅನಿತ್ಯವೆಂಬ ಎರಡು ವಿಧಗಳಲ್ಲದೆ ನಿತ್ಯಾನಿತ್ಯವೆಂಬ ಮೂರನೆಯ ವಿಧವಿದೆ ಎಂಬುದು ಸಿದ್ಧವಾಯಿತು.

ಪುರಾಣಗಳು ಉತ್ಪನ್ನವಾಗುತ್ತವೆ ಎಂಬ ವಿಷಯಕ್ಕೆ— ''ಪುರಾಣಗಳು ಅದರ ಅರ್ಥಗಳು ಪ್ರತಿ ಸೃಷ್ಟಿಯಲ್ಲಿ ಬೇರೆ ಬೇರೆ ಪ್ರಾಕಾರವಾಗಿ ರಚಿತವಾಗುತ್ತವೆ'' ಎಂಬ ವಚನವು ಪ್ರಮಾಣ. ಇನ್ನು ಕಾಲದೊಳಗಿನ ಒಂದು ಅಂಶವು ಉತ್ಪನ್ನವಾಗುತ್ತದೆ ಎಂಬುದಕ್ಕೆ ''ಸರ್ವೇ'' ಎಂಬ ಪದಪ್ರಯೋಗ ಪ್ರಮಾಣ. ಪ್ರಕೃತಿಯು ಸ್ವರೂಪದಿಂದ ಜನ್ಮ ಮುಂತಾದವನ್ನು ಪಡೆದಿಲ್ಲವಾದಾಗ್ಯೂ ಮಹತ್ತು ಮುಂತಾದ ರೂಪದಿಂದ ಜನ್ಮ ಮುಂತಾದವನ್ನು ಪಡೆದಿದೆ. ''ಅವ್ಯಕ್ತವೆನಿಸಿದ ಪ್ರಕೃತಿಯ ವಿಕಾರವೇ ಅದರ ಜನ್ಮ'' ಎಂಬಲ್ಲಿ ವಿಕಾರವೆಂಬ ಪದಪ್ರಯೋಗವು ಇದಕ್ಕೆ ಪ್ರಮಾಣ. ನಿತ್ಯವಸ್ತುವಿಗೆ ಅನಿತ್ಯವೂ, ಅನಿತ್ಯವಸ್ತುವಿಗೆ ನಿತ್ಯವೂ ವಿರೋಧವಾದುದರಿಂದ ಸರ್ವವಾದಿಗಳೂ ನಿತ್ಯಾನಿತ್ಯವೆಂಬ ತತ್ತ್ವವನ್ನು ಒಪ್ಪಿಕೊಳ್ಳುವುದಿಲ್ಲ. ಎಂಬ ಈ ಪಕ್ಷವನ್ನು ''ಅತ ಏವ'' ಎಂಬ ವಾಕ್ಯದಿಂದ ನಿರಾಕರಿಸಲಾಗಿದೆ.

ಅತ ಏವೇತಿ— ನಿತ್ಯಾನಿತ್ಯ ವಸ್ತುಗಳಿರುವುದು ಆಗಮಗಳಿಂದ ಸಿದ್ಧವಾಗಿದೆ ಎಂದರ್ಥ.

ಟೀಕಾ—

ಅನಿತ್ಯಂ ವಿಭಜ್ಯ ದರ್ಶಯತಿ—

''...................... ಅನಿತ್ಯಂ ದ್ವಿವಿಧಂ ಮತಮ್ ।
ಅಸಂಸ್ಪೃಷ್ಟಂ ಚ ಸಂಸೃಷ್ಟಂ .... ।''

ಸಮ್ಯಕ್ ಸ್ಪೃಷ್ಟಂ ಸಂಸೃಷ್ಟಮ್ । ಅತಥಾಭೂತಮಸಂಸೃಷ್ಟಮ್ । ಸಮ್ಯಕ್ತ್ವಾಯಾ ಇಯತ್ತಾಭಾವಾತ್ ತ್ರೈವಿಧ್ಯಾದ್ಯಪಿ ಕಿಂ ನ ಸ್ಯಾದಿತ್ಯತೋ ಮತಮಿತ್ಯುಕ್ತಮ್ । ತದ್ ವಕ್ಷ್ಯಾಮಃ ।

ತತ್ರಾಸಂಸೃಷ್ಟಂ ನಿರ್ದಿಶತಿ—

''.......................... ಅಸಂಸೃಷ್ಟಂ ಮಹಾನಹಮ್ ।
ಬುದ್ಧಿರ್ಮನಃ ಖಾನಿ ದಶ ಮಾತ್ರಾ ಭೂತಾನಿ ಪಂಚ ಚ ।''

ಸಂಸೃಷ್ಟಂ ನಿರ್ದಿಶತಿ —

''ಸಂಸೃಷ್ಟಮಂಡಂ ತದ್ಗಂ ಚ ಸಮಸ್ತಂ ಸಂಪ್ರಕೀರ್ತಿತಮ್ ।''

ನನ್ವೇಷಾಂ ಚತುರ್ವಿಂಶತಿತತ್ತ್ವಾನಾಮಸಂಸ್ಪೃಷ್ಟಂ ನಾಮ ಯದ್ಯೇಕದೇಶೇನೋತ್ಪತ್ತಿಃ ತರ್ಹಿ ಅನುತ್ಪನ್ನಸ್ಯ ಅಸತ್ತ್ವಾದುತ್ಪನ್ನಮೇವ ತತ್ತ್ವಂ ತಚ್ಚ ಸಂಸೃಷ್ಟಮೇವೇತಿ ನ ದ್ವೈವಿಧ್ಯಮ್ । ನ ಚ ಪ್ರಕಾರಾಂತರಮಸ್ತೀತಿ ।

Rarest Archiver

ಮೈವಮ್ । ಸೂಕ್ಷ್ಮರೂಪೇಣ ನಿತ್ಯಾನಾಂ ಮಹದಾದೀನಾಂ ಪ್ರಕೃತ್ಯಾದ್ಯಂಶೈರುಪಚಯಮಾತ್ರಂ ಕ್ರಿಯತ ಇತಿ ತಾನ್ಯಸಂಸೃಷ್ಟಾನಿ । ನ ಚೈವಂ ಬ್ರಹ್ಮಾಂಡಂ ತದಂತರ್ಗತಾನೀತಿ ಸಂಸೃಷ್ಟಾನಿ ।

ಏಷಾಮಪಿ ಮೂಲರೂಪಂ ನಿತ್ಯಮಿತಿ ಚೇನ್ನ । ಸಾಕ್ಷಾನ್ಮೂಲರೂಪಸ್ಯ ವಿವಕ್ಷಿತತ್ವಾತ್ । ಏವಂ ಸತಿ ಮಹದಾದೀನಾಂ ನಿತ್ಯಾನಿತ್ಯತ್ವಂ ಕಥಂ ನ ಸ್ಯಾದಿತಿ ಚೇತ್ ಸ್ಯಾದೇವಂ ಯದಿ ಸೂಕ್ಷ್ಮರೂಪೇ ಮಹದಾದಿ-ವ್ಯವಹಾರಃ ಸ್ಯಾತ್ । ಕಿಂ ತು ಪ್ರಕೃತಿರೇವ ಸೋಚ್ಯತೇ । ಕೇಚಿನ್ಮಹದಾದಿಸ್ವರೂಪಮೇವ ನಾಭ್ಯುಪಗಚ್ಛಂತಿ । ದೂರೇಣೋಕ್ತವಿಶೇಷಮ್ । ತೇಷಾಂ ಅತಿಬಹುತರಾಗಮವಿರೋಧಂ ದರ್ಶಯಿತುಂ ಸಂಪ್ರಕೀರ್ತಿತಮ್ ಇತ್ಯುಕ್ತಮ್ । ಆಗಮಾಶ್ಚಾನ್ಯತ್ರ ದ್ರಷ್ಟವ್ಯಾಃ । ವಿಸ್ತರಭಿಯಾ ನೇಹೋದಾಹರಿಷ್ಯಂತೇ ।

ಅನಿತ್ಯವಸ್ತುಗಳ ವಿಭಾಗವನ್ನು ಪ್ರದರ್ಶಿಸುತ್ತಾರೆ.

ಅನಿತ್ಯವಸ್ತುಗಳಲ್ಲಿ ಎಷ್ಟು ವಿಧ ?

ಅನಿತ್ಯದಲ್ಲಿ ಅಸಂಸೃಷ್ಟವೆಂತಲೂ, ಸಂಸೃಷ್ಟವೆಂತಲೂ ಎರಡು ವಿಧ. ಚೆನ್ನಾಗಿ ಸೃಷ್ಟಿಸಲ್ಪಟ್ಟದ್ದು ಯಾವುದೊ ಅದಕ್ಕೆ ಸಂಸೃಷ್ಟವೆಂದು ಹೆಸರು. ತಥಾಭೂತವಲ್ಲದ್ದು ಎಂದರೆ ಯಾವುದು ಹಾಗೆ ಆಗದಿದ್ದುದೊ ಅದಕ್ಕೆ ಅಸಂಸೃಷ್ಟವೆಂದು ಹೆಸರು. ಚೆನ್ನಾಗಿರುವುದು ಎಂಬುದಕ್ಕೆ ಇಂತಿಷ್ಟೇ ಸರಿ ಎಂಬ ಪರಿಮಿತಿ ಇಲ್ಲದುದರಿಂದ ನಿತ್ಯಾನಿತ್ಯ, ನಿತ್ಯ, ಅನಿತ್ಯ-ಗಳೆಂಬ ಈ ಮೂರು ವಿಧ ವಸ್ತುಗಳೇ ಸಂಸೃಷ್ಟ ಮತ್ತು ಅಸಂಸೃಷ್ಟಗಳೆಂದು ಏಕಾಗಬಾರದು ? ಎಂದರೆ; ಅದಕ್ಕಾಗಿಯೆ ಮೂಲದಲ್ಲಿ ಮತಂ ಎಂದು ಹೇಳಿದ್ದಾರೆ.

ಅನಿತ್ಯದಲ್ಲಿ ಇಂತಹ ಎರಡು ವಿಧಗಳಿವೆ ಎಂದು ಪ್ರಾಮಾಣಿಕರು ಒಪ್ಪಿಕೊಂಡಿರುವುದರಿಂದ ಹಿಂದೆ ಹೇಳಿದ ಮೂರು ವಿಧಗಳಲ್ಲಿ ಇವು ಇಲ್ಲವೆಂದು ನಿರ್ಣಯಿಸಲಾಗುತ್ತದೆ. ಅದನ್ನು ಮುಂದೆ ಹೇಳಲಿದ್ದಾರೆ.

ಅವುಗಳಲ್ಲಿ ಅಸಂಸೃಷ್ಟಗಳು ಯಾವುವು? ಎಂಬುದನ್ನು ನಿರ್ದೇಶಗೊಳಿಸಿ ಹೇಳುತ್ತಾರೆ.

ಮಹತ್ತತ್ತ್ವ, ಅಹಂಕಾರತತ್ತ್ವ, ಬುದ್ಧಿತತ್ತ್ವ, ಮನಸ್ತತ್ತ್ವ, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂ-ದ್ರಿಯಗಳು, ಐದು ತನ್ಮಾತ್ರಾಗಳು, ಪೃಥಿವ್ಯಾದಿ ಪಂಚಭೂತಗಳು ಹೀಗೆ ಇಪ್ಪತ್ತನಾಲ್ಕು ತತ್ತ್ವಗಳನ್ನು ಅಸಂಸೃಷ್ಟ-ಗಳೆಂದು ಕರೆದಿದ್ದಾರೆ.

ಸಂಸೃಷ್ಟಗಳು ಯಾವುವು ?

ಬ್ರಹ್ಮಾಂಡ ಮತ್ತು ಅದರೊಳಗೆ ಸೇರಿದ ಪದಾರ್ಥಗಳು ಇವುಗಳನ್ನು ಸಂಸೃಷ್ಟಗಳೆಂದು ಕರೆದಿದ್ದಾರೆ.

ಅದು ಸರಿ, ಇಪತ್ತನಾಲ್ಕು ತತ್ತ್ವಗಳನ್ನು ಅಸಂಸೃಷ್ಟವೆಂದು ಹೇಳಲಾಗಿದೆ. ಹಾಗೆಂದರೆ; ಅವು ಕೆಲವಂಶದಲ್ಲಿ ಉತ್ಪತ್ತಿಯನ್ನು ಹೊಂದುತ್ತವೆ ಎಂದು ಹೇಳುವುದಾದರೆ ಉತ್ಪತ್ತಿಯಾಗದೆ ಉಳಿದ ವಸ್ತುಗಳು ಅಸತ್ತು ಎನಿಸುತ್ತವೆ. ಆದುದರಿಂದ ಉತ್ಪನ್ನವಾದ ವಸ್ತುಗಳೇ ತತ್ತ್ವಗಳಾಗಲಿ ಎಂದು ಹೇಳಬೇಕಾಗುತ್ತದೆ. ಆಗ ಆ ಉತ್ಪನ್ನವಸ್ತುಗಳೇ ಸಂಸೃಷ್ಟಗಳೆಂದು ಹೇಳಲ್ಪಡುತ್ತವೆ. ಹಾಗೆ ಹೇಳಿದರೆ ಅವುಗಳಲ್ಲಿ ಎರಡೇ ವಿಧಗಳಿವೆ ಎಂದಾಗಲಿ, ಬೇರೆ ಪ್ರಕಾರವಿದೆ ಎಂದಾಗಲಿ ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ, ಎಂದರೆ;

Rarest Archiver

ಈ ಹೇಳಿಕೆಯು ಸಾಧುವಲ್ಲ. ಏಕೆಂದರೆ; ಮಹದಾದಿಗಳು ಸೂಕ್ಷ್ಮರೂಪದಿಂದ ನಿತ್ಯವಸ್ತುಗಳೆನಿಸಿವೆ. ಅವು ಪ್ರಕೃತಿ ಮುಂತಾದವುಗಳ ಅಂಶಗಳೊಡನೆ ಬೆರೆತು ಅಭಿವೃದ್ಧಿಯನ್ನು ಮಾತ್ರ ಪಡೆಯುತ್ತವೆ. ಹಾಗೆ ಬೆಳವಣಿಗೆ ಹೊಂದಿದ ಅವುಗಳನ್ನು ಅಸಂಸೃಷ್ಟಗಳು ಎನ್ನುತ್ತಾರೆ.

ಸರಿ, ಬ್ರಹ್ಮಾಂಡ ಮತ್ತು ಅದರೊಳಗಿನ ವಸ್ತುಗಳ ಮೂಲ ರೂಪಗಳೂ ಸಹ ನಿತ್ಯವಾದುದರಿಂದ ಅವುಗಳನ್ನು ಅಸಂಸೃಷ್ಟಗಳೆಂದು ಏಕೆ ಹೇಳಬಾರದು ? ಎಂದರೆ;

ಇಲ್ಲಿ ಸಾಕ್ಷಾತ್ತಾಗಿ ಮೂಲರೂಪವೆಂಬುದನ್ನು ಅಭಿಪ್ರಾಯಪಟ್ಟಿದ್ದೇವೆಯೆ ಹೊರತು ಪರಂಪರೆಯ ಮೂಲ ರೂಪಗಳನ್ನಲ್ಲ. ಆದುದರಿಂದ ಅವುಗಳನ್ನು ಅಸಂಸೃಷ್ಟಗಳೆಂದು ಹೇಳುವುದಕ್ಕಾಗುವುದಿಲ್ಲ.

ಹೀಗಾದರೆ ಮಹತ್ತತ್ತ್ವ ಮುಂತಾದವುಗಳನ್ನು ನಿತ್ಯಾನಿತ್ಯವಸ್ತುಗಳು ಎಂದು ಏಕೆ ಹೇಳಬಾರದು ? ಎಂದರೆ;

ಅವುಗಳ ಸೂಕ್ಷ್ಮರೂಪಗಳಿಗೆ ಮಹತ್ತತ್ತ್ವ ಮುಂತಾದ ವ್ಯವಹಾರವು ಇದ್ದ ಪಕ್ಷದಲ್ಲಿ ಹಾಗೆ ಹೇಳಬಹುದಾಗಿತ್ತು. ಆದರೆ ಅವುಗಳಿಗೆ ಹಾಗೆ ವ್ಯವಹಾರವಿಲ್ಲ. ಅದನ್ನು ಪ್ರಕೃತಿ ಎಂದು ಮಾತ್ರ ಕರೆಯುವರು.

ಕೆಲವು ದಾರ್ಶನಿಕರು ಮಹದಾದಿಗಳ ಸ್ವರೂಪವನ್ನು ಒಡಂಬಡುವುದಿಲ್ಲ. ದೂರದಲ್ಲಿ ಹೇಳಿದ ಅವರ ಮತದ ವಿಶೇಷವನ್ನೂ ಅವುಗಳಿಗೆ ಅತಿ ಪುಷ್ಕಳವಾಗಿ ಬರುವ ಆಗಮ ವಿರೋಧವನ್ನೂ ಸಹ ಪ್ರದರ್ಶಿಸಲು ಮೂಲದಲ್ಲಿ 'ಸಂಪ್ರಕೀರ್ತಿತಂ' ಎಂದಿದ್ದಾರೆ. ವಿರೋಧಗಳನ್ನು ವ್ಯಕ್ತಗೊಳಿಸುವ ಆಗಮಗಳನ್ನು ಬೇರೆ ಬೇರೆ ಗ್ರಂಥಗಳಲ್ಲಿ ಉದಾಹರಿಸಲಾಗಿದೆ ಎಂಬುದನ್ನೂ ಮನಗಾಣಬೇಕು. ಈ ಗ್ರಂಥವು ಬಲು ವಿಸ್ತಾರವಾಗಬಾರದೆಂಬ ಅಭಿಪ್ರಾಯದಿಂದ ಅವನ್ನು ಇಲ್ಲಿ ಉದಾಹರಿಸಲಾಗುವುದಿಲ್ಲ.

ಭಾವದೀಪ—

ಅನ್ಯತ್ರೇತಿ । ತತ್ತ್ವವಿವೇಕಾದೌ ।

ವಕ್ಷ್ಯಾಮ ಇತಿ । ಸೂಕ್ಷ್ಮರೂಪೇಣೇತ್ಯಾದಿನೇತಿ ಭಾವಃ ।

ಸಾಕ್ಷಾನ್ಮೂಲರೂಪಸ್ಯೇತಿ । ತಸ್ಯೈವೋಪಚಿತತ್ವಾದಿತಿ ಭಾವಃ ।

ಕೇಚಿದಿತಿ । ತಾರ್ಕಿಕಾದಯಃ । ಉಕ್ತವಿಶೇಷಮ್ – ಅಸಂಸೃಷ್ಟತ್ವಾದಿಕಮ್ । ಉಪಸರ್ಗದ್ವಯಾರ್ಥೋ ಬಹುತರೇತಿ । ಅನ್ಯತ್ರೇತಿ ।

''ಪಂಚಭಿಃ ಪಂಚಭಿರ್ಬ್ರಹ್ಮ ಚತುರ್ಭಿರ್ದಶಭಿಸ್ತಥಾ ।
ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುಃ ॥''

ಇತ್ಯಾದ್ಯನುವ್ಯಾಖ್ಯಾನಾದಾವಿತ್ಯರ್ಥಃ ।

ಆಯತ್ತಮಿತಿ । ಅಧೀನತಯಾ ಆಸ್ತ ಇತ್ಯರ್ಥಃ ॥ ವಿಷಯ ಇತಿ । ಆಯತ್ತಮಿತ್ಯನುಷಂಗಃ । ಸೃಷ್ಟ್ಯಾದೇಃ ಪ್ರಸಿದ್ಧತ್ವಾತ್ ಅನ್ಯೇಷಾಮರ್ಥಮಾಹ ನಿಯಮ ಇತಿ ।

Rarest Archiver

ಅನ್ಯತೇತಿ— ತತ್ತ್ವವಿವೇಕಾದಿ ಗ್ರಂಥಗಳಲ್ಲಿ ಆ ಆಗಮಗಳನ್ನು ಹೇಳಲಾಗಿವೆ ಎಂದರ್ಥ.

ವಕ್ಷ್ಯಾಮ ಇತಿ— ಸೂಕ್ಷ್ಮರೂಪದಿಂದ ನಿತ್ಯವಾದ ಮಹದಾದಿಗಳು ಪ್ರಕೃತ್ಯಾದ್ಯಂಶಗಳಿಂದ ಅಭಿವೃದ್ಧಿ ಹೊಂದುವುದು ಮಾತ್ರವೆ ಎಂಬ ಕ್ರಮದಿಂದ ಮುಂದೆ ಹೇಳಲಿದ್ದೇವೆ ಎಂದರ್ಥ.

ಸಾಕ್ಷಾನ್ಮೂಲರೂಪಸ್ಯೇತಿ— ಬ್ರಹ್ಮಾಂಡ ಅದರೊಳಗಿನ ವಸ್ತುಗಳು ಸಂಸೃಷ್ಟವೆನಿಸಿದ್ದರೂ ಅವುಗಳ ಮೂಲ-ರೂಪ ನಿತ್ಯವಾದುದು ಎಂಬ ಆಕ್ಷೇಪ ಬಂದರೆ, ಅವುಗಳ ಸಾಕ್ಷಾನ್ಮೂಲರೂಪ ನಿತ್ಯವೇ ಹೊರತು ಪರಂಪರೆಯ ಮೂಲರೂಪವು ಅಭಿವೃದ್ಧಿಗೊಂಡಿರುವುದರಿಂದ ಅನಿತ್ಯವೆಂದು ಹೇಳಬೇಕು ಎಂದರ್ಥ.

ಕೇಚಿತ್— ಕೆಲವು ತಾರ್ಕಿಕ ಮುಂತಾದವರು ಮಹದಾದಿ ಸ್ವರೂಪವನ್ನು ಒಪ್ಪಿಕೊಳ್ಳುವುದಿಲ್ಲ ಎಂದರ್ಥ.

ಉಕ್ತಂ ವಿಶೇಷಂ— ಮಹತ್ತತ್ತ್ವ, ಅಹಂಕಾರತತ್ತ್ವ, ಮುಂತಾದ ಅಸಂಸೃಷ್ಟಗಳಲ್ಲಿ ವಿಶೇಷ ಹೇಳಲಾಗಿದೆ ಎಂದರ್ಥ. ''ಸಂಪ್ರಕೀರ್ತಿತಂ'' ಎಂಬಲ್ಲಿ ಸಂ, ಪ್ರ, ಎಂಬ ಎರಡು ಉಪಸರ್ಗಗಳನ್ನು ಹೇಳಲಾಗಿದೆ. ಅದಕ್ಕೆ ಬಹುತರ ಆಗಮಗಳ ವಿರೋಧವನ್ನು ತೋರಿಸಲಾಗಿದೆ ಎಂಬ ಅರ್ಥವನ್ನು ಸೂಚಿಸುವುದು ಪ್ರಯೋಜನ.

ಅನ್ಯತ್ರೇತಿ— ಐದರಿಂದ, ಮತ್ತೆ ಐದರಿಂದ, ನಾಲ್ಕರಿಂದ, ಮತ್ತೆ ಹತ್ತರಿಂದ ಹೀಗೆ ಒಟ್ಟುಗೂಡಿ ಇಪ್ಪತ್ತನಾಲ್ಕು ತತ್ತ್ವಗಳ ಸಮೂಹವಾಗುತ್ತದೆ. ಅದು ಅತ್ಯಂತ ಪ್ರಧಾನವೆಂದು ತಿಳಿದಿದ್ದಾರೆ. ಎಂದು ಅನುವ್ಯಾಖ್ಯಾನ ಮುಂತಾದ ಗ್ರಂಥಗಳಲ್ಲಿ ತಿಳಿಸಿದ್ದಾರೆ ಎಂದರ್ಥ.

ನೆಲ, ನೀರು, ಬೆಂಕಿ, ಗಾಳಿ, ಬಯಲುಗಳೆಂಬ ಐದು ತತ್ತ್ವಗಳು. ಅವುಗಳ ಮಾತ್ರಾಗಳು ಐದು. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ಐದು ಜ್ಞಾನೇಂದ್ರಿಯಗಳು; ಕೈ, ಕಾಲು, ಬಾಯಿ, ಪಾಯು, ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳು; ಮಹತ್ತತ್ತ್ವ, ಅಹಂಕಾರತತ್ತ್ವ, ಬುದ್ಧಿತತ್ತ್ವ, ಮನಸ್ತತ್ತ್ವಗಳೆಂಬ ನಾಲ್ಕು, ಇವು ಒಟ್ಟುಗೂಡಿ ಇಪ್ಪತ್ತನಾಲ್ಕು ತತ್ತ್ವಗಳಾದವು.

ಆಯತ್ತಮಿತಿ— ಇವು ವಿಷ್ಣುವಿಗೆ ಅಧೀನವಾಗಿರುತ್ತವೆ ಎಂದರ್ಥ.

ವಿಷಯಃ ಇತಿ— ಇಲ್ಲಿಯೂ ವಿಷ್ಣುವಿಗೆ ಅಧೀನವಾಗಿವೆ ಎಂದು ಅನ್ವಯಿಸಿಕೊಳ್ಳಬೇಕು.

ನಿಯಮ ಇತಿ— ಸೃಷ್ಟಿ ಮುಂತಾದ ಪದಗಳ ಅರ್ಥವು ಪ್ರಸಿದ್ಧವಾದುದರಿಂದ ನಿಯಮ ಮುಂತಾದ ಪದಗಳ ಅರ್ಥವನ್ನು ತಿಳಿಸುವರು. ಇಲ್ಲಿ ಸೃಷ್ಟಿಪದದಿಂದ ಸೃಷ್ಟಿಕರ್ತನಲ್ಲಿ ನೆಲೆಸಿದ ವ್ಯಾಪಾರವನ್ನು ಸೂಚಿಸುವ ಜಗತ್ತಿನೊಳಗೆ ನೆಲೆಸಿರುವ ಉತ್ಪತ್ತಿ ಎಂದು ಮನಗಾಣಬೇಕು. ಸ್ಥಿತಿ— ಅನ್ನದಾನ, ಜೀವದಾನ, ಮುಂತಾದವುಗಳ ಮೂಲಕ ಪೊರೆಯುವುದು. ಸಂಹೃತಿ— ಧ್ವಂಸಗೊಳಿಸುವುದು. ಸಮಸ್ತಸ್ಯ— ಪೂರ್ವದಲ್ಲಿ ಹೇಳಿದ ಮಾತಿಗೆ ವಿರೋಧ ಬರುವುದು ಎಂಬುದನ್ನು ಸ್ಪಷ್ಟಗೊಳಿಸುತ್ತಾರೆ ಎಂದರ್ಥ.

ಟೀಕಾ—

ಯದಿದಂ ವಿಷ್ಣುವ್ಯತಿರಿಕ್ತಂ ಭಾವಾಭಾವಾದಿಭೇದಭಿನ್ನಂ ಜಗತ್ ಅಸ್ವತಂತ್ರಂ ತರ್ಹಿ ಕಸ್ಮಿನ್ನಾಯತ್ತಮ್ ? ಕಸ್ಮಿಂಶ್ಚ ವಿಷಯೇ ? ಇತ್ಯಾಕಾಂಕ್ಷಾಯಾಮಾಹ—

Rarest Archiver

"ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ನಿಯಮೋಽಜ್ಞಾನಬೋಧನೇ ॥ 11 ॥
ಬಂಧೋ ಮೋಕ್ಷಃ ಸುಖಂ ದುಃಖಮಾವೃತಿರ್ಜ್ಯೋತಿರೇವ ಚ ।
ವಿಷ್ಣುನಾಽಸ್ಯ ಸಮಸ್ತಸ್ಯ ಸಮಾಸವ್ಯಾಸಯೋಗತಃ ॥ 12 ॥"

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಂ
ತತ್ತ್ವಸಂಖ್ಯಾನಂ ಸಂಪೂರ್ಣಮ್ ॥

ನಿಯಮೋ ವ್ಯಾಪಾರೇಷು ಪ್ರೇರಣಮ್ । ಬಂಧಃ ಪ್ರಕೃತೇಃ । ಮೋಕ್ಷೋ ಬಂಧಾತ್ । ಆವೃತಿರ್ಜ್ಯೋತಿಷೀ ಬಾಹ್ಯತಮಃ ಪ್ರಕಾಶೌ । ಏವಕಾರೋ ವಿಷ್ಣುನೇತ್ಯನೇನ ಸಂಬಧ್ಯತೇ । ಅಸ್ಯ ಸಮಸ್ತಸ್ಯಾಸ್ವತಂತ್ರಸ್ಯ ಭವತೀತಿ ಶೇಷಃ ।

ನನ್ವೇತತ್ಪೂರ್ವವಿರುದ್ಧಮ್ । ಸಮಸ್ತಸ್ಯ ಸೃಷ್ಟಿಸಂಹಾರೋಕ್ತೌ ನಿತ್ಯತ್ವೋಕ್ತಿವಿರೋಧಃ । ಅಚೇತನಸ್ಯ ಬೋಧವಿರೋಧ ಇತ್ಯಾದಿ । ತತ್ರೋಕ್ತಂ ಸಮಾಸೇತಿ । ಸಮಾಸಃ ಸಂಕ್ಷೇಪಃ । ವ್ಯಾಸೋ ವಿಸ್ತಾರಃ । ತಾವೇವ ಯೋಗಾವುಪಾಯಾವುಕ್ತಾರ್ಥಘಟನಾಯಾಮ್, ತತಃ । ಇದಮುಕ್ತಂ ಭವತಿ । ಉಕ್ತಧರ್ಮೇಷು ಯತ್ರ ತತ್ತ್ವೇಽಲ್ಪೀಯಾಂಸಃ ಸಂಭವಂತಿ ತತ್ರ ತಾವಂತೋ ವಿಷ್ಣ್ವಧೀನಾ ಜ್ಞಾತವ್ಯಾಃ । ಯತ್ರ ಬಹವಸ್ತತ್ರ ತಾವಂತಃ । ಸರ್ವಥಾ ಸ್ವರೂಪಸ್ವಭಾವಾವಸ್ಯ ತದಧೀನಾವಿತಿ । ತತ್ರ ಸ್ಥಿತಿನಿಯಮೌ ಸರ್ವಸ್ಯ । ಸೃಷ್ಟಿಸಂಹೃತೀ ನಿತ್ಯಾನಿತ್ಯಸ್ಯ ಅನಿತ್ಯಸ್ಯ ಚ । ಅಜ್ಞಾನಂ ಭಾವರೂಪಂ ದುಃಖಸ್ಪೃಷ್ಟಸ್ಯ । ಜ್ಞಾನಾಭಾವಸ್ತು ಸರ್ವಸ್ಯ । ಬೋಧನಂ ಚೇತನಸ್ಯ । ಸುಖಂ ಪ್ರಾಪ್ತತಮಸೋ ವಿನಾ । ದುಃಖಂ ದುಃಖಾಸ್ಪೃಷ್ಟಂ ವಿನೇತ್ಯಾದಿ ದ್ರಷ್ಟವ್ಯಮ್ । ಪದಾರ್ಥಾನಾಂ ಸೃಷ್ಟ್ಯಾದ್ಯನ್ಯತೋಽಪಿ ಪ್ರತೀಯತೇ ಅತ ಏವೇತ್ಯುಕ್ತಮ್ । ಸಕಲಸತ್ತಾದೇಸ್ತದಧೀನತ್ವಾತ್ ತತ್ತದ್ವಸ್ತು ನಿಮಿತ್ತ-ಮಾತ್ರಮೇವ । ಸ್ವಾತಂತ್ರ್ಯೇಣ ವಿಷ್ಣುರೇವಾಸ್ಯೇಶ್ವರ ಇತಿ ॥

ಪದ್ಮಾಪದ್ಮಾಸನಾನಂತಪ್ರಭೃತೀದಂ ಯದಿಚ್ಛಯಾ ।
ಸತ್ತಾದಿ ಲಭತೇ ದೇವಃ ಪ್ರೀಯತಾಂ ಶ್ರೀಪತಿಃ ಸ ಮೇ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತತತ್ತ್ವಸಂಖ್ಯಾನವಿವರಣಂ
ಶ್ರೀಜಯತೀರ್ಥಭಿಕ್ಷುವಿರಚಿತಂ ಸಂಪೂರ್ಣಮ್ ॥

ಇನ್ನು ವಿಷ್ಣುವಿಗೆ ಹೊರತಾದ ಭಾವ, ಅಭಾವಗಳೆಂಬ ಭೇದದಿಂದ ವಿಭಾಗಗೊಂಡ ಈ ಜಗತ್ತು ಅಸ್ವತಂತ್ರ-ವಾಗಿರುವುದಾದರೆ ಅದು ಯಾರ ಅಧೀನಕ್ಕೆ ಒಳಪಟ್ಟಿದೆ ? ಮತ್ತು ಯಾರ ವಿಷಯಕ್ಕೆ ಒಳಗೊಂಡಿದೆ ? ಎಂಬ ಪ್ರಶ್ನೆಗಳು ಉದ್ಭವಿಸಿದರೆ, ಹೀಗೆ ಹೇಳಿದ್ದಾರೆ.

ಸೃಷ್ಟಿ, ಸ್ಥಿತಿ, ಸಂಹಾರ, ನಿಯಮ, ಅಜ್ಞಾನ, ಬೋಧನ, ಬಂಧ, ಮೋಕ್ಷ, ಸುಖ, ದುಃಖ, ಆವೃತಿ, ಜ್ಯೋತಿ, ಇವೆಲ್ಲವೂ ಸಮಸ್ತ ಜಗತ್ತಿಗೂ ವಿಷ್ಣುವಿನಿಂದಲೇ ಸಂಕ್ಷೇಪ ಅಥವಾ ವಿಸ್ತಾರದ ಮೂಲಕ ಯಥಾಯೋಗ್ಯವಾಗಿ ಒದಗಿ ಬರುತ್ತವೆ.

Rarest Archiver

ಜೀವವನ್ನು ಕಾರ್ಯಚಟುವಟಿಕೆಗೆ ತೊಡಗುವಂತೆ ಮಾಡುವುದು ನಿಯಮ. ಪ್ರಕೃತಿಯಿಂದ ಸೆರೆ ಹಿಡಿಯುವುದು ಬಂಧ. ಪ್ರಕೃತಿಯ ಕಟ್ಟಳೆಯ ಬಿಡುಗಡೆಯೆ ಮೋಕ್ಷ. ಹೊರಗಣ ಕತ್ತಲೆಯೆ ಆವೃತಿ. ಜ್ಯೋತಿಯೆಂಬುದು ಹೊರಗಿನ ಪ್ರಕಾಶ.

ಮೂಲದಲ್ಲಿನ ಏವಕಾರವನ್ನು ವಿಷ್ಣುನಾ ಎಂಬ ಪದದ ತೃತೀಯಾ ವಿಭಕ್ತಿಯೊಡನೆ ಅನ್ವಯಿಸಿಕೊಳ್ಳಬೇಕು. ಆಗ ವಿಷ್ಣುವಿನಿಂದ ಮಾತ್ರ ಇವು ನೆರವೇರುತ್ತವೆ. ಇತರರಿಂದ ಅಲ್ಲ. ಎಂಬ ನಿರ್ಧಾರಣ ಮತ್ತು ಅನ್ಯವ್ಯವಚ್ಛೇದಗಳಿಂದ ಈ ಅರ್ಥ ಸಿದ್ಧಿಸುತ್ತದೆ. ಉಳಿದ ಅರ್ಥವು ಇವೆಲ್ಲವೂ ಈ ಸಮಸ್ತ ಅಸ್ವತಂತ್ರ ಜಗತ್ತಿಗೆ ಒದಗಿ ಬರುತ್ತವೆ ಎಂದು ಫಲಿಸುತ್ತವೆ.

ಹಾಗಾದರೆ ಇವೆಲ್ಲವೂ ಪೂರ್ವದ ಹೇಳಿಕೆಗೆ ವಿರುದ್ಧ. ಏಕೆಂದರೆ; ಸಮಸ್ತ ಜಗತ್ತಿಗೂ ಸೃಷ್ಟಿ ಸಂಹಾರಗಳಿವೆ ಎಂದರೆ; ಅವು ನಿತ್ಯ ಎಂಬ ಮಾತಿಗೆ ವಿರೋಧ. ಅಚೇತನ ವಸ್ತುವಿಗೆ ಬೋಧವಿದೆ ಎಂದರೆ; ಅದೂ ವಿರೋಧ ಎಂದು ಮುಂತಾದ ದೋಷಗಳು ಹತ್ತುತ್ತವೆ.

ಎಂದರೆ; ಅದಕ್ಕಾಗಿಯೆ ಮೂಲದಲ್ಲಿ ಸಮಾಸ ವ್ಯಾಸಗಳೆಂಬ ಪದಗಳನ್ನು ಹೇಳಲಾಗಿದೆ. ಸಮಾಸವೆಂದರೆ ಸಂಕ್ಷೇಪ. ವ್ಯಾಸವೆಂದರೆ ವಿಸ್ತಾರ. ಇವೆರಡೂ ಪೂರ್ವದ ಹೇಳಿಕೆಯನ್ನು ಸಮಂಜಸಗೊಳಿಸಲು ಉಪಾಯಗಳಾಗಿವೆ.

ಇದರಿಂದ ಹೀಗೆ ಹೇಳಿದಂತಾಗುತ್ತದೆ.

ಈ ಮುಂಚೆ ನಿರೂಪಿಸಿದ ಸೃಷ್ಟಿ ಮುಂತಾದ ಧರ್ಮಗಳ ಪೈಕಿ ಯಾವ ತತ್ತ್ವದಲ್ಲಿ ಕಡಿಮೆ ಪ್ರಮಾಣದಿಂದ ಒದಗಿ ಬರುತ್ತವೆಯೊ ಅವೆಲ್ಲವೂ ವಿಷ್ಣುವಿಗೇ ಅಧೀನವಾಗಿವೆಯೆಂದು ಮನಗಾಣಬೇಕು ಮತ್ತು ಎಷ್ಟು ಅಧಿಕ ಪ್ರಮಾಣದಲ್ಲಿ ಯಾವ ತತ್ತ್ವಕ್ಕೆ ಅವು ಒದಗಿ ಬರುತ್ತವೆಯೊ ಅವು ಸಹ ವಿಷ್ಣುವಿಗೇ ಅಧೀನವೆಂದು ಗಮನಿಸಬೇಕು. ಹೀಗೆ ಹೇಳಿದ್ದರಿಂದ ಅವುಗಳ ಸ್ವರೂಪ ಮತ್ತು ಸ್ವಭಾವಗಳು ಸರ್ವಥಾ ವಿಷ್ಣುವಿಗೇ ಅಧೀನವಾಗಿವೆ ಎಂಬುದು ಸಿದ್ಧಿಸಿತು.

ಅವುಗಳಲ್ಲಿ ಸ್ಥಿತಿ ಮತ್ತು ನಿಯಮಗಳು ಎಲ್ಲ ವಸ್ತುಗಳಿಗೂ ಸೃಷ್ಟಿ-ಸಂಹಾರಗಳು ನಿತ್ಯಾನಿತ್ಯ ಮತ್ತು ಅನಿತ್ಯ ವಸ್ತುಗಳಿಗೂ, ಭಾವರೂಪದ ಅಜ್ಞಾನವು ದುಃಖಸ್ಪೃಷ್ಟ ವಸ್ತುವಿಗೂ, ಜ್ಞಾನದ ಅಭಾವವೆಂಬುದು ಎಲ್ಲ ವಸ್ತುಗಳಿಗೂ, ಬೋಧನವು ಚೇತನ ವಸ್ತುವಿಗೂ ಉಂಟಾಗುವುವು. ಅಲ್ಲದೆ ತಮಸ್ಸನ್ನು ಹೊಂದಿದವರನ್ನು ಬಿಟ್ಟು ಮಿಕ್ಕವರಿಗೆ ಸುಖವೂ, ದುಃಖಾಸ್ಪೃಷ್ಟರನ್ನು ಬಿಟ್ಟು ಮಿಕ್ಕವರಿಗೆ ದುಃಖವೂ, ಉಂಟಾಗುವವು ಎಂಬ ಕ್ರಮದಲ್ಲಿ ಈ ಪ್ರಮೇಯಗಳನ್ನು ಮನಗಾಣಬೇಕು.

ಇನ್ನು ಸೃಷ್ಟಿ ಮುಂತಾದವುಗಳಲ್ಲದೆ ಬೇರೆ ಧರ್ಮಗಳು ಜಗತ್ತಿಗೆ ಒದಗುತ್ತದೆಯೊ ? ಎಂದರೆ;

ಅದಕ್ಕೆ ಅವಕಾಶವೇ ಇಲ್ಲವೆಂಬುದನ್ನು ಮೂಲದಲ್ಲಿ ಏವಕಾರವನ್ನು ಪ್ರಯೋಗಿಸಿ ತಿಳಿಸಿದ್ದಾರೆ. ಸರ್ವ ವಸ್ತುಗಳ ಇರುವಿಕೆ ಮುಂತಾದವು ವಿಷ್ಣುವಿನ ಅಧೀನವಾಗಿರುವುದರಿಂದ ಆಯಾ ವಸ್ತುಗಳಿಗೆ ಅವನೇ ನಿಮಿತ್ತ ಕಾರಣ. ಅವು ನೆಪಮಾತ್ರಕ್ಕೆ ಇರುವುವೆಂಬುದನ್ನು ದೃಢವಾಗಿ ನಂಬಬೇಕು. ಅವನು ಸ್ವತಂತ್ರನಾದುದರಿಂದ ಸರ್ವಕ್ಕೂ ಅವನೇ ಈಶ್ವರ ಎಂಬ ಮಹಾಪ್ರಮೇಯವು ಫಲಿಸಿತು.

Rarest Archiver

ಉತ್ತರಮಂಗಳ

ರಮಾದೇವಿ, ಬ್ರಹ್ಮದೇವರು, ಶೇಷದೇವರು, ಮುಂತಾದ ಸಮಸ್ತ ಈ ಜಗತ್ತು ಯಾರ ಇಚ್ಛೆಯಿಂದ ಇರುವಿಕೆ ಮುಂತಾದುವನ್ನು ಪಡೆಯುವುದೊ, ಕ್ರೀಡಾದಿಗುಣಭರಿತನಾದ ಆ ಸಿರಿರಮಣನು ನನ್ನಲ್ಲಿ ಸಂತುಷ್ಟನಾಗಲಿ.

ಇಂತು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ವಿರಚಿತವಾದ ತತ್ತ್ವಸಂಖ್ಯಾನಕ್ಕೆ
ಶ್ರೀಜಯತೀರ್ಥಮುನಿಗಳಿಂದ ವಿರಚಿತವಾದ ವಿವರಣಕ್ಕೆ
ಕನ್ನಡಾನುವಾದವು ಮುಗಿದುದಕ್ಕೆ ಮಂಗಳಂ.

ಭಾವದೀಪ—

ಇತ್ಯಾದೀತಿ । ಅಚೇತನಸ್ಯ ಬಂಧಮೋಕ್ಷಸುಖದುಃಖಾಜ್ಞಾನವಿರೋಧ ಇತ್ಯಾದಿಪದಾರ್ಥಃ । ಮೋಕ್ಷೋ ಬದ್ಧಸ್ಯ । ಇತ್ಯಾದಿದ್ರಷ್ಟವ್ಯಮಿತಿ । ಆವೃತಿಜ್ಯೋತಿಷೀ ಸರ್ವಸ್ಯೇತ್ಯಾದಿಪದಾರ್ಥಃ ॥ ಅನ್ಯತೋಽಪೀತಿ । ಬ್ರಹ್ಮಾದಿತೋಽಪೀತ್ಯರ್ಥಃ ॥ ತತ್ತದ್ವಸ್ಥಿತಿ । ಬ್ರಹ್ಮಾದಿವಸ್ಥಿತ್ಯರ್ಥಃ । ಯದ್ವಾ ದೇಶಕಾಲಾದಿವಸ್ಥಿತ್ಯರ್ಥಃ । ಇತ್ಯಂತೇನ ತಾತ್ಪರ್ಯೋಕ್ತಿಃ ।

ಅಸ್ಯ ಸಮಸ್ತಸ್ಯೇತಿ ಮೂಲಸ್ಥೇದಂಶಬ್ದಾರ್ಥಂ ವಿವೃಣ್ವನ್ ಜಗದುಪಾದಾನತಯಾ ಸರ್ವಸ್ಯ ಜನ್ಮಾದಿಕರ್ತೃತ್ವಭ್ರಮಂ ವಾರಯನ್ ತತ್ಪ್ರೀತಿಂ ಪ್ರಾರ್ಥಯತೇ ಪದ್ಮೇತಿ । ಪದ್ಮಾಸನೋ ಬ್ರಹ್ಮಾ । ಯದಿಚ್ಛಯೇತ್ಯನೇನೋಪಾದಾನತ್ವನಿರಾಸಃ । ಅನಾಯಾಸಸಾಧ್ಯತ್ವಂ ಚ ಸೂಚ್ಯತೇ । ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿರಿತ್ಯುಕ್ತೇಃ । ತೇನ ಫಲಾಭಾವೇಽಪಿ ಸೃಷ್ಟ್ಯಾದಿರ್ಯುಕ್ತಃ । ಆಯಾಸಸಾಧ್ಯಕರ್ಮಣಿ ಏವ ಫಲಾಪೇಕ್ಷಣಾದಿತ್ಯುಕ್ತಂ ಭವತಿ । ಮೂಲೋಕ್ತಸೃಷ್ಟಿಶಬ್ದಾರ್ಥಃ ಸತ್ತೇತಿ । ತೇನ ಸಾಪಿ ಸರ್ವವಿಷಯೇತಿ ಸೂಚಿತಮ್ । ದೇವ್ಯಾ ಅಪಿ ಪ್ರೀತಿಪ್ರಾರ್ಥನಾಲಾಭಾಯೋಕ್ತಂ ಶ್ರೀಪತಿರಿತಿ ॥

ತತ್ತ್ವಾಭಿಮಾನಿನೋ ದೇವಾಃ ಬ್ರಹ್ಮರುದ್ರಪುರಸ್ಸರಾಃ ।
ಯತ್ಪರೀವಾರತಾಮಾಪ್ತಾಸ್ತಂ ವಂದೇ ಕಮಲಾಪತಿಮ್ ॥

ಇತಿ ಶ್ರೀಮತ್ತತ್ತ್ವಸಂಖ್ಯಾನಟೀಕಾಭಾವದೀಪಃ ಶ್ರೀಸುಧೀಂದ್ರಶ್ರೀಪಾದಶಿಷ್ಯ-
ಶ್ರೀರಾಘವೇಂದ್ರಯತಿವಿರಚಿತಃ ಸಂಪೂರ್ಣಃ ॥

ಇತ್ಯಾದೀತಿ— ಅಚೇತನ ವಸ್ತುವಿಗೆ ಬಂಧ, ಮೋಕ್ಷ, ಸುಖ, ದುಃಖ, ಅಜ್ಞಾನ, ಮುಂತಾದವನ್ನು ಹೇಳುವುದು ವಿರುದ್ಧ ಎಂಬುದು ಆದಿಪದದ ಅರ್ಥ. ಬದ್ಧನಿಗೆ ಮೋಕ್ಷ ಇತ್ಯಾದಿಗಳನ್ನು ತಿಳಿಯಬೇಕು. ಆವೃತ್ತಿ— ಮುಚ್ಚಳದಿಂದ ಮರೆಯಾಗುವಿಕೆ, ಜ್ಯೋತಿಃ— ಬೆಳಕಾಗುವುದು. ಇಲ್ಲಿನ ಆದಿಪದಕ್ಕೆ ಆವೃತಿ ಜ್ಯೋತಿಗಳು ಸರ್ವಕ್ಕೂ ಉಂಟು ಎಂದರ್ಥ.

ಅನ್ಯತೋಽಪೀತಿ— ಬ್ರಹ್ಮ ಮುಂತಾದ ದೇವತೆಗಳಿಂದಲೂ ಪದಾರ್ಥಗಳಿಗೆ ಸೃಷ್ಟಿ ಮುಂತಾದವು ಒದಗುತ್ತವೆ ಎಂದರ್ಥ.

ತತ್ತದ್ವಸ್ಥಿತಿ— ಸರ್ವವಸ್ತುಗಳ ಇರುವಿಕೆ ಮೊದಲಾದವು ವಿಷ್ಣುವಿಗೆ ಅಧೀನವಾದುದರಿಂದ ಬ್ರಹ್ಮಾದಿ ದೇವತೆಗಳು ಕೇವಲ ನೆಪಮಾತ್ರ, ಎಂದರ್ಥ.

Rarest Archiver

ಅಥವಾ ಬ್ರಹ್ಮಾದಿದೇವತೆಗಳಲ್ಲದ ದೇಶ-ಕಾಲಾದಿವಸ್ತುಗಳೂ ಸಹ ಮುಖ್ಯವಾಗಿ ವಿಷ್ಣುವಿಗೇ ಅಧೀನ-ವಾದುದರಿಂದ ಅವುಗಳೂ ಕೇವಲ ನೆಪಮಾತ್ರ.

ಈ ಮೇಲೆ ವಿವರಿಸಿದ ಇತಿ ಎಂಬ ಗ್ರಂಥದ ಕೊನೆಯವರೆಗೂ ತಾತ್ಪರ್ಯವನ್ನು ವಿವರಿಸಿದ್ದಾಯಿತು.

ಶ್ರೀಮಟ್ಟೀಕಾಚಾರ್ಯರು ಮೂಲದಲ್ಲಿನ ''ಅಸ್ಯ ಸಮಸ್ತಸ್ಯ'' ಎಂಬಲ್ಲಿನ 'ಇದಂ' ಶಬ್ದದ ಅರ್ಥವನ್ನು ವಿವರಿ-ಸುವರು— ''ಪರಮಾತ್ಮನು ಜಗತ್ತಿಗೆ ಉಪಾದಾನ ಕಾರಣನಾಗಿ ಜನ್ಮಾದಿಗಳನ್ನು ಕೊಡುವನು'' ಎಂಬ ಭ್ರಾಂತಿಯನ್ನು ಕಳೆಯುವರು. ಪರಮಾತ್ಮನಿಗೆ ತಮ್ಮಲ್ಲಿ ಪ್ರೀತಿಯುಂಟಾಗಲು ಅವನನ್ನು ಪ್ರಾರ್ಥಿಸುವರು. ''ಪದ್ಮಾಪದ್ಮಾಸನಾನಂತ'' ಎಂಬ ಉಪಸಂಹಾರಪದ್ಯವು ಈ ಮೇಲಿನ ಅಭಿಪ್ರಾಯವನ್ನು ಸೂಚಿಸುತ್ತದೆ. ಪದ್ಮಾಸನ = ಬ್ರಹ್ಮದೇವರು, ಯದಿಚ್ಛಯಾ ಎಂಬ ಮಾತಿನಿಂದ ''ಪರಮಾತ್ಮನು ಉಪಾದಾನಕಾರಣನು'' ಎಂಬುದನ್ನು ನಿರಸನಗೊಳಿಸಲಾಗಿದೆ. ಮತ್ತು ಪರಮಾತ್ಮನು ನಿರಾಯಾಸವಾಗಿ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಮುಂತಾದವುಗಳನ್ನು ಮಾಡುವನು ಎಂಬುದು ಸೂಚಿತವಾಗುತ್ತದೆ. ''ಕೇವಲ ಇಚ್ಛೆಯೇ ಪರಮಾತ್ಮನ ಸೃಷ್ಟಿ'' ಎಂಬುದು ಇದಕ್ಕೆ ಪ್ರಮಾಣ. ಹೀಗೆ ಹೇಳಿದ್ದರಿಂದ ಅವನಿಗೆ ಪ್ರಯೋಜನವಿಲ್ಲದಿದ್ದರೂ ಸೃಷ್ಟ್ಯಾದಿಗಳನ್ನು ಮಾಡುವುದು ಯುಕ್ತ ಎಂಬುದು ಸಿದ್ಧವಾಯಿತು. ಫಲಾಪೇಕ್ಷೆ ಇದ್ದರೆ ಯಾವನಾದರೂ ಆಯಾಸಸಾಧ್ಯ ಕರ್ಮಗಳನ್ನು ಮಾಡಲು ಉದ್ಯುಕ್ತನಾಗುತ್ತಾನೆ. ಪರಮಾತ್ಮನು ಹಾಗಲ್ಲ. ಫಲಾಪೇಕ್ಷೆಯಿಲ್ಲದೆ ಲೀಲಾಜಾಲವಾಗಿ ಮಾಡುವನು ಎಂಬುದನ್ನು ಹೇಳಿದಂತಾಯಿತು. ಮೂಲದಲ್ಲಿನ ಸೃಷ್ಟಿ ಪದಕ್ಕೆ ''ಸತ್ತಾ'' ಎಂದರ್ಥ. ಆ ಸತ್ತೆಯು ಸರ್ವದರ ವಿಷಯವನ್ನು ಒಳಗೊಂಡಿದೆ. ಶ್ರೀಪತಿಃ ಎಂಬುದರಿಂದ ರಮಾ-ದೇವಿಯ ಕಾರುಣ್ಯವನ್ನು ಕೋರಲಾಗಿದೆ.

ಹೀಗೆ ಶ್ರೀಮಂತ್ರಾಲಯ ಶ್ರೀಪಾದಂಗಳವರು ತತ್ತ್ವಸಂಖ್ಯಾನಟೀಕೆಗೆ ಭಾವದೀಪವೆಂಬ ಟಿಪ್ಪಣಿಯನ್ನು ರಚಿಸಿ ಉಪಸಂಹಾರ ಮಂಗಳಪದ್ಯವನ್ನು ರಚಿಸಿದ್ದಾರೆ.

''ಬ್ರಹ್ಮರುದ್ರಾದಿ ದೇವತೆಗಳು ತತ್ತ್ವಾಭಿಮಾನಿ ದೇವತೆಗಳೆನಿಸಿದ್ದಾರೆ. ಅವರು ಶ್ರೀಹರಿಗೆ ಪರಿವಾರ ದೇವತೆ-ಗಳು. ಇಂತಹ ಸಿರಿತನದ ಕಮಲಾಪತಿಯಾದ ಶ್ರೀಹರಿಗೆ ವಂದಿಸುವೆನು''.

ತತ್ತ್ವಾಭಿಮಾನಿನೋ ದೇವಾಃ ಬ್ರಹ್ಮರುದ್ರಪುರಸ್ಸರಾಃ ।
ಯತ್ಪರೀವಾರತಾಮಾಪ್ತಾಸ್ತಂ ವಂದೇ ಕಮಲಾಪತಿಮ್ ॥

ಇಂತು ಶ್ರೀಸುಧೀಂದ್ರಶ್ರೀಪಾದಶಿಷ್ಯರಾದ ಶ್ರೀ ರಾಘವೇಂದ್ರಗುರುಸಾರ್ವಭೌಮರವರಿಂದ
ವಿರಚಿತವಾದ ಶ್ರೀಮತ್ತತ್ತ್ವಸಂಖ್ಯಾನಟೀಕಾಭಾವದೀಪವೆಂಬ ಟಿಪ್ಪಣಿಗೆ
ಕನ್ನಡಾನುವಾದವು ಮುಗಿದುದಕ್ಕೆ ಮಂಗಳಮ್.

★ ★ ★

Rarest Archiver

Rarest Archiver